


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 29 ಬುಧವಾರ 2025
46
ಸಂಪುಟ: 46 | ಸಂಚಿಕೆ: 191 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ರೈತನ ಬಲಿ ಪಡೆದ ಹುಲಿ ಸೆರೆ ಕಾರ್ಯಾಚರಣೆ ತಂಡಕ್ಕೆ ಸಿಕ್ಕು ಬೇರೊಂದು ಹುಲಿ

ಕೆಲ ದಿನಗಳಿಂದ ನಂ.ಗೂಡು ತಾಲೂಕು ವಿವಿಧ ಕಾಡಂಚಿನ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ ಹುಲಿ ಇದು

ಮೈಸೂರು, ಅ.28(ಎಂಟಿವೈ/ರಂಗಸ್ವಾಮಿ)– ರೈತನ ಬಲಿ ಪಡೆದ ಹುಲಿ ಸೆರೆ ಕಾರ್ಯಾಚರಣೆ ನಡುವೆ ಬೇರೊಂದು ಹುಲಿಯನ್ನು ಸೆರೆ ಹಿಡಿಯಲಾಗಿದೆ.

ಸರಗೂರು ತಾಲೂಕು, ಮುಳ್ಳೂರು ವ್ಯಾಪ್ತಿಯ ಬೆಣ್ಣೆಗೆರೆ ಗ್ರಾಮದ ಬಳಿ ಎರಡು ದಿನಗಳ ಹಿಂದೆ(ಅ.26) ಹೊಲದಲ್ಲಿ ದನ ಮೇಯಿಸುತ್ತಿದ್ದ ರೈತ ರಾಜಶೇಖರ್(54) ಅವರನ್ನು ಬಲಿ ಪಡೆದಿದ್ದ ಹುಲಿ ಸೆರೆಗೆ ವ್ಯಾಪಕ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಈ ವೇಳೆ ನಾಲ್ಕೈದು ಕಿ.ಮೀ. ದೂರದ ನಂಜನಗೂಡು ತಾಲೂಕು ವ್ಯಾಪ್ತಿಯ ಅಂಜನಾಪುರ ಗ್ರಾಮದಲ್ಲಿ ಸುಮಾರು ಎಂಟು ವರ್ಷದ ಹೆಣ್ಣು ಹುಲಿ ಮಂಗಳವಾರ ಸಂಜೆ ಸೆರೆ ಸಿಕ್ಕಿದೆ.

ಆತಂಕ ಸೃಷ್ಟಿಸಿದ್ದ ಹುಲಿ: ನಂಜನಗೂಡು ತಾಲೂಕು ಯಡಿಯಾಲ ಸಮೀಪದ ಈರೇಗೌಡನಹುಂಡಿ, ಮಹದೇವನಗರ ಸೇರಿದಂತೆ ಸುತ್ತಮುತ್ತಲ ಗ್ರಾಮದಲ್ಲಿ ಕೆಲ ದಿನಗಳಿಂದ ಸಂಚರಿಸುತ್ತಿದ್ದ ಹುಲಿ, ಕೂಂಬಿಂಗ್ ನಡೆಸುತ್ತಿದ್ದ ಅರಣ್ಯ ಇಲಾಖೆಯವರ ಡ್ರೋನ್ ಕ್ಯಾಮೆರಾದಲ್ಲೂ ಸೆರೆಯಾಗಿತ್ತು. ಈ ಹಿನ್ನೆಲೆಯಲ್ಲಿ ರೈತ ರಾಜಶೇಖರ್ ಅವರನ್ನು ಹತ್ಯೆ ಮಾಡಿದ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸುತ್ತಿದ್ದ ತಂಡವನ್ನೇ ಇಲ್ಲಿಗೆ ನಿಯೋಜಿಸಲಾಯಿತು. ಸಾಕಾನೆಗಳಾದ ಮಹೇಂದ್ರ, ಭೀಮಾ ಹಾಗೂ ರೋಹಿತನೊಂದಿಗೆ ಮೂವರು ಶೂಟರ್‌ಗಳು ಹಾಗೂ ಪಶುವೈದ್ಯರನ್ನು ಒಳಗೊಂಡ ತಂಡ, ಮಂಗಳವಾರ ಮಧ್ಯಾಹ್ನ 2 ಗಂಟೆಯಿಂದ ಮೂರ್‍ನಾಲ್ಕು ಗಂಟೆ ನಿರಂತರ ಕಾರ್ಯಾಚರಣೆ ನಡೆಸಿ, ಹುಲಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.



> ನುಗು ರೇಂಜ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ತಂಡವನ್ನು ಯಡಿಯಾಲ ಪ್ರದೇಶಕ್ಕೆ ವರ್ಗಾಯಿಸಲಾಗಿತ್ತು. ರೈತರ ಜಮೀನಿನಲ್ಲಿದ್ದ ಹುಲಿಯನ್ನು ಮೂರ್‍ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ, ಅರವಳಿಕೆ ನೀಡಿ ಅಂಜನಾಪುರ ಗ್ರಾಮದ ಬಳಿ ಸೆರೆ ಹಿಡಿಯಲಾಗಿದೆ. ನುಗು ಪ್ರದೇಶದಲ್ಲಿನ ಕಾರ್ಯಾಚರಣೆಯನ್ನು ಮುಂದುವರೆಸಲಾಗಿದೆ.
>
> -ಎಸ್.ಪ್ರಭಾಕರನ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಗ್ರಾಮಕ್ಕೆ ನುಗ್ಗಿದ ಹುಲಿ: ಕಾರ್ಯಾಚರಣೆ ವೇಳೆ ಹುಲಿ ಕಾಣಿಸಿಕೊಂಡ ಕೂಡಲೇ ಅರವಳಿಕೆ ಚುಚ್ಚುಮದ್ದು ಪ್ರಯೋಗಿಸಲಾಯಿತಾದರೂ ಹುಲಿ ತಪ್ಪಿಸಿಕೊಂಡು ಸ್ಥಳದಿಂದ ಕಾಲ್ಕಿತ್ತಿದೆ. ಎರಡನೇ ಪ್ರಯತ್ನವೂ ವಿಫಲವಾಗಿದ್ದು, ಹುಲಿ ಹೊಲ–ಗದ್ದೆಗಳ ಹಾಯ್ದು ಅಂಜನಾಪುರ ಗ್ರಾಮದ ಕಡೆಗೆ ಮುಖಮಾಡಿದೆ. ಕೂಡಲೇ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಜನರ ಸುರಕ್ಷತೆಗೆ ಕ್ರಮ ವಹಿಸಿದ್ದಾರೆ. ಧ್ವನಿವರ್ಧಕದಲ್ಲಿ ಘೋಷಣೆ ಮಾಡಿ, ಎಲ್ಲರೂ ಸುರಕ್ಷಿತ ಸ್ಥಳದಲ್ಲಿರುವಂತೆ ಮಾಹಿತಿ ನೀಡಿದ್ದಾರೆ. ನಂತರ ಮೂರನೇ ಬಾರಿ ಅರವಳಿಕೆ ಚುಚ್ಚುಮದ್ದು ಹುಲಿಗೆ ತಾಕಿದ್ದು, ಅದು ಮಂಪರಿನಲ್ಲಿ ಗ್ರಾಮದತ್ತ ಹೆಜ್ಜೆ ಹಾಕಿದೆ. ಅದನ್ನು ಹಿಂಬಾಲಿಸಿದ್ದು, ಹುಲಿ ಅಂಜನಾಪುರ ಗ್ರಾಮದ ಮೊದಲ ಮನೆ ಬಳಿಯೇ ಕುಸಿದು ಬಿದ್ದಿದೆ ಕೂಡಲೇ ಅದನ್ನು ಬೋನ್‌ನಲ್ಲಿಟ್ಟು ಪ್ರಥಮ ಚಿಕಿತ್ಸೆ ನೀಡಿ, ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ.

ಮುಂದುವರೆದ ಕಾರ್ಯಾಚರಣೆ: ಯಡಿಯಾಲ ಪ್ರದೇಶದಲ್ಲಿ ಹುಲಿ ಸೆರೆ ಕಾರ್ಯಾಚರಣೆ ಯಶಸ್ವಿಯಾದ ಬಳಿಕ ಮೂರು ಆನೆಗಳ ಸಹಾಯದೊಂದಿಗೆ ರೈತ ರಾಜಶೇಖರ ಅವರನ್ನು ಹತ್ಯೆ ಮಾಡಿದ ಹುಲಿ ಸೆರೆಗೆ ನುಗು ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರೆಸಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಹಾಗೂ ಹೆಡಿಯಾಲ ಎಸಿಎಫ್ ಡಿ.ಪರಮೇಶ್ ಉಸ್ತುವಾರಿಯಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಡಾ.ರಮೇಶ್ ಸೇರಿದಂತೆ ಪಶುವೈದ್ಯರು, ಗುರಿಕಾರ ರಂಜನ್(ಡಿಸಿಎಫ್) ಸೇರಿದಂತೆ ಶೂಟರ್‌ಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದಾರೆ.

ಭಯ ಸೃಷ್ಟಿಸಿರುವ ಹುಲಿ: ಇತ್ತೀಚೆಗೆ ಮೈಸೂರು ಭಾಗದಲ್ಲಿ ಹುಲಿ ಸಂಚಾರ ಹೆಚ್ಚಿದ್ದು, ಭಯಭೀತ ವಾತಾವರಣ ಸೃಷ್ಟಿಯಾಗಿದೆ. ಸರಗೂರು ತಾಲೂಕಿನ ಬಡಗಲಪುರ, ಮುಳ್ಳೂರು, ಬೆಣ್ಣೆಗೆರೆ, ಒಡೆಯನಪುರ, ಕುದುರೆ ಗುಂಡಿ ಹಳ್ಳ, ನುಗು ಹೊಳೆ ಭಾಗದ ಕಾಡಂಚಿನ ಗ್ರಾಮದ ಬಳಿ ಹುಲಿ ಸಂಚಾರ ಹೆಚ್ಚಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಅ.17ರಂದು ಬಡಗಲಪುರ ಗ್ರಾಮದಲ್ಲಿ ಮಹದೇವೇಗೌಡ ■ 6ನೇ ಪುಟಕ್ಕೆ

ಆರ್‌ಎಸ್‌ಎಸ್ ನಿರ್ಬಂಧಕ್ಕೆ ಹೈಕೋರ್ಟ್ ಬ್ರೇಕ್

ಸರ್ಕಾರದ ಆದೇಶವು ಸಂವಿಧಾನದ ಸ್ಪಷ್ಟ ಉಲ್ಲಂಘನೆ; ನ್ಯಾಯಪೀಠ



ಮೇಲ್ಮನವಿ ಸಲ್ಲಿಸಲು ಸಿಎಂ ಸೂಚನೆ

ಬೆಂಗಳೂರು, ಅ.28– ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂಬ ರಾಜ್ಯ ಸರ್ಕಾರದ ಆದೇಶ ಅನುಷ್ಠಾನಕ್ಕೆ ಹೈಕೋರ್ಟ್ ತಡೆ ನೀಡಿದೆ. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಸೂಚನೆ ನೀಡಿರುವುದಾಗಿ ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟದ ಈ ನಿರ್ಣಯವನ್ನು ಪ್ರಶ್ನಿಸಿ ಹುಬ್ಬಳ್ಳಿಯ, 'ಪುನಃಶ್ಚೇತನ ಸೇವಾ ಸಂಸ್ಥೆ' ಅಧ್ಯಕ್ಷ ವಿನಾಯಕ ಮತ್ತು 'ವಿ ಕೇರ್ ಫೌಂಡೇಶನ್' ಅಧ್ಯಕ್ಷ ಗಂಗಾಧರಯ್ಯ, ಧಾರವಾಡದ ರಾಜೀವ ಮಲ್ಹಾರ ಕುಲಕರ್ಣಿ ಹಾಗೂ ಬೆಳಗಾವಿಯ ಉಮಾ ಸತ್ಯಜಿತ್ ಚವಾಣ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರ ವಾದ ಆಲಿಸಿದ ನ್ಯಾಯಪೀಠ, ಸರ್ಕಾರದ ಈ ಆದೇಶವು ಸಂವಿಧಾನದ 13(2)ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಹಾಗಾಗಿ, ಈ ಆಕ್ಷೇಪಾರ್ಹ ಆದೇಶದ ಕಾರ್ಯಾಚರಣೆ ಮತ್ತು ಅದರಿಂದ ಈಗಾಗಲೇ ಹೊರಹೊಮ್ಮಿರುವ ಎಲ್ಲಾ ಪರಿಣಾಮಗಳ ಪ್ರಕ್ರಿಯೆಗಳನ್ನು ಮುಂದಿನ ವಿಚಾರಣೆಯವರೆಗೆ ತಡೆಹಿಡಿಯುವುದು ಸೂಕ್ತವೆಂದು ಪರಿಗಣಿಸಿ ಈ ಆದೇಶ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿತು.

ಆಕ್ಷೇಪಾರ್ಹ ಆದೇಶವು ಸಂವಿಧಾನದ 13(2)ನೇ ವಿಧಿಗೆ ವಿರುದ್ಧವಾಗಿದೆ ಮತ್ತು ಈ ಮೂಲಕ 19(1)(ಎ) ಮತ್ತು (ಬಿ) ವಿಧಿಯ ಅಡಿಯಲ್ಲಿ ಪ್ರತಿಯೊಬ್ಬ ನಾಗರಿಕರಿಗೆ ಕೊಡಮಾಡಲಾಗಿರುವ ಮೂಲಭೂತ ಹಕ್ಕನ್ನು ಕಸಿದುಕೊಳ್ಳುತ್ತದೆ. ಮೂಲಭೂತ ಹಕ್ಕುಗಳನ್ನು ಕಾರ್ಯಕಾರಿ ಆದೇಶಗಳಿಂದ ಮೊಟಕುಗೊಳಿಸಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳನ್ನು ನಿಯಂತ್ರಿಸುವ ಬಗ್ಗೆ, ಕರ್ನಾಟಕ ಪೊಲೀಸ್ ಕಾಯ್ದೆ–1963ರ ಕಲಂ 31ರಲ್ಲಿ ಈಗಾಗಲೇ ವಿಶೇಷವಾಗಿ ವಿವರಿಸಲಾಗಿದೆ. ■ 6ನೇ ಪುಟಕ್ಕೆ

ಕಾಂಗ್ರೆಸ್‌ನ ಸಂವಿಧಾನ ವಿರೋಧಿ ನಡೆಗೆ ತಕ್ಕ ಪಾಠ



ಬೆಂಗಳೂರು, ಅ.28– ಸಾರ್ವಜನಿಕ ಸ್ಥಳಗಳಲ್ಲಿ 10ಕ್ಕಿಂತ ಹೆಚ್ಚಿನ ಜನರ ಜಮಾವಣೆಗೆ ಪೊಲೀಸ್ ಇಲಾಖೆ ಪೂರ್ವಾನುಮತಿ ಕಡ್ಡಾಯ. ಇಲ್ಲದಿದ್ದರೆ ಅದನ್ನು ಕಾನೂನು ಬಾಹಿರ ಅಕ್ರಮ ಕೂಟ ಎಂದು ಪರಿಗಣಿಸಲಾಗುತ್ತದೆ ಎಂಬ ರಾಜ್ಯ ಸರ್ಕಾರದ ಸಂಪುಟ ನಿರ್ಧಾರ ಜಾರಿಗೆ ಹೈಕೋರ್ಟ್ ತಡೆ ನೀಡಿದೆ.

ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, 'ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ರಾಜ್ಯ ಸರ್ಕಾರದ ಪಿತೂರಿ ಸಂವಿಧಾನದ ವಿರುದ್ಧವಾಗಿದೆ. ಸರ್ಕಾರಿ ಆವರಣದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಖಾಸಗಿ ಸಂಸ್ಥೆಗಳು ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠ ತಡೆ ನೀಡಿದೆ.

ಆರ್‌ಎಸ್‌ಎಸ್ ಚಟುವಟಿಕೆಗಳನ್ನು ಗುರಿಯಾಗಿಸಿಕೊಂಡು ಹೊರಡಿಸಿದ ಆದೇಶ ಇದಾಗಿದೆ. ಸಂವಿಧಾನ ವಿರೋಧಿ ನೀತಿಯನ್ನು ಪಾಲಿಸುವ ಕಾಂಗ್ರೆಸ್ ಸರ್ಕಾರಕ್ಕೆ ಇದು ಎಚ್ಚರಿಕೆಯ ಪಾಠವಾಗಿದೆ. ಸಂವಿಧಾನದ ಮೂಲ ಆಶಯಗಳನ್ನು ಗೌರವಿಸುವುದನ್ನು ಕಾಂಗ್ರೆಸ್ ಸರ್ಕಾರ ಪಾಲಿಸಲಿ ಎಂದಿದ್ದಾರೆ.

ಯೋಗದಲ್ಲಿ ವಿಶ್ವ ದಾಖಲೆ



ಮದೆನಾಡಿನ ಬಿಜಿಎಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ, ಯೋಗಪಟು ಕುಮಾರಿ ಸಿಂಚನ, ವಿಶಿಷ್ಟ ಯೋಗ ಪ್ರದರ್ಶನದಲ್ಲಿ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್'ನಲ್ಲಿ ಸ್ಥಾನ ಪಡೆದಿದ್ದಾಳೆ. ಮಂಗಳವಾರ ನಡೆದ ಸಮಾರಂಭದಲ್ಲಿ ಖಂಡಪೀಡಾಸನ, ಧನುರಾಸನ ಹಾಗೂ ದಿಂಬಾಸನ ಪ್ರದರ್ಶಿಸಿ ದಾಖಲೆ ಪುಟ ಸೇರಿದ್ದಾಳೆ. ಈ ಸಮಾರಂಭದಲ್ಲಿ ಆದಿಚುಂಚನಗಿರಿ ಸಂಸ್ಥಾನದ ಪೀಠಾಧಿಪತಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಬಿಜಿಎಸ್ ಸಂಸ್ಥೆ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ತೀರ್ಪುಗಾರ ಡಾ.ಮನಿಶ್ ವೈಷ್ಣೋಯಿ, ಶಾಸಕರಾದ ಪೊನ್ನಣ್ಣ, ಮಂಥರ್‌ಗೌಡ, ಶಿಕ್ಷಣ ಇಲಾಖೆ ಉಪನಿರ್ದೇಶಕ ಬಸವರಾಜು, ಯೋಗ ಶಿಕ್ಷಕ ಮಹೇಶ್‌ಕುಮಾರ್, ಬಿಜಿಎಸ್ ಶಾಲೆಯ ಆಡಳಿತಾಧಿಕಾರಿ ಸುಧಾಕರ್, ಸಿಂಚನಾಳ ತಂದೆ ಕೀರ್ತಿಕುಮಾರ್, ತಾಯಿ ರೇಣುಕಾ ಹಾಜರಿದ್ದರು. [ವರದಿ ಪುಟ–8ರಲ್ಲಿ]

ನವೆಂಬರ್ ಕ್ರಾಂತಿ ವದಂತಿ ನಡುವೆ ರಾಜ್ಯಕ್ಕೆ ರಾಹುಲ್ ಗಾಂಧಿ ಭೇಟಿ!

- ನ. 18ರಿಂದ 21ರೊಳಗೆ ರಾಜ್ಯದಲ್ಲಿ 100 ಕಾಂಗ್ರೆಸ್ ಕಚೇರಿಗಳ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ
- ಅಧಿಕಾರ ಹಸ್ತಾಂತರ ಹಗ್ಗಜಗ್ಗಾಟದ ನಡುವೆ ರಾಹುಲ್ ಭೇಟಿಗೆ ವಿಶೇಷ ಮಹತ್ವ

ಬೆಂಗಳೂರು, ಅ.28 (ಕೆಎಂಶಿ)– ನವೆಂಬರ್ ಕ್ರಾಂತಿಯ ವದಂತಿ ಬೆನ್ನಲ್ಲೇ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ಕೈಗೊಳ್ಳುತ್ತಿದ್ದಾರೆ.



ಕರ್ನಾಟಕದಲ್ಲಿ 100 ಕಾಂಗ್ರೆಸ್ ಕಚೇರಿಗಳ ನಿರ್ಮಾಣ ಶಂಕುಸ್ಥಾಪನೆ ನೆರವೇರಿಸುವ ಸಲುವಾಗಿ ಅವರು ನವೆಂಬರ್ 18 ರಿಂದ 21ರೊಳಗೆ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ನಗರದ ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಕೆಪಿಸಿಸಿ ಬೃಹತ್ ಸಮಾರಂಭ ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾಹುಲ್ ಗಾಂಧಿಯೊಂದಿಗೆ ಪಕ್ಷದ ಎಲ್ಲಾ ಮುಖಂಡರು ನಗರಕ್ಕೆ ಧಾವಿಸುತ್ತಿದ್ದಾರೆ.

ನವೆಂಬರ್ 20ಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಪೂರ್ಣಗೊಳ್ಳುತ್ತಿದೆ. ಉಳಿದ ಅಧಿಕಾರಾವಧಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರಿಸಲಿದ್ದಾರೆ ಎಂಬ ದಟ್ಟ ವದಂತಿ ಹಿನ್ನೆಲೆಯಲ್ಲಿ ರಾಹುಲ್ ಭೇಟಿ ಮಹತ್ವ ಪಡೆದಿದೆ.

ಅಧಿಕಾರ ಹಸ್ತಾಂತರ ಕುರಿತಂತೆ ಕಳೆದ ಆರು ತಿಂಗಳಿಂದ ಸರ್ಕಾರ ಮತ್ತು ರಾಜ್ಯ ಕಾಂಗ್ರೆಸ್‌ನಲ್ಲಿ ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ. ಆದರೆ, ವಾಸ್ತವ ಸ್ಥಿತಿ ಏನೆಂಬುದನ್ನು ಮುಖ್ಯಮಂತ್ರಿಯಾಗಲೀ, ಉಪಮುಖ್ಯಮಂತ್ರಿಯಾಗಲೀ ಇದುವರೆಗೂ ಬಹಿರಂಗಪಡಿಸಿಲ್ಲ. ಆದರೆ, ■ 6ನೇ ಪುಟಕ್ಕೆ

ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರದ ಅವಸಾನ ಆರಂಭ

ಚಾಮರಾಜನಗರ, ಅ.28– ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಅವಸಾನ ಆರಂಭವಾಗಿದೆ ಎಂದು ಸಂಸದ ಜಗದೀಶ್‌ಶೆಟ್ಟರ್ ತಿಳಿಸಿದ್ದಾರೆ.



ಸಿದ್ದರಾಮಯ್ಯ ತಾವೇ ಮುಖ್ಯಮಂತ್ರಿ ಆಗಿ ಮುಂದುವರೆಯಬೇಕು. ಇಲ್ಲದಿದ್ದರೆ ಅವರು ಬಂಡಾಯ ಏಳ್ತಾರೆ. ಪ್ರಸ್ತುತ ಸತೀಶ್ ಜಾರಕಿಹೊಳಿ ಹೆಸರು ಮುನ್ನಲೆಗೆ ತಂದಿದ್ದಾರೆ. ದಲಿತ ಸಿಎಂ ಆಗಬೇಕು ಅಂತಾರೆ ಅವರ ಮುಖ್ಯ ಉದ್ದೇಶ ಡಿಕೆಶಿ ಸಿಎಂ ಆಗಬಾರದು ಅಷ್ಟೇ ಎಂದರು.

ಸಿದ್ದರಾಮಯ್ಯ ಹಿಂದೆ ಜೆಡಿಎಸ್‌ಗೆ ಕೈ ಕೊಟ್ಟು ಹೊರಬಂದರು, ಹೊರಗಿನಿಂದ ಬಂದ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಸಿಎಂ ಮಾಡಿದೆ. ಈಗ ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಯಾವಾಗ ಕೈ ಕೊಟ್ಟು ಹೋಗ್ತಾರೋ ಗೊತ್ತಿಲ್ಲ. ಅವರ ನೇತೃತ್ವದ ಸರ್ಕಾರದ ಅವಸಾನ ಆರಂಭವಾಗಿದೆ ಎಂದು ಭವಿಷ್ಯ ನುಡಿದರು. ಪ್ರತಿ ಬಾರಿಯೂ ಚುನಾವಣೆ ಬಂದಾಗ ಇದು ನನ್ನ ಕಡೆ ಚುನಾವಣೆ ಅನ್ನುತ್ತಾರೆ. 2028 ರಲ್ಲಿ ಮತ್ತೆ ಚುನಾವಣೆಗೆ ನಿಲ್ಲುವ ಕೂಗು ಎಬ್ಬಿಸಿದ್ದಾರೆ. ಅವರಿಗೆ ಅಧಿಕಾರ ದಾಹ, ಅಧಿಕಾರದ ಮದ ಹಾಗೂ ಹಣದ ಅಹಂಕಾರ ಬಂದಿದೆ. ಸಿದ್ದರಾಮಯ್ಯ ■ 6ನೇ ಪುಟಕ್ಕೆ

ರಾಜ್ಯ ಪೊಲೀಸರು ಇನ್ನು ಸ್ಮಾರ್ಟ್ ಪೀಕ್ ಕ್ಯಾಪ್‌ನಲ್ಲಿ ಮಿಂಚಿಂಗ್!

- ಏಳು ದಶಕದ ಬಳಿಕ ಸಾಂಪ್ರದಾಯಿಕ ಖಾಕಿ ಟೋಪಿಗೆ ಗುಡ್‌ಬೈ
- ಆದಷ್ಟು ಬೇಗ ಡ್ರಗ್ಸ್ ಮುಕ್ತ ಕರ್ನಾಟಕ ಮಾಡಿ ತೋರಿಸಿ: ಸಿಎಂ
- ಯಾವ ಸರ್ಕಾರ ಬಂದರೂ ಕರ್ತವ್ಯ ನಿಷ್ಠೆಯಲ್ಲಿ ರಾಜೀ ಆಗಬೇಡಿ: ಡಿಸಿಎಂ



ಪೊಲೀಸ್ ಸಿಬ್ಬಂದಿಗೆ ಪೀಕ್ ಕ್ಯಾಪ್ ಹಾಕುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಬೆಂಗಳೂರು, ಅ.28(ಕೆಎಂಶಿ)–ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಪೊಲೀಸರು ಧರಿಸುವ ಕ್ಯಾಪ್‌ಗಳ ಮಾದರಿಯ ಪೀಕ್ ಕ್ಯಾಪ್ ರಾಜ್ಯ ಪೊಲೀಸರಿಗೂ ನೀಡಲಾಗಿದೆ.

ಕಳೆದ ಏಳು ದಶಕಗಳಿಂದ ನಮ್ಮ ಪೊಲೀಸರು ಧರಿಸುತ್ತಿದ್ದ ಖಾಕಿ ಟೋಪಿಗೆ ಗುಡ್‌ಬೈ ಹೇಳಿರುವ ರಾಜ್ಯ ಸರ್ಕಾರ ನಮ್ಮವರಿಗೂ ನೀಲಿ ಬಣ್ಣದ ಗತ್ತಿನ ಪೀಕ್ ಕ್ಯಾಪ್ ನೀಡಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಾಂಕೇತಿಕವಾಗಿ ಕೆಲವು ಪೊಲೀಸ್ ಅಧಿಕಾರಿಗಳಿಗೆ ಪೀಕ್ ಕ್ಯಾಪ್ ತೊಡಿಸುವ ಮೂಲಕ ಖಾಕಿ ಟೋಪಿಗೆ ಗುಡ್‌ಬೈ ಹೇಳಿದರು.

ನಂತರ ಮಾತನಾಡಿದ ಮುಖ್ಯಮಂತ್ರಿ, ಮಾದಕದ್ರವ್ಯ ಮುಕ್ತ ಕರ್ನಾಟಕ ನಿಮ್ಮ ಗುರಿ ಆದಾಗ ಕರ್ನಾಟಕದ ಜನತೆ ಪೊಲೀಸ್ ಇಲಾಖೆಗೆ ಕೃತಜ್ಞತೆ ಸಲ್ಲಿಸುತ್ತದೆ. ಯುವಶಕ್ತಿ, ವಿದ್ಯಾರ್ಥಿಗಳ ಚೈತನ್ಯ, ಸಾಮರ್ಥ್ಯ ಮಾದಕ ವಸ್ತುಗಳಿಗೆ ಬಲಿಯಾಗಬಾರದು ಎಂಬ ಕಟಿಬದ್ಧ ನಿಲುವು ಪೊಲೀಸ್ ಇಲಾಖೆಯದ್ದಾಗಬೇಕು ಎಂದರು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯವಿದೆ. ರಾಜ್ಯದಲ್ಲಿ ಮಾದಕ ವಸ್ತು ಹಾವಳಿ ತಪ್ಪಿಸಿದರೆ ಕರ್ನಾಟಕ ಪೊಲೀಸ್ ಘನತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗುತ್ತದೆ. ರಿಯಲ್ ಎಸ್ಟೇಟ್ ದಾರರು, ಮಾದಕವಸ್ತು ಜಾಲದ ಜೊತೆ ಕೆಲವು ಪೊಲೀಸರು ಶಾಮೀಲು ಆಗಿರುತ್ತಾರೆ. ರೌಡಿ ಚಟುವಟಿಕೆಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಪೊಲೀಸರ ಬಗ್ಗೆ ಅಪರಾಧ ಜಗತ್ತಿನಲ್ಲಿ ಭಯ ಕಡಿಮೆಯಾಗಿದೆ. ಯಾಕೆ ಹೀಗಾಯ್ತು ಎಂಬುದಾಗಿ ನಿಮ್ಮನ್ನು ನೀವೇ ಪ್ರಶ್ನಿಸಿಕೊಂಡರೆ ಉತ್ತರ ನಿಮಗೇ ಗೊತ್ತಿರುತ್ತದೆ.



ಪೀಕ್ ಕ್ಯಾಪ್‌ನಲ್ಲಿ ಕಂಗೊಳಿಸುತ್ತಿರುವ ಪೊಲೀಸ್ ಸಿಬ್ಬಂದಿ.

ಮಾದಕವಸ್ತು ಮಾರುವವರು, ತರುವವರು, ಎಲ್ಲಿಂದ ಬರುತ್ತದೆ. ಜಾಲದ ಏಜೆಂಟ್ ಯಾರ್‍ಯಾರು ಎಂದೂ ನಿಮಗೇ ಗೊತ್ತಿರುತ್ತದೆ. ಆದಷ್ಟು ಬೇಗ ಡ್ರಗ್ಸ್ ಮುಕ್ತ ಕರ್ನಾಟಕ ಮಾಡಿ ತೋರಿಸಿ ಎಂದರು.

ಪೊಲೀಸ್ ಸಿಬ್ಬಂದಿಗೆ ಪೀಕ್ ಕ್ಯಾಪ್ ಮಾದರಿ ಆಯ್ಕೆ ಮಾಡಿದ್ದು ನಾನೇ, ಸುಮಾರು 70 ವರ್ಷಗಳಿಂದ ಇದ್ದ ಒಂದೇ ಮಾದರಿ ಟೋಪಿ ಬದಲಾಯಿಸಿದ್ದೇವೆ. ಅಧಿಕಾರಿ ಮತ್ತು ಸಿಬ್ಬಂದಿಗೆ ಒಂದೇ ಮಾದರಿ ಕ್ಯಾಪ್ ಒದಗಿಸಲಾಗಿದೆ. ಇದರಿಂದ ನಿಮ್ಮ ಆತ್ಮ ವಿಶ್ವಾಸ ಹೆಚ್ಚಲಿ. ಕೇವಲ ಕ್ಯಾಪ್ ಬದಲಾಗುವುದಲ್ಲ. ನಿಮ್ಮ ಕಾರ್ಯಕ್ಷಮತೆಯೂ ಬದಲಾಗಬೇಕು.

ಪೊಲೀಸ್ ಇಲಾಖೆ ದಕ್ಷತೆಯಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಂಡಿಯಾ ಜಸ್ಟೀಸ್ ವರದಿಯಲ್ಲಿ ಕರ್ನಾಟಕ ಪೊಲೀಸ್ ನಂಬರ್ ಒನ್ ಸ್ಥಾನದಲ್ಲಿದೆ ಎಂಬುದು ರಾಜ್ಯದ ಘನತೆ ಹೆಚ್ಚಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ತವ್ಯ ನಿಷ್ಠೆಯಲ್ಲಿ ರಾಜಿ ಆಗಬೇಡಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಯಾವ ಸರ್ಕಾರ ಬಂದರೂ ನಿಮ್ಮ ಆತ್ಮವಿಶ್ವಾಸ, ಕರ್ತವ್ಯ ನಿಷ್ಠೆಯಲ್ಲಿ ರಾಜಿ ಆಗಬಾರದು. ರಾಜಿ ಮಾಡಿಕೊಂಡರೆ ವ್ಯವಸ್ಥೆ ಸಂಪೂರ್ಣ ಕುಸಿಯಲಿದೆ ಎಂದು ಕಿವಿ ಮಾತು ಹೇಳಿದರು.

ಪೊಲೀಸರ ಮೇಲೆ ಸಮಾಜ ಹಾಗೂ ಸರ್ಕಾರ ಬಹಳ ವಿಶ್ವಾಸ ಇಟ್ಟಿರುತ್ತದೆ. ನೀವು ಸಮಾಜ ರಕ್ಷಕರು, ಅಧಿಕಾರ ಪ್ರಮಾಣ ವಚನ ಸ್ವೀಕಾರ ವೇಳೆ ನಾನು ಸ್ವಲ್ಪ ಖಾರವಾಗಿಯೇ ಮಾತನಾಡಿದ್ದೆ. ■ 6ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 29 ಅಕ್ಟೋಬರ್ 2025

ಸವಿತಾ ಸಮಾಜದ ಸಮುದಾಯ ಭವನ, ಸಂಗೀತ ತರಬೇತಿ ಭವನ ನಿರ್ಮಾಣಕ್ಕೆ ತಲಾ 10 ಲಕ್ಷ ಬಿಡುಗಡೆ

● ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ● ಸಂಸದರ ನಿಧಿಯಿಂದ ಕೂಡ ಅನುದಾನ ಕೊಡಿಸುವ ಆಶ್ವಾಸನೆ
● ನಾದಸ್ವರ ಇಲ್ಲದಿದ್ದರೆ ಶುಭ ಕಾರ್ಯ ನಡೆಯಲ್ಲ ● ಸವಿತಾ ಸಮಾಜದವರ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿ



ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ಸವಿತಾ ವಿವಿಧೋದ್ದೇಶ ಸಹಕಾರ ಸಂಘವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಮೈಸೂರು, ಅ.28(ಬಿಎಲ್ ಯು)– ಸವಿತಾ ಸಮಾಜದ ಶ್ರೇಯೋಭಿವೃದ್ಧಿಗಾಗಿ ಸಮುದಾಯ ಭವನ ಹಾಗೂ ಸಂಗೀತ ತರಬೇತಿ ಭವನ ನಿರ್ಮಿಸಲು ಶಾಸಕರ ನಿಧಿಯಿಂದ ತಲಾ 10 ಲಕ್ಷ ರೂಪಾಯಿ ನೀಡುತ್ತೇನೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ನೀಡಿದರು.

ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ಸವಿತಾ ವಿವಿಧೋದ್ದೇಶ ಸಹಕಾರ ಸಂಘದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಸಮುದಾಯದ ಮುಖಂಡರೊಡನೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿ ಸಂಸದರ ನಿಧಿಯಿಂದಲೂ ಅನುದಾನ ಕೊಡಿಸಲು ಪ್ರಯತ್ನಿಸುತ್ತೇನೆ ಎಂದು ಆಶ್ವಾಸನೆ ನೀಡಿದರು.

ಅನುದಾನಕ್ಕೆ ಅನುಗುಣವಾಗಿ ಸಮುದಾಯದ ಅಭಿವೃದ್ಧಿ ಕಾರ್ಯಗಳು ನಡೆಯಬೇಕು. ಯಾವುದೇ ಕಾರಣಕ್ಕೂ ಸಮುದಾಯ ಭವನದ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಲ್ಲಬಾರದು, ನಿಮ್ಮ ಜೊತೆ ನಾನಿದ್ದೇನೆ ಎಂದು ಶ್ರೀವತ್ಸ ಅಭಯ ನೀಡಿದರು.

ಸಂಗೀತ ಎಂಬುದು ಮೇಲ್ವರ್ಗಕ್ಕೆ ಸೀಮಿತ ಎಂಬ ಮಾತಿತ್ತು. ಆದರೆ ಈಗ ಕಾಲ ಬದಲಾಗಿದೆ. ಸಂಗೀತ ಕ್ಷೇತ್ರದಲ್ಲಿ ಸವಿತಾ ಸಮಾಜ ಹೆಚ್ಚು ಕೊಡುಗೆ ನೀಡಿದೆ. ಇಂದಿಗೂ ಕೂಡ ಯಾವುದೇ ರೀತಿಯ ಶುಭ ಸಮಾರಂಭಗಳಿಗೆ ನಾದಸ್ವರವಿಲ್ಲದಿದ್ದರೆ ಕಾರ್ಯಕ್ರಮ ನಡೆಯಲು ಸಾಧ್ಯವಿಲ್ಲ. ಇದು ಸವಿತಾ ಸಮಾಜದ ಪ್ರಾಮುಖ್ಯತೆಯನ್ನು ಸಾರಿ ಹೇಳುತ್ತದೆ ಎಂದು ಅಭಿಪ್ರಾಯಪಟ್ಟರು.

ವಿದ್ಯೆ ಮತ್ತು ಸಂಗೀತ ಎಂಬುದು ಯಾವುದೇ ಒಂದು ವರ್ಗ ಅಥವಾ ವ್ಯಕ್ತಿಯ ಸ್ವತ್ತಲ್ಲ. ಯಾರೇ ಆಗಲಿ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಪಾಂಡಿತ್ಯ ಪಡೆದುಕೊಳ್ಳಬಹುದು. ಇತ್ತೀಚೆಗೆ ಸವಿತಾ ಸಮಾಜಕ್ಕೆ ಬಹಳಷ್ಟು ಅವಕಾಶಗಳು ದೊರೆಯುತ್ತಿದ್ದು, ಅದನ್ನು ಸಮುದಾಯದವರು ಬಳಸಿಕೊಳ್ಳಬೇಕು ಎಂದು ಟಿ.ಎಸ್.ಶ್ರೀವತ್ಸ ಸಲಹೆ ನೀಡಿದರು.

ಇದೇ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸವಿತಾ ಸಮಾಜ ನಿಗಮ ಮಂಡಳಿ ಅಧ್ಯಕ್ಷ ಮುತ್ತುರಾಜ್ ಅವರು, ನಾವು ಹಿಂದುಳಿದವರು ಎಂಬ ಕೀಳರಿಮೆಯಿಂದ ಪ್ರಯತ್ನ ಮಾಡದೆ ಕುಳಿತರೆ ಯಾವ ಕಾರ್ಯವನ್ನು ಸಾಧಿಸಲು ಸಾಧ್ಯವಿಲ್ಲ. ಹೆಚ್ಚು ಪ್ರಯತ್ನ ಮಾಡಿದರೆ ಅದನ್ನು ಸಾಧಿಸಬಹುದು ಎಂದು ಹೇಳಿದರು.

ಶಾಲೆಯಲ್ಲಿ ಅನುತ್ತೀರ್ಣರಾದ ಮಕ್ಕಳನ್ನು ವೃತ್ತಿಗೆ ದೂಡುತ್ತಿದ್ದೇವೆ. ಈ ಹಿನ್ನೆಲೆ ಅನುತ್ತೀರ್ಣರಾದರೂ ಅವರ ವಿದ್ಯಾಭ್ಯಾಸ ಮುಂದುವರೆಸಿ ಉನ್ನತ ಶಿಕ್ಷಣ ನೀಡಬೇಕು. ಅಲ್ಲದೆ ರಾಜಕೀಯ ರಂಗದಲ್ಲಿ ಕೂಡ ನಮ್ಮ ಸಮುದಾಯದವರು ಗುರುತಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಮ್ಮ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ 10 ಕೋಟಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುತ್ತೇನೆ ಎಂದು ಮುತ್ತುರಾಜ್ ಭರವಸೆ ನೀಡಿದರು. ಗೋಪಾಲಗೌಡ ಆಸ್ಪತ್ರೆ ಮುಖ್ಯಸ್ಥ ಡಾ.ಶಶ್ರೂತ್‌ಗೌಡ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಕಾರ್ಪೋರೇಟರ್ ಸುರೇಶ್, ನಿವೃತ್ತ ಲೋಕಾಯುಕ್ತ ಅಧಿಕಾರಿ ಆರ್.ಆನಂದ್, ಮೈಸೂರು ಜಿಲ್ಲಾ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎ.ಎಂ.ನಾಗರಾಜ್, ಸವಿತಾ ಸಮಾಜ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ರಘುನಾಥ್, ಜಿಲ್ಲಾಧ್ಯಕ್ಷ ಎಂ.ಡಿ.ರಾಕೇಶ್, ಶಿವರಾಜು ವೇದಿಕೆಯಲ್ಲಿದ್ದರು.

ಧಾರ್ಮಿಕ ಆಚರಣೆಗಳು ಯುವಜನರು ಮನೋವಿಕಾರದಿಂದ ಹೊರಬರಲು ಸಹಕಾರಿ

ಮುಂಬೈ ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ಪಂಡಿತ ಡಾ.ವಿದ್ಯಾಸಿಂಹಾಚಾರ್ಯ ಮಾಹುಲಿ ಅಭಿಮತ



ಬಿಎಸ್‌ಎಸ್ ವಿದ್ಯೋದಯ ಶಾಲೆ ಸಭಾಂಗಣದಲ್ಲಿ ಪಂಡಿತ ಡಾ.ವಿದ್ಯಾಸಿಂಹಾಚಾರ್ಯ ಮಾಹುಲಿ ಅವರನ್ನು ಪಂಡಿತ ಅನಿರುದ್ಧಾಚಾರ್ಯ ಪಾಂಡುರಂಗಿ, ವಾಸುದೇವ ಭಟ್, ಗುರುರಾಜ್ ಅಭಿನಂದಿಸಿದರು.

ಮೈಸೂರು, ಅ.28–ಯುವಜನರು ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಮೈಗೂಡಿಸಿಕೊಂಡು ಉನ್ನತ ಸಾಧನೆಯತ್ತ ಮುನ್ನುಗ್ಗಬೇಕು ಎಂದು ಮುಂಬೈನ ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ಪಂಡಿತ ಡಾ.ವಿದ್ಯಾಸಿಂಹಾಚಾರ್ಯ ಮಾಹುಲಿ ಹೇಳಿದರು.

ಯುವಜನರ ಅಧ್ಯಾತ್ಮಿಕ ಅಭ್ಯುದಯ ನಿಟ್ಟಿನಲ್ಲಿ ಶ್ರೀ ಉತ್ತರಾದಿ ಮಠದ ಯುವಾತ್ಮ ತಂಡದ ವತಿಯಿಂದ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆಯ ಸಭಾಂಗಣದಲ್ಲಿ ಆಯೋಜಿಸಿದ್ದ 'ಯುವ ಸಂಕಲ್ಪ' ಕಾರ್ಯಕ್ರಮದಲ್ಲಿ ಶ್ರೀಗಳು ಧರ್ಮ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಯುವಜನರು ಬೇಸರ, ಆತ್ಮಹತ್ಯೆ ಯೋಚನೆ, ಖಿನ್ನತೆ ಮತ್ತು ಮನೋವಿಕಾರಗಳಿಂದ ಹೊರಬರಲು ಧರ್ಮದ ಆಚರಣೆಗಳು ಪ್ರೇರಕವಾಗಿವೆ. ರಾಮಾಯಣ, ಮಹಾಭಾರತ, ಭಾಗವತ ಮತ್ತು ಭಗವದ್ಗೀತೆಗಳು ಜೀವನ ಮೌಲ್ಯವನ್ನು ಪ್ರತಿ ಹಂತದಲ್ಲೂ ತಿಳಿಸಿವೆ. ಮನೆಯ ಹಿರಿಯರು ಹೇಳಿದಂತೆ ಧಾರ್ಮಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳನ್ನು ಸ್ವಲ್ಪ ಮಾಡಿದರೂ ಅದರಿಂದ ಪುಣ್ಯ ಲಭಿಸುತ್ತದೆ. ಭಗವದ್ಗೀತೆಯೂ ಇದನ್ನೇ ಪ್ರತಿಪಾದಿಸಿದೆ. ಉತ್ತಮ ಕಾರ್ಯವನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಿದರೂ ಅದರಿಂದ ಫಲಗಳು ದೊರೆಯುತ್ತವೆ. ಹಾಗಾಗಿ ಧರ್ಮ ಮತ್ತು ಸಂಸ್ಕೃತಿಗೆ ತಲೆಬಾಗಿ ನಡೆದಾಗ ಮಾತ್ರ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ನಂತರ ನೆರೆದಿದ್ದ ಯುವಜನರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಕಾರ್ಯಕ್ರಮದಲ್ಲಿ ಉತ್ತರಾಧಿ ಮಠದ ವ್ಯವಸ್ಥಾಪಕ ಪಂಡಿತ ಅನಿರುದ್ಧಾಚಾರ್ಯ ಪಾಂಡುರಂಗಿ, ಬಿಎಸ್‌ಎಸ್ ವಿದ್ಯೋದಯ ಶಾಲೆಯ ಕಾರ್ಯದರ್ಶಿ ವಾಸುದೇವಭಟ್, ಉದ್ಯಮಿ ಗುರುರಾಜ್ ಮತ್ತಿತರರಿದ್ದರು.

ದೇವರ ಬಗ್ಗೆ ಅಂಧ ಶ್ರದ್ಧೆ ಬೇಡ

"ಜಗತ್ತಿನ ಒಂದೊಂದು ಕಣವೂ ದೇವರ ಅಸ್ತಿತ್ವ ಸಾರುತ್ತಿವೆ. ಭಗವಂತ ಯಾರಿಗೆ ಏನೇನು ಬೇಕೋ ಅದನ್ನೇ ಸೃಷ್ಟಿ ಮಾಡಿದ್ದಾನೆ. ಜಗತ್ತಿನ ನಿರ್ಮಾಣದ ಹಿಂದೆ ಇರುವಾತನನ್ನು ಕಣ್ಣಾರೆ ನೋಡಲು ಸಾಧ್ಯವಿಲ್ಲ. ಅದನ್ನು ಅನುಭವದಿಂದ ತಿಳಿಯಬೇಕು. ದೇವರ ಬಗ್ಗೆ ಅಂಧ ಶ್ರದ್ಧೆ ಬೇಡ. ದೇವರಿಂದ ದೇಹ, ಬುದ್ಧಿ ಶಕ್ತಿ, ಪಂಚಭೂತವನ್ನು ಪಡೆದವರು ಕೃತಜ್ಞತೆ ಸಲ್ಲಿಸಬೇಕು. ಪರಮಾತ್ಮನ ಉಪಕಾರ ಸ್ಮರಣೆಯೇ ಧರ್ಮ.

–ಡಾ.ವಿದ್ಯಾಸಿಂಹಾಚಾರ್ಯ ಮಾಹುಲಿ

ಡಿವೈಡರ್‌ಗೆ ಕಾರು ಡಿಕ್ಕಿ: ಮಹಿಳೆಗೆ ಗಾಯ



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿರುವುದು.

ಮೈಸೂರು, ಅ.28 (ಆರ್‌ಕೆ)– ಕಾರೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲನೆ ಮಾಡುತ್ತಿದ್ದ ಮಹಿಳೆ ಗಾಯಗೊಂಡಿರುವ ಘಟನೆ ಮೈಸೂರಿನ ಆಕಾಶವಾಣಿ ವೃತ್ತದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.


ಮೈಸೂರಿನ ಗೋಕುಲಂ ನಿವಾಸಿ ಧನ್ಯಾ ಗಾಯಗೊಂಡವರು. ಸಂಬಂಧಿಕರನ್ನು ರೈಲ್ವೆ ನಿಲ್ದಾಣಕ್ಕೆ ಡ್ರಾಪ್ ಮಾಡಿ ಮನೆಗೆ ಹಿಂತಿರುಗುತ್ತಿದ್ದಾಗ ನಿಯಂತ್ರಣ ತಪ್ಪಿದ ಮಾರುತಿ ಸ್ವಿಫ್ಟ್ ಕಾರು ಬೆಳಿಗ್ಗೆ 6.30ರ ಸುಮಾರಿಗೆ ಆಕಾಶವಾಣಿ ವೃತ್ತದ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಚಾಲಕಿ ಧನ್ಯಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ. ಸ್ಥಳಕ್ಕೆ ಧಾವಿಸಿದ ವಿವಿಪುರಂ ಸಂಚಾರ ಠಾಣೆ ಪೊಲೀಸರು, ಹಾನಿಗೊಳಗಾದ ಕಾರನ್ನು ತೆರವುಗೊಳಿಸಿ ಸಂಚಾರ ಸುಗಮಗೊಳಿಸಿದರು. ಈ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಮೈಸೂರು: ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮೈಸೂರು ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಅ. 30 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ನಿಧನ

ಡಾ. ಪುನೀತ್ ಕುಮಾರ್ ಎಂ.ಕೆ.




ಮೈಸೂರು, ಅ.28–ಮೈಸೂರಿನ ವಿದ್ಯಾರಣ್ಯಪುರಂ 7ನೇ ಮೇನ್ ಕರಿಮಾರಮ್ಮ ದೇವಸ್ಥಾನ ಬಳಿಯ ನಿವಾಸಿ ಡಾ.ಪುನೀತ್‌ಕುಮಾರ್ ಎಂ.ಕೆ. ಇಂದು ನಿಧನರಾದರು. ಇವರಿಗೆ 32 ವರ್ಷ ವಯಸ್ಸಾಗಿತ್ತು. ಮೃತರು ತಂದೆ–ತಾಯಿ, ಸಹೋದರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಲ್ಲಚಂಡ ಪುಸ್ಸಿ ಮಾದಯ್ಯ

ಮೈಸೂರಿನ ಸರಸ್ವತಿಪುರಂ, 16ನೇ ಮೇನ್, 3ನೇ ಕ್ರಾಸ್, ಮನೆ ನಂ.262ರ ನಿವಾಸಿ ದಿವಂಗತ ಬಿ.ಸಿ.ಮಾದಯ್ಯ ಅವರ ಪತ್ನಿ ಬಲ್ಲಚಂಡ ಪುಸ್ಸಿ ಮಾದಯ್ಯ (ಮಂಡೇಪಂಡ) ಅವರು ಮಂಗಳವಾರ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪುತ್ರಿಯರಾದ ಕೋದಂಡೇರ ಸೌಮ್ಯ ಮೇದಪ್ಪ ಮತ್ತು ಸರಿನಾ ಮಾದಯ್ಯ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಸಿದ್ದಯ್ಯ



ಟಿ.ನರಸೀಪುರ ತಾಲೂಕಿನ ನಿಲಸೋಗೆ ಗ್ರಾಮದ ಪುಟ್ಟಸಿದ್ದಯ್ಯ (50) ಭಾನುವಾರ ಸಂಜೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ನಿಲಸೋಗೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನಾಬ ನಜಬುನ್ನೀಸಾ

ಮೈಸೂರಿನ ಎನ್.ಆರ್. ಮೊಹಲ್ಲಾದ ಬಡಾ ಮಕಾನ್ ನಿವಾಸಿ ಹಾಗೂ ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯದ್ ಫಾರೂಕ್ ಅವರ ತಾಯಿ ಜನಾಬ ನಜಬುನ್ನೀಸಾ(72) ಸೋಮವಾರ ನಿಧನರಾದರು.

ಮೃತರು ಇಬ್ಬರು ಪುತ್ರಿಯರು, ಮೈಸೂರಿನ ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯದ್ ಫಾರೂಕ್ ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಸಂಖ್ಯೆಯ ಹಿತೈಷಿಗಳು, ಬಂಧುಗಳು, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮುಸ್ಲಿಮರ ಸ್ಮಶಾನದಲ್ಲಿ ಮಂಗಳವಾರ (ಅ.28) ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ವಾಲ್ಮೀಕಿ ಜಯಂತಿ ಆಚರಣೆ





ಮೈಸೂರು,ಅ.28–ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ರಾಮಕೃಷ್ಣ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಹಾಗೂ ವಾಲ್ಮೀಕಿ ಜಯಂತಿಯನ್ನು ಒಟ್ಟಿಗೆ ಆಚರಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು.

ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಜಿ. ಚಂದ್ರಶೇಖರ್ ಅವರು ಗಾಂಧೀಜಿಯವರ ಬದುಕು ಮತ್ತು ಬರಹದ ಕುರಿತು ಮಾತನಾಡುತ್ತ, ಗಾಂಧೀಜಿಯನ್ನು ಪೂರ್ವಾಗ್ರಹಪೀಡಿತರಾಗಿ ನೋಡಲಾಗುತ್ತಿದೆ. ಅವರ ಕೊಂದವನ್ನು ಪೂಜಿಸಲಾಗುತ್ತಿದೆ. ಪ್ರಪಂಚದ ಶ್ರೇಷ್ಠ ನೂರು ಆತ್ಮಚರಿತ್ರೆಗಳನ್ನು ಪಟ್ಟಿ ಮಾಡಿದರೆ ಅವುಗಳಲ್ಲಿ ಗಾಂಧೀಜಿಯವರ ನನ್ನ ಸತ್ಯಾನ್ವೇಷಣೆಯೂ ಒಂದಾಗಿರುತ್ತದೆ. ಇದು ಪ್ರಕಟಗೊಂಡು ಇಂದಿಗೆ ನೂರು ವರ್ಷಗಳು ಸಂದಿವೆ ಎಂದರು.

ಸಹ ಶಿಕ್ಷಕಿ ನೀತಾರಾಣಿ ಲಾಲ್ ಬಹದ್ದೂರ್‌ಶಾಸ್ತ್ರಿ ಅವರ ಕುರಿತು ಮಾತನಾಡುತ್ತ, ದೇಶದಲ್ಲಿ ಹಸಿರು ಕ್ರಾಂತಿ ಹಾಗೂ ಕ್ಷೀರ ಕ್ರಾಂತಿಯನ್ನು ಉತ್ತೇಜಿಸಿದ ಕೀರ್ತಿ ಶಾಸ್ತ್ರಿಯವರದು ಎಂದರು.

ಉಪನ್ಯಾಸಕ ದರ್ಶನ್ ಎಚ್.ಯು ಮಾತನಾಡಿ, ವಾಲ್ಮೀಕಿಯವರ ಬಗ್ಗೆ ಇರುವಂತಹ ಕಟ್ಟು ಕಥೆಗಳನ್ನು ಉಲ್ಲೇಖಿಸುತ್ತ, ವಾಲ್ಮೀಕಿ ರತ್ನಾಕರನೆಂಬ ಕಳ್ಳನಾಗಿದ್ದನೆಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಉತ್ತರ ಭಾರತ ಕೆಲವು ರಾಜ್ಯಗಳಲ್ಲಿ ವಾಲ್ಮೀಕಿ ಕಳ್ಳನಾಗಿದ್ದನೆಂದು ಸಂಭೋದಿಸಿದವರ ವಿರುದ್ಧ ಎಫ್.ಐ.ಆರ್ ದಾಖಲಾಗಿರುವ ಉದಾಹರಣೆಗಳಿವೆ. ಈ ಆದಿಕವಿ ತನ್ನ ಕಾವ್ಯ ರಾಮಾಯಣದಲ್ಲಿ ತಾನೊಬ್ಬ ಮಹರ್ಷಿ, ಮುನಿ ಎಂದು ಹೇಳಿಕೊಂಡಿರುವುದನ್ನು ಬಿಟ್ಟರೆ ಮತ್ತ್ಯಾವ ಸ್ವವಿವರದ ಉಲ್ಲೇಖಗಳಿಲ್ಲವೆಂದು ಸಂಶೋಧಕರು ತೆರೆದಿಟ್ಟಿದ್ದಾರೆ. ರಾಮನು ನಮಗೆ ಹೇಗೆ ಶ್ರೇಷ್ಠನೋ ಹಾಗೆಯೇ ಆ ಪಾತ್ರ ಸೃಷ್ಟಿಸಿದ ವಾಲ್ಮೀಕಿಯೂ ಶ್ರೇಷ್ಠ ಎಂದರು.

ಎಂ.ಪಾಪೇಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ಜಿ.ಎನ್ ವಿಶ್ವನಾಥ್ ಹಾಗೂ ವೀಣಾ ಕೆ.ಹೆಗಡೆ ಉಪಸ್ಥಿತರಿದ್ದರು. ಸಹ ಶಿಕ್ಷಕಿ ಆಶಾ ಅವಿನಾಶ್ ನಿರೂಪಿಸಿದರು.

ಉಚಿತ ಕಂಪ್ಯೂಟರ್ ಕನ್ನಡ ನುಡಿ ತರಬೇತಿ

ಮೈಸೂರು: ಕೆ.ಆರ್.ನಗರದ ಜೀನಿಯಸ್ ಕಂಪ್ಯೂಟರ್ ತರಬೇತಿ ಕೇಂದ್ರವು (ವೆಂಕಟೇಶ್ವರ ಚಿತ್ರಮಂದಿರ ಹತ್ತಿರ) ಉಚಿತ ಕಂಪ್ಯೂಟರ್ ತರಬೇತಿಗಳನ್ನು ನಿರಂತರವಾಗಿ ನೀಡುತ್ತಿದೆ. ಕಂಪ್ಯೂಟರ್ ಬೇಸಿಕ್, ಟ್ಯಾಲಿ, ವರ್ಡ್, ಎಕ್ಸೆಲ್, ಇಂಟರ್‌ನೆಟ್ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ನವೆಂಬರ್ 1ರಂದು ನೇರ ಸಂದರ್ಶನಕ್ಕೆ ಹಾಜರಾಗಿ ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 9945942109 ಸಂಪರ್ಕಿಸಬಹುದು.

ನಾಳೆ 'ಮುಟ್ಟಿಸಿಕೊಂಡವನು' ನಾಟಕ

ಮೈಸೂರು, ಅ.28 (ಎಂಕೆ)– ಮೈಸೂರು ಕಲಾಮಂದಿರದ ಕಿರುರಂಗ ಮಂದಿರದಲ್ಲಿ ರಂಗಾಂತರಂಗ ಮೈಸೂರು ಮಕ್ಕಳ ರಂಗಭೂಮಿಯಲ್ಲಿ ಒಂದು ವರ್ಷದ ವಾರಾಂತ್ಯ ಅಭಿನಯ ತರಬೇತಿ ಪಡೆದ ಮಕ್ಕಳಿಂದ ಅ.30 ರಂದು ಸಂಜೆ 6 ಗಂಟೆಗೆ ಪಿ.ಲಂಕೇಶ್ ಅವರ ಕಥೆಯಾಧಾರಿತ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ನಾಟಕ ನಿರ್ದೇಶಕ ಕೀರ್ತಿರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ನಾಟಕ ಪ್ರದರ್ಶನಕ್ಕೆ ಮುಖ್ಯ ಅತಿಥಿಗಳಾಗಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಡಾ.ಅಮರ್‌ಕುಮಾರ್, ಡಾ.ಟಿ.ಪದ್ಮಶ್ರೀ, ವೆಂಕಟೇಶ್ ಈಡಿಗರ ಭಾಗವಹಿಸಲಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ರಂಗಾಂತರಂಗ ತಂಡ ಕಳೆದ 6 ವರ್ಷಗಳಿಂದ ಮಕ್ಕಳನ್ನು ಪರ್ತ್ಯೇತರವಾಗಿ ಸೆಳೆಯುತ್ತಿದೆ. ಮಕ್ಕಳಿಗೆ ರಂಗಭೂಮಿಯ ಮೇಲಿನ ಆಸಕ್ತಿ ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಹಾಗೆಯೇ ಮಕ್ಕಳಲ್ಲಿನ ಪ್ರತಿಭೆಯನ್ನು ಗುರ್ತಿಸಿ, ಆಧುನಿಕ ಮಾಧ್ಯಮಗಳಲ್ಲಿ ಗುರ್ತಿಸುವ ಮಟ್ಟಕ್ಕೆ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಎಂ.ಪಿ.ಸಂಜೀವಿನಿ, ಮಹದೇವ್ ತಲಕಾಡು ಉಪಸ್ಥಿತರಿದ್ದರು.

ಕರಾಟೆಯಲ್ಲಿ ಪ್ರಥಮ ಸ್ಥಾನ



ಮೈಸೂರು ಟೆರೇಷಿಯನ್ ಕಾಲೇಜು ಕ್ರೀಡಾಂಗಣದಲ್ಲಿ ವಿ.ಎನ್.ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಮೈಸೂರು ಕಪ್ 5ನೇ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ಕುಮಿತೆ ವಿಭಾಗದಲ್ಲಿ ವಸಿಷ್ಠ ಎನ್. ಪ್ರಥಮ ಸ್ಥಾನ ಪಡೆದಿದ್ದಾನೆ. ಈತ ಎಂ.ನಾಗರಾಜು ಮತ್ತು ಸುಜಾತ ದಂಪತಿ ಪುತ್ರ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.10.2025 ಬುಧವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್.ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ಸ್ತನ ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ 9.25 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ವಿಶ್ವಕಪ್ ಮಹಿಳಾ ಕ್ರಿಕೆಟ್ ಸೆಮಿಫೈನಲ್ ಪಂದ್ಯದ ವೀಕ್ಷಕ ವಿವರಣೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಸಂಜೆ 7ಕ್ಕೆ ಶ್ರೀ ಲಕ್ಷ್ಮಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಲಕ್ವ/ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ), ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಉಬ್ಬಿದ ರಕ್ತನಾಳ, ಮೊಡವೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು: ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಎಸ್‌ಬಿಐ ನಿರ್ದೇಶಕ ದಿವಾಕರ್ ಜಾ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಡಿ.ಎಸ್. ಪ್ರತಿಮಾ, ಪ್ರಾಸ್ತಾವಿಕ ನುಡಿ : ಡಾ. ಎಂ. ಸುಮತಿ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಪ್ರಾಚ್ಯವಿದ್ಯಾ ಸಂಶೋಧನಾಲಯ :** 134ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ ಕುರಿತು ವಿಚಾರ ಸಂಕಿರಣ, ಸ್ವಾಗತ ಭಾಷಣ : ಪ್ರಾವಿಸಂ ನಿರ್ದೇಶಕ ಡಾ. ಡಿ.ಪಿ. ಮಧುಸೂದನಾಚಾರ್ಯ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ. ದೇವರಾಜು, ಪ್ರಾವಿಸಂ ನಿವೃತ್ತ ಉಪನಿರ್ದೇಶಕ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ನಿವೃತ್ತ ಹಿರಿಯ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ, ಉದ್ಘಾಟನೆ : ಸಂಸದ ಕುಮಾರ್ ನಾಯಕ್, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ ಅವರಿಂದ ವಿಶೇಷ ಉಪನ್ಯಾಸ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಡೀನ್ ಪ್ರೊ. ಎಂ. ರಾಮನಾಥಂನಾಯ್ಡು, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ

■ **ಶ್ರೀ ನಟರಾಜ ಹಿರಿಯ ಪ್ರಾಥಮಿಕ ಶಾಲೆ :** ವಿಜ್ಞಾನ ವಸ್ತುಪ್ರದರ್ಶನ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಮುಖ್ಯ ಅತಿಥಿಗಳು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ :** ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್‌ರವರ 4ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಮಂಡಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ರಘು, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರದ ಆವರಣ, ಬೆಳಗ್ಗೆ 11ಕ್ಕೆ.

■ **ಮಯೂರ ಕನ್ನಡ ಯುವಕರ ಬಳಗ :** ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ಎಸ್.ಪಿ. ಯೋಗಣ್ಣ, ಹಿರಿಯ ಸಮಾಜ ಸೇವಕ ಕೆ. ರಘುರಾಮ್ ವಾಜಪೇಯಿ, ಕೆಪಿಸಿಸಿ ಸದಸ್ಯ ಜಿ. ಶ್ರೀನಾಥ್ ಬಾಬು, ಸುಚೇಂದ್ರ, ಸ್ಥಳ: ಡಾ. ರಾಜ್‌ಕುಮಾರ್ ಪ್ರತಿಮೆ, ಚಾಮರಾಜ ಜೋಡಿ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಮೈಸೂರು ವಿವಿ ಸಂಜೆ ಕಾಲೇಜು :** 2025–26ನೇ ಸಾಲಿನ ಸಾಂಸ್ಕೃತಿಕ, ಎನ್‌ಎಸ್‌ಎಸ್ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಉಪಪೊಲೀಸ್ ಆಯುಕ್ತ ಕೆ.ಎಸ್. ಸುಂದರ್‌ರಾಜ್, ಮುಖ್ಯ ಅತಿಥಿಗಳು : ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಎಂ.ಬಿ. ಸುರೇಶ, ಅಧ್ಯಕ್ಷತೆ : ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ. ವಿ. ಷಣ್ಮುಗಂ, ಸ್ಥಳ: ಹೊಸ ಕಟ್ಟಡ, ವಿವಿ ಸಂಜೆ ಕಾಲೇಜು, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್, ಶ್ರೀ ಗುರುದೇವ ದತ್ತ ಸನ್ನಿಧಿ :** ಗೀತಾಜ್ಞಾನಯಜ್ಞ, ಪೂಜ್ಯ ಸ್ವಾಮಿ ಗಹನಾನಂದ ಅವರಿಂದ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮ ಯೋಗ ಕುರಿತು ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6.30 ರಿಂದ.

ಮೈಸೂರು ಮಿತ್ರ

ಬುಧವಾರ 29 ಅಕ್ಟೋಬರ್ 2025

ಮಹಿಳೆಯರಿಗೆ ಪ್ರತಿ ತಿಂಗಳು 2,500 ರೂ., 25 ಲಕ್ಷದವರೆಗೆ ಉಚಿತ ವೈದ್ಯಕೀಯ ಚಿಕಿತ್ಸೆ

ಬಿಹಾರಿಗಳಿಗೆ ಮಹಾಘಟ ಬಂಧನ್ 'ಗ್ಯಾರಂಟಿ'

ಪಾಟ್ನಾ, ಅ.28– ಬಿಹಾರ ವಿಧಾನ ಸಭಾ ಚುನಾವಣಾ ಕಣ ರಂಗೇರಿದೆ. ಪ್ರಮುಖ ಪಕ್ಷಗಳ ರಾಜಕೀಯ ಚಟುವಟಿಕೆ ಗರಿಗೆದರಿದೆ. ಕರ್ನಾಟಕ ಮಾದರಿಯ ಗ್ಯಾರಂಟಿಗಳನ್ನು ನೀಡಿ ಬಿಹಾರ ಮತದಾರರನ್ನು ಸೆಳೆಯಲು ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ್ ಮುಂದಾಗಿದೆ.

ಪಾಟ್ನಾದಲ್ಲಿ ಪ್ರಣಾಳಿಕೆ ಬಿಡುಗಡೆಗೆ ಮುನ್ನ, ಕಾಂಗ್ರೆಸ್ ನಾಯಕ ಕೃಷ್ಣ ಅಲ್ಲವರು ಬಿಹಾರ ಜನತೆಗೆ ಮಹಾ ಘಟಬಂಧನ್‌ನ ಪ್ರಮುಖ ಭರವಸೆಗಳ ಕುರಿತು ಪೋಸ್ಟ್ ಹಂಚಿಕೊಂಡಿದ್ದಾರೆ. ಮಹಿಳೆಯರಿಗೆ ಪ್ರತಿ ತಿಂಗಳು 2,500 ರೂ., 25 ಲಕ್ಷ ರೂ.ವರೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ಭೂರಹಿತ ಕುಟುಂಬಗಳಿಗೆ ಭೂಮಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಸೋಮವಾರ 'ಪಕ್ಷ ವಿರೋಧಿ ಚಟುವಟಿಕೆ' ಆರೋಪದ ಮೇಲೆ 27 ನಾಯಕರನ್ನು ಆರು ವರ್ಷಗಳ ಅವಧಿಗೆ ಪಕ್ಷದಿಂದ ಹೊರಹಾಕಿದೆ. ಪಕ್ಷದ ರಾಜ್ಯ ಪ್ರಧಾನ ಕಚೇರಿಯ ಅಧಿಕೃತ ಹೇಳಿಕೆಯ ಪ್ರಕಾರ, ಹಲವಾರು ನಾಯಕರು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಅಥವಾ ವಿವಿಧ ಕ್ಷೇತ್ರಗಳಲ್ಲಿ ಅಧಿಕೃತ ಆರ್‌ಜೆಡಿ ಅಭ್ಯರ್ಥಿಗಳನ್ನು ವಿರೋಧಿಸುತ್ತಿರುವ ವರದಿಗಳನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ.

ಬಿಹಾರ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷ ವಿರೋಧಿ ನಡವಳಿಕೆ, ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಪ್ರಧಾನ ಕಚೇರಿಗೆ ಅಧಿಕೃತ ಮಾಹಿತಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಡಿವೈಎಸ್ಪಿಗಳಿಗೆ ಸ್ಥಳ ನಿಯುಕ್ತಿ

ಮೈಸೂರು, ಅ.28– ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಇನ್ಸ್‌ಪೆಕ್ಟರ್‌ಗಳಾಗಿದ್ದ 17 ಮಂದಿಗೆ ಡಿವೈಎಸ್ಪಿ(ಸಿವಿಲ್) ಸ್ವತಂತ್ರ ಪ್ರಭಾರದಲ್ಲಿ ಸ್ಥಳ ನಿಯುಕ್ತಿಗೊಳಿಸಿ, ಸರ್ಕಾರ ಸೋಮವಾರ ಆದೇಶಿಸಿದೆ. ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ಕೆ.ತಳವಾರ್, ಹಾಸನ ಜಿಲ್ಲೆ ಚನ್ನರಾಯಪಟ್ಟಣ ಗ್ರಾಮಾಂತರ ಠಾಣೆಯ ಸಿ.ವಿ.ರವಿ ಹಾಗೂ ಮಂಡ್ಯ ಸಂಚಾರ ಠಾಣೆಯ ಕೆ..ಸಂತೋಷ್ ಅವರನ್ನು ಸಿಐಡಿ ಘಟಕಕ್ಕೆ, ಚಾಮರಾಜನಗರ ಪೊಲೀಸ್ ಠಾಣೆಯಿಂದ ಆಂತರಿಕ ಭದ್ರತಾ ವಿಭಾಗಕ್ಕೆ ವರ್ಗಾವಣೆ ಆದೇಶದಲ್ಲಿದ್ದ ಎ.ಕೆ.ರಾಜೇಶ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ ನಿಯುಕ್ತಿಗೊಳಿಸಲಾಗಿದೆ.

ಈ ಅಧಿಕಾರಿಗಳಿಗೆ ಡಿವೈಎಸ್ಪಿ ಹುದ್ದೆಗಳಿಗೆ ಎದುರಾಗಿ ವೇತನ ಶ್ರೇಣಿಯೊಂದಿಗೆ ಸ್ವತಂತ್ರ ಪ್ರಭಾರದಲ್ಲಿರಿಸಿ, ಅ.13ರಂದು ಆದೇಶಿಸಲಾಗಿತ್ತು.

ರಜನಿಕಾಂತ್, ಧನುಷ್ ಮನೆಗೆ ಬಾಂಬ್ ಬೆದರಿಕೆ



ಚೆನ್ನೈ: ಖ್ಯಾತ ತಮಿಳು ನಟರಾದ ರಜನಿಕಾಂತ್ ಮತ್ತು ಧನುಷ್ ಅವರ ನಿವಾಸಗಳಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಇಮೇಲ್‌ಗಳನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರು ಸ್ವೀಕರಿಸಿದ್ದಾರೆ ಎಂದು ತಮಿಳುನಾಡು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ತೇನಾಂಪೇಟೆ ಪೊಲೀಸರ ಪ್ರಕಾರ, ಅಕ್ಟೋಬರ್ 27 ರಂದು ಬೆಳಗ್ಗೆ 8.30 ರ ಸುಮಾರಿಗೆ ರಜನಿಕಾಂತ್ ಅವರ ಮನೆಯಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಪತ್ರ ಪೊಲೀಸರಿಗೆ ಬಂದಿದೆ.

ಪೊಲೀಸರು ಬಾಂಬ್ ನಿಷ್ಕ್ರಿಯ ತಂಡದೊಂದಿಗೆ ರಜನಿಕಾಂತ್ ಅವರ ಮನೆಗೆ ತೆರಳಿದಾಗ, ಅವರು ಬಾಂಬ್ ಸ್ಕ್ವಾಡ್‌ನ ಸಹಾಯದಿಂದ ಶೋಧ ಕಾರ್ಯಾಚರಣೆಯ ಅಗತ್ಯವಿಲ್ಲ ಎಂದು ನಮಗೆ ತಿಳಿಸಿದರು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅದೇ ದಿನ ಸಂಜೆ 6.30ಕ್ಕೆ ಎರಡನೇ ಬೆದರಿಕೆ ಪತ್ರ ಬಂದಿದ್ದು, ರಜನಿಕಾಂತ್ ಅವರ ತಂಡ ಮತ್ತೆ ಭದ್ರತಾ ತಪಾಸಣೆಯನ್ನು ನಿರಾಕರಿಸಿತು.

ಅದೇ ದಿನ ನಟ ಧನುಷ್ ಅವರ ಮನೆಯಲ್ಲೂ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಪತ್ರವೂ ಬಂದಿದೆ. ಅವರು ಕೂಡ ನಮ್ಮ ಸಹಾಯವನ್ನು ನಿರಾಕರಿಸಿದರು ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಇತ್ತೀಚಿನ ವಾರಗಳಲ್ಲಿ ಹಲವಾರು ಪ್ರಮುಖ ವ್ಯಕ್ತಿಗಳಿಗೆ ಈ ರೀತಿಯ ಬೆದರಿಕೆ ಪತ್ರಗಳು ಬರುತ್ತಿದ್ದು, ಸೈಬರ್ ಅಪರಾಧ ಪೊಲೀಸರು ಆ ಇಮೇಲ್‌ಗಳನ್ನು ಪತ್ತೆ ಹಚ್ಚುತ್ತಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಾಮ ಮಂದಿರ ಧ್ವಜಾರೋಹಣ ತಾಲೀಮಿಗೆ ಸೇನಾ ಅಧಿಕಾರಿಗಳು ಸಾಥ್



ಅಯೋಧ್ಯೆ: ಅಯೋಧ್ಯೆಯ ರಾಮ ಮಂದಿರದ ಶಿಖರದ ಮೇಲೆ ಧ್ವಜಾರೋಹಣ ತಾಲೀಮಿಗೆ ಮಂಗಳವಾರ ಹಿರಿಯ ಸೇನಾ ಅಧಿಕಾರಿಗಳು ರಾಮ ಮಂದಿರ ಟ್ರಸ್ಟ್ ಜೊತೆ ಸೇರಿಕೊಂಡು ಸಹಾಯ ಮಾಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನ.25 ರಂದು ನಿಗದಿಯಾಗಿರುವ ಧ್ವಜಾರೋಹಣ ಸಮಾರಂಭಕ್ಕೆ ಸರಿಯಾದ ತರಬೇತಿ ಮತ್ತು ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ದೇವಾಲಯ ಟ್ರಸ್ಟ್ ಸೇನೆಯಿಂದ ಸಹಾಯ ಕೋರಿದೆ ಎಂದು ರಾಮ ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಹೇಳಿದ್ದಾರೆ.

ಸ್ಪೀಕರ್ ಯು.ಟಿ.ಖಾದರ್ ವಿರುದ್ಧವೂ ಭ್ರಷ್ಟಾಚಾರ ಆರೋಪ

ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಬಿಜೆಪಿ ಆಗ್ರಹ!



ವಿಶ್ವೇಶ್ವರ ಹೆಗಡೆ ಕಾಗೇರಿ, ಯು.ಟಿ.ಖಾದರ್

ಬೆಂಗಳೂರು, ಅ.28– ಸ್ಪೀಕರ್ ಯು.ಟಿ.ಖಾದರ್‌ಗೂ ಭ್ರಷ್ಟಾಚಾರದ ಆರೋಪ ಮೆತ್ತಿಕೊಂಡಿದ್ದು, ತನಿಖೆಗೆ ಪ್ರತಿಪಕ್ಷ ಬಿಜೆಪಿ ಆಗ್ರಹಿಸಿದೆ. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸ್ಪೀಕರ್ ಹಾಗೂ ಹಾಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಯು.ಟಿ.ಖಾದರ್ ಸ್ಪೀಕರ್ ಹುದ್ದೆಯ ಘನತೆಗೆ ತಕ್ಕುದಾಗಿ ನಡೆದುಕೊಳ್ಳುತ್ತಿಲ್ಲ. ಪಕ್ಷಪಾತಿಯಾಗಿದ್ದು, ಆಡಳಿತ ಸುಧಾರಣೆ ಹೆಸರಿನಲ್ಲಿ ಅನೇಕ ಭ್ರಷ್ಟಾಚಾರ ನಡೆಯುತ್ತಿದೆ. ಈ ಕುರಿತು ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಮಸಾಜ್ ಪಾರ್ಲರ್ ರೀತಿ ರಿಕ್ಲೇನರ್ ಚೇರ್: ವಿಧಾನಸಭೆಯ ಪ್ರಧಾನ ಬಾಗಿಲಿಗೆ ರೋಸ್‌ವುಡ್‌ನ ಮರದ ಕೆತ್ತನೆಯ ಚೌಕಟ್ಟನ್ನು ಮಾಡಿಸಿದಂದಿನಿಂದ ಭ್ರಷ್ಟಾಚಾರದ ಆರೋಪಗಳು ಆರಂಭವಾಗಿತ್ತು. ತಮಗೆ ಬೇಕಾದವರಿಗೆ ಬಾಗಿಲು ಮಾಡುವ ಕೆಲಸ ನೀಡಿದ್ದರು. ಸಭಾಂಗಣಕ್ಕೆ ಹೊಸ ಟಿ.ವಿ. ಸೆಟ್ ಅನ್ನು ಅಳವಡಿಸಿದ್ದರು. ಎಐ ಮಾನಿಟರ್ ಸಿಸ್ಟಂ ಅನ್ನು ಹಾಕಲು ಸಾಕಷ್ಟು ಖರ್ಚು ವೆಚ್ಚಗಳಾಗಿವೆ. ಎಲ್ಲ ಶಾಸಕರಿಗೆ ಗಂಡಭೇರುಂಡ ಹೋಲಿಕೆಯ ಗಡಿಯಾರಗಳನ್ನು ಕೊಟ್ಟರು. ಮೊಗಸಾಲೆಯಲ್ಲಿ ಮಸಾಜ್ ಪಾರ್ಲರ್ ರೀತಿ ರಿಕ್ಲೇನರ್ ಚೇರ್, ಮಸಾಜ್ ಚೇರ್ ಹಾಕಿಸಿದ್ದರು. ಇದಕ್ಕೆ ಶಾಸಕರು, ಮಂತ್ರಿಗಳೇ ವಿರೋಧ ಮಾಡಿದ್ದಾರೆ ಎಂದರು.

ಸರ್ಕಾರದ ವತಿಯಿಂದ ಊಟ, ಉಪಹಾರ ಅಗತ್ಯವಿತ್ತೇ: ಸರ್ಕಾರದ ವತಿಯಿಂದ ಊಟ, ಉಪಹಾರ ಕೊಡಲು ಸ್ಪೀಕರ್ ಆರಂಭಿಸಿದರು. ಇದು ಅಗತ್ಯವಿತ್ತೇ ಎಂದು ಪ್ರಶ್ನಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿ, ಹಾಸು ಹೊದಿಕೆ ಬದಲಿಸಿ, ಕಾರ್ಪೆಟ್ ಹಾಕಿಸಿದ್ದರು. ಇದರಲ್ಲೆಲ್ಲ ಏನೋ ಅನುಮಾನ ಬರುತ್ತದೆ ಎಂದು ಹೇಳಿದರು.

ಬೇಕಾಬಿಟ್ಟಿ ದುಂದು ವೆಚ್ಚ: ಶಾಸಕರ ಭವನದಲ್ಲಿ ಶಾಸಕರ ಕೊಠಡಿಗಳನ್ನು ಭದ್ರಪಡಿಸಲು, ಇನ್ನಷ್ಟು ವ್ಯವಸ್ಥೆ ಕಲ್ಪಿಸಿ ಕೊಡಲು ಸ್ಮಾರ್ಟ್ ಡೋರ್ ಲಾಕರ್ ಹಾಕಿಸಿದರು. ಇದಕ್ಕೆ ರೂ. 49 ಸಾವಿರ ವೆಚ್ಚ ತೋರಿಸಿದ ಖಾದರ್, ಸ್ಮಾರ್ಟ್ ಸೇಫ್ ಲಾಕರ್ ಹಾಕಿಸಿದರು. ಮಾರ್ಕೆಟ್‌ನಲ್ಲಿ ರೂ. 10–15 ಸಾವಿರಕ್ಕೆ ಸಿಗುವ ಸ್ಮಾರ್ಟ್ ಸೇಫ್ ಲಾಕರ್‌ಗೆ ರೂ. 35 ಸಾವಿರ ದರ ವಿಧಿಸಿದ್ದಾರೆ ಎಂದು ಆರೋಪಿಸಿದರು.

ಮಾರುಕಟ್ಟೆಯಲ್ಲಿ ಸುಮಾರು 30 ಸಾವಿರಕ್ಕೆ ಲಭ್ಯ ಇರುವ ಸ್ಮಾರ್ಟ್ ಎನರ್ಜಿ ಸೊಲ್ಯೂಷನ್‌ಗೆ 90,500 ರೂ. ವಿಧಿಸಿದ್ದಾರೆ. ಸ್ಟೇನ್‌ಲೆಸ್ ಸ್ಟೀಲ್ ವಾಟರ್ ಪ್ಯೂರಿಫೈಯರ್ ಆನ್‌ಲೈನ್‌ನಲ್ಲಿ 16 ಸಾವಿರದಿಂದ 53 ಸಾವಿರದಲ್ಲಿ ಲಭ್ಯವಿದ್ದು, 65 ಸಾವಿರ ವಿಧಿಸಲಾಗಿದೆ. ಒಟ್ಟು 235 ರಷ್ಟು ಖರೀದಿ ಆಗಿದೆ. 123 ಸ್ಮಾರ್ಟ್ ಎನರ್ಜಿ ಸೊಲ್ಯೂಷನ್ ಖರೀದಿ ಮಾಡಿದ್ದಾರೆ. 224 ಸೇಫ್ ಲಾಕರ್, ಅಷ್ಟೇ ಸಂಖ್ಯೆಯ ಡೋರ್ ಲಾಕರ್ ಖರೀದಿ ಮಾಡಿದ್ದಾರೆ ಎಂದು ತಿಳಿಸಿದರು.

4–5 ದಿನಗಳ ಪುಸ್ತಕ ಮೇಳಕ್ಕೆ 4.5 ಕೋಟಿ ವೆಚ್ಚ: 4–5 ದಿನಗಳ ಪುಸ್ತಕ ಮೇಳಕ್ಕೆ 4.5 ಕೋಟಿ ಖರ್ಚು ಮಾಡಿದ್ದಾರೆ. ಪುಸ್ತಕ ಕೊಂಡು ಹಂಚಿದರೂ ಇಷ್ಟಾಗುತ್ತಿರಲಿಲ್ಲ ಇವರು ಸ್ಟಾಲ್ ಹಾಕುವುದು ಬಿಟ್ಟು ಬೇರೇನೂ ಇಲ್ಲ. ಲೈಟಿಂಗ್ ಮಾಡಿದ್ದಾರೆ. ಶಾಸಕರ ಭವನಕ್ಕೆ ಮಂಚ, ಟೇಬಲ್ ಹಾಕಿಸಿದ್ದಾರೆ. ಯು.ಟಿ.ಖಾದರ್ ಅವರು ಈಗಲೂ ವಿದೇಶದಲ್ಲೇ ಇದ್ದಾರೆ. ಅವರು ಎಷ್ಟು ದೇಶಗಳಿಗೆ ಹೋಗಿದ್ದಾರೆ. ಅವರೆಷ್ಟು ಖರ್ಚು ಹಾಕಿ ಸರ್ಕಾರ ಎಷ್ಟು ಹಣ ಕೊಟ್ಟಿದೆ ಎಂದು ಕೇಳಿದರು.

ನಾನೂ ಸ್ಪೀಕರ್ ಆಗಿ ವಿದೇಶಗಳಿಗೆ ಹೋಗಿದ್ದೇನೆ. ನಮಗಿರೋ ಅವಕಾಶ ಮೀರಿ, ಎಷ್ಟು ಪ್ರವಾಸ ಮಾಡಿದ್ದಾರೆ. ಯಾರ–ಯಾರ ಜತೆ ಪ್ರವಾಸ ಮಾಡಿದ್ದಾರೆ, ಇವೆಲ್ಲವನ್ನೂ ಬಹಿರಂಗಗೊಳಿಸಿ. ಸ್ಪೀಕರ್ ಸ್ಥಾನವನ್ನು ಆರ್‌ಟಿಐ ವ್ಯಾಪ್ತಿಗೆ ತರಬೇಕು ಎಂದು ಒತ್ತಾಯಿಸಿದರು.

ಪ್ರಿಯಾಂಕ್ ಖರ್ಗೆಗೆ ಅಸ್ಸಾಂ ಬಿಜೆಪಿ ಘಟಕ ತಿರುಗೇಟು



ಪ್ರಿಯಾಂಕ್ ಖರ್ಗೆ

ಗೌಹಾತಿ, ಅ.28–ಸೆಮಿಕಂಡಕ್ಟರ್ ಕೈಗಾರಿಕೆಗಳ ಕುರಿತ ನಾನು ನೀಡಿದ್ದ ಹೇಳಿಕೆಯನ್ನು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿರುಚಿದ್ದಾರೆ ಎಂಬ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಕ್ಕೆ ಅಸ್ಸಾಂ ಬಿಜೆಪಿ ತಿರುಗೇಟು ನೀಡಿದೆ.

ಪ್ರಿಯಾಂಕ್ ಖರ್ಗೆ ಎಕ್ಸ್ ಸಂದೇಶಕ್ಕೆ ಪ್ರತಿಕ್ರಿಯಿಸಿರುವ ಅಸ್ಸಾಂ ಬಿಜೆಪಿ, ಸುದೀರ್ಘವಾದ ಪ್ರಬಂಧ ಬರೆದ ಕೂಡಲೇ ಯಾರೂ ಸೆಮಿಕಂಡಕ್ಟರ್ ತಜ್ಞ ಆಗುವುದಿಲ್ಲ. ಮೊದಲು, ದಕ್ಷಿಣ ಭಾರತದ ಬಡತನ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಲ್ಲಿರುವ ನಿಮ್ಮ ಕಲಬುರಗಿ ಜಿಲ್ಲೆಯ ಬಗ್ಗೆ ಕಾಳಜಿ ವಹಿಸಿ ಎಂದು ಹೇಳಿದೆ.

ಪ್ರಿಯಾಂಕ್ ಖರ್ಗೆಯವರ ಎಕ್ಸ್ ಸಂದೇಶವನ್ನು ಟ್ಯಾಗ್ ಮಾಡಿ, 'ಹಲೋ ಟೆಡ್ಡಿ ಬಾಯ್, ಎಕ್ಸ್‌ನಲ್ಲಿ ಸುದೀರ್ಘ ಪ್ರಬಂಧ ಬರೆಯುವುದರಿಂದ ನೀವು ಸೆಮಿಕಂಡಕ್ಟರ್ ತಜ್ಞ ಆಗುವುದಿಲ್ಲ. ಅಸ್ಸಾಂ ಬಗ್ಗೆ ಉಪನ್ಯಾಸ ನೀಡುವ ಬದಲು ಆತ್ಮವಿಮರ್ಶೆ ಮಾಡಿಕೊಳ್ಳಿ, ದಕ್ಷಿಣ ಭಾರತದ ಬಡತನ ಶ್ರೇಯಾಂಕದಲ್ಲಿ ನಿಮ್ಮ ಜಿಲ್ಲೆ ಅಗ್ರ ಸ್ಥಾನದಲ್ಲಿದೆ ನಿಮ್ಮ 'ಟ್ಯಾಲೆಂಟ್ ಟ್ಯಾಂಕ್' ಬಗ್ಗೆ ತುಂಬಾನೇ ಹೇಳ್ತೀರಾ, ಅಲ್ವಾ' ಎಂದು ಹೇಳಿದೆ.

ಅಸ್ಸಾಂ ಬಿಜೆಪಿ ಎಕ್ಸ್ ಸಂದೇಶ: ಕರ್ನಾಟಕಕ್ಕೆ ಬರಬೇಕಿರುವ ಸೆಮಿಕಂಡಕ್ಟರ್ ಕೈಗಾರಿಕೆಗಳ ಹೂಡಿಕೆಗಳನ್ನು ಕೇಂದ್ರ ಸರ್ಕಾರ ಅಸ್ಸಾಂ ಮತ್ತು ಗುಜರಾತ್ ರಾಜ್ಯಗಳಿಗೆ ತಿರುಗಿಸುತ್ತಿದೆ ಎಂದು ಪ್ರಿಯಾಂಕ್ ಖರ್ಗೆ ಆರೋಪಿಸಿದ್ದರು. ಸೆಮಿಕಂಡಕ್ಟರ್ ಕೈಗಾರಿಕೆಗಳು ವಾಸ್ತವದಲ್ಲಿ ಬಯಸಿರೋದು ಬೆಂಗಳೂರನ್ನು. ಆದರೆ, ಅಸ್ಸಾಂ ಮತ್ತು ಗುಜರಾತ್‌ಗೆ ಏಕೆ ಹೋಗುತ್ತಿವೆ. ಅಲ್ಲಿ ಪ್ರತಿಭೆಗಳು ಇವೆಯೇ ಎಂದು ಪ್ರಶ್ನಿಸಿದ್ದರು.

ಇದು ಅಸ್ಸಾಂನ ಯುವಜನತೆಗೆ ಮಾಡಿರುವ ಅವಮಾನ ಎಂದು ಹೇಳಿದ್ದ ಹಿಮಂತ ಬಿಸ್ವ ಶರ್ಮಾ, ಪ್ರಿಯಾಂಕ್ ಖರ್ಗೆ 'ಫಸ್ಟ್ ಕ್ಲಾಸ್ ಈಡಿಯಟ್' ಎಂದು ಟೀಕಿಸಿದ್ದರು. ಇದಕ್ಕೆ ಪ್ರತಿಯಾಗಿ ಪ್ರಿಯಾಂಕ್ ಖರ್ಗೆ ಎಕ್ಸ್ ತಾಣದಲ್ಲಿ ಸೆಮಿಕಂಡಕ್ಟರ್ ಬಗ್ಗೆ ಹಾಗೂ ಅಸ್ಸಾಂ ಕುರಿತು ಸುದೀರ್ಘ ಬರಹ ಪ್ರಕಟಿಸಿದ್ದರು.

ಹಿಮಂತ ಬಿಸ್ವ ಶರ್ಮಾ ಹೇಳಿಕೆಯನ್ನು ತಿರುಚಿದ್ದಾರೆ ಎಂದು ಉಲ್ಲೇಖಿಸಿರುವ ಪ್ರಿಯಾಂಕ್ ಖರ್ಗೆ, ನೀತಿ ಆಯೋಗದ ಇತ್ತೀಚಿನ ವರದಿಯ ಪ್ರಕಾರ, ಸುಮಾರು ಒಂದು ದಶಕದ ಬಿಜೆಪಿ ಆಡಳಿತದ ನಂತರವೂ ಅಸ್ಸಾಂ ಇಂದು ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕ ಬೆಳವಣಿಗೆಯಂತಹ ನಿರ್ಣಾಯಕ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಕೊನೆಯ ಐದು ರಾಜ್ಯಗಳಲ್ಲಿ ಒಂದಾಗಿದೆ ಎಂದು ಟೀಕಿಸಿದ್ದರು.

ಹಿಕಾರು ನಕಮುರಾ ಮಣಿಸಿ ಸೇಡು ತೀರಿಸಿಕೊಂಡ ಗುಕೇಶ್

ಭಾರತದ ಆಟಗಾರನ ನಡೆಗೆ ವ್ಯಾಪಕ ಶ್ಲಾಘನೆ



ಸೆಂಟ್ ಲೂಯಿಸ್, ಅ.28– ಈ ಹಿಂದೆ ಭಾರತದ ಗುಕೇಶ್ ವಿರುದ್ಧ ಗೆದ್ದು ಅವರ 'ಕಿಂಗ್' ಅನ್ನು ಎಸೆದು ಸಂಭ್ರಮಿಸಿದ್ದ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹಿಕಾರು ನಕಮುರಾ ವಿರುದ್ಧ ಗೆಲುವು ಸಾಧಿಸಿ ಸೌಮ್ಯ ಸಂಭ್ರಮದ ಮೂಲದ ಭಾರತದ ಆಟಗಾರ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಅಮೆರಿಕದ ಸೆಂಟ್ ಲೂಯಿಸ್‌ನಲ್ಲಿ ನಡೆದ ಕ್ಲಚ್ ಚೆಸ್ ಚಾಂಪಿಯನ್ಸ್ ಶೋಡೌನ್ 2025 ಟೂರ್ನಿಯ ನಿರ್ಣಾಯಕ ಪಂದ್ಯದಲ್ಲಿ ಭಾರತದ ಗುಕೇಶ್ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹಿಕಾರು ನಕಮುರಾ ವಿರುದ್ಧ ರೋಚಕ ಗೆಲುವು ಸಾಧಿಸಿದರು. ಹಿಕಾರು ನಕಮುರಾ ವಿರುದ್ಧ ಗುಕೇಶ್ ಕ್ಷಿಪ್ರ ಸ್ವರೂಪದಲ್ಲಿ ನಿರ್ಣಾಯಕ ಗೆಲುವು ಸಾಧಿಸಿದರು.

ಪಂದ್ಯದುದ್ದಕ್ಕೂ ರೋಚಕತೆಯ ಹೊರತಾಗಿಯೂ ಸಂಯಮ ಕಾಯ್ದುಕೊಂಡ ಗುಕೇಶ್ ಅಂತಿಮವಾಗಿ ನಕಮುರಾ ವಿರುದ್ಧ ವಿರೋಚಿತ ಜಯ ಸಾಧಿಸಿದರು.

ಸೋಲು ಖಚಿತವಾಗುತ್ತಲೇ ನುಣುಚಿಕೊಂಡ ನಕಮುರಾ: ಈ ಪಂದ್ಯದಲ್ಲಿ ಹಿಕಾರು ನಕಮುರಾ ತಮ್ಮ ಸೋಲು ಖಚಿತವಾಗುತ್ತಲೇ ಗುಕೇಶ್‌ಗೆ ಹಸ್ತಲಾಘವ ಮಾಡಿ ಎದ್ದು ಹೊರಟು ಹೋದರು. ಆದರೆ ಕಳೆದ ಪಂದ್ಯದಲ್ಲಿನ ವಿವಾದ ಹೊರತಾಗಿಯೂ ಗುಕೇಶ್ ಮಾತ್ರ ಸಂಯಮ ಕಳೆದುಕೊಳ್ಳದೇ ನಗುತ್ತಲೇ ಕಳುಹಿಸಿಕೊಟ್ಟರು.

ಗುಕೇಶ್ ನಡೆಗೆ ಎಲ್ಲರ ಮೆಚ್ಚುಗೆ: ಇನ್ನು ಪಂದ್ಯ ಮುಕ್ತಾಯದ ಬಳಿಕ ಗುಕೇಶ್ ನಡೆದುಕೊಂಡ ರೀತಿ ಕೂಡ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಕಮುರಾ ಸೋಲಿನಿಂದ ಎದ್ದು ಹೋರಟ ಬಳಿಕ ಗುಕೇಶ್ ಕೂಡ ಎದ್ದು ಹೊರಡಬಹುದಿತ್ತು. ಆದರೆ ಗುಕೇಶ್ ಅಲ್ಲಿಯೇ ಇದ್ದು ಎಲ್ಲ ಕಾಯಿನ್‌ಗಳನ್ನು ಮತ್ತೆ ಚದುರಂಗದ ಬೋರ್ಡ್ ಮೇಲೆ ಜೋಡಿಸಿ ಸಹಾಯಕರಿಗೆ ನೆರವು ನೀಡಿದರು. ಇದು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.

ಕಿಂಗ್ ಎಸೆದಿದ್ದ ನಕಮುರಾ: ಈ ಹಿಂದೆ ಅಂತಾರಾಷ್ಟ್ರೀಯ ಚೆಸ್ ಕ್ರೀಡಾಕೂಟದಲ್ಲಿ ಭಾರತದ ಗುಕೇಶ್ ವಿರುದ್ಧ ಗೆದ್ದ ಬಳಿಕ ಅಮೆರಿಕದ ಹಿಕಾರು ನಕಮುರಾ ಗುಕೇಶ್‌ರ ಕಿಂಗ್ ಎಸೆದು ವಿಲಕ್ಷಣವಾಗಿ ಸಂಭ್ರಮಿಸಿದ್ದರು. ಅಂದು ಟೆಕ್ಸಾಸ್ ನ ಆರ್ಲಿಂಗ್ಟನ್‌ನಲ್ಲಿ ನಡೆದ 'ಚೆಕ್‌ಮೇಟ್' ಟೂರ್ನಿಯ ಮೊದಲ ಸುತ್ತಿನಲ್ಲಿ ಐದು ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತದ ವಿರುದ್ಧ ಅಮೆರಿಕ ಕ್ಲೀನ್ ಸ್ವೀಪ್ ಮಾಡಿದೆ. ಆದರೆ, ಈ ಗೆಲುವನ್ನು ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹಿಕಾರು ನಕಮುರಾ ಸಂಭ್ರಮಿಸಿದ ರೀತಿ ವ್ಯಾಪಕ ಟೀಕೆಗೆ ಗುರಿಯಾಗಿತ್ತು.

ದಲಿತ 'ಶಕ್ತಿ ಪ್ರದರ್ಶನ'ಕ್ಕೆ ತಯಾರಿ: ಪರಮೇಶ್ವರ–ಮಹದೇವಪ್ಪ ರಹಸ್ಯ ಸಭೆ



ಜಿ. ಪರಮೇಶ್ವರ



ಮಹದೇವಪ್ಪ

ಬೆಂಗಳೂರು: ಹೈಕಮಾಂಡ್ ತೀರ್ಮಾನಿಸಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳುವ ಮೂಲಕ ನಾಯಕತ್ವ ಬದಲಾವಣೆ ಕುರಿತ ಚರ್ಚೆಗೆ ಸಿದ್ದರಾಮಯ್ಯ ಹೊಸ ಆಯಾಮ ನೀಡಿದ್ದಾರೆ. ಆ ಬೆನ್ನಲ್ಲೆ, ಸಚಿವರಾದ ಜಿ. ಪರಮೇಶ್ವರ ಮತ್ತು ಎಚ್.ಸಿ. ಮಹದೇವಪ್ಪ ರಹಸ್ಯ ಸಭೆ ನಡೆಸಿರುವುದು ಕಾಂಗ್ರೆಸ್ ಪಾಳಯದಲ್ಲಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಮಹದೇವಪ್ಪ ಅವರ ನಿವಾಸಕ್ಕೆ ಮಂಗಳವಾರ ಬೆಳಿಗ್ಗೆ ತೆರಳಿದ ಪರಮೇಶ್ವರ ಒಂದು ಗಂಟೆಗೂ ಹೆಚ್ಚು ಸಮಾಲೋಚನೆ ನಡೆಸಿದರು. ಸಭೆಯ ನಂತರ ಉಭಯ ನಾಯಕರು, ನಮ್ಮದು ರಾಜಕೀಯ ಸಭೆಯಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಆದರೆ, ಸಚಿವರ ಈ ನಡೆ ಕುತೂಹಲ ಕೆರಳಿಸಿದೆ. ದಲಿತ ಸಮಾವೇಶ ಆಯೋಜಿಸಿ ಶಕ್ತಿ ಪ್ರದರ್ಶನಕ್ಕೆ ಸಚಿವರು ಮುಂದಾಗಿದ್ದು, ಈ ಬಗ್ಗೆ ಇಬ್ಬರೂ ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಸಭೆಯ ನಂತರ ಮಾತನಾಡಿದ ಪರಮೇಶ್ವರ, ನಮ್ಮ ದೃಷ್ಟಿಯಿಂದ ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ಅದೇನೇ ಇದ್ದರೂ ನಾಯಕತ್ವ ಬದಲಾವಣೆ ಕುರಿತ ಗೊಂದಲವನ್ನು ಹೈಕಮಾಂಡ್ ಬಗೆಹರಿಸಲಿ ಎಂದು ಆಗ್ರಹಿಸಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾವೆಲ್ಲರೂ ಸೇರಿ ಸಿದ್ದರಾಮಯ್ಯ ಅವರನ್ನು ಐದು ವರ್ಷಗಳಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದೇವೆ. ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್‌ನಿಂದಾಗಲಿ, ಬೇರೆ ಯಾರಿಂದಲೂ ನಮಗೆ ಯಾವುದೇ ಮಾಹಿತಿ ಇರಲಿಲ್ಲ. ಮುಂದೆ ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೊ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದರು.

ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡ ಪರಮೇಶ್ವರ, ಅವರ ಹೇಳಿಕೆಯಲ್ಲಿ ತಪ್ಪೇನಿದೆ, ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ. ಹೈಕಮಾಂಡ್‌ಗೆ ಎಲ್ಲವೂ ಗೊತ್ತಿದೆ. ಸಂದರ್ಭ ಬಂದಾಗ ನಾಯಕತ್ವಕ್ಕೆ ಸಂಬಂಧಿಸಿದ ಎಲ್ಲ ಗೊಂದಲಗಳನ್ನು ಬಗೆಹರಿಸುವಂತೆ ನಾನೂ ಹೈಕಮಾಂಡ್‌ಗೆ ಹೇಳುತ್ತೇನೆ ಎಂದೂ ಹೇಳಿದರು.

ಯೋಗೀಶ ಕೊಲೆ ಪ್ರಕರಣದ ಸಾಕ್ಷ್ಯ ನಾಶ: ಸಿಬಿಐ ಅರ್ಜಿ ಪುರಸ್ಕರಿಸಿದ ಸುಪ್ರೀಂಕೋರ್ಟ್

ನವದೆಹಲಿ: ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿರುವ ಸಂಬಂಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂಕೋರ್ಟ್ ಮಂಗಳವಾರ ಪುರಸ್ಕರಿಸಿದೆ. ಇದರಿಂದಾಗಿ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸಂಕಷ್ಟ ಎದುರಾಗಿದೆ.

ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿದ ಬಗ್ಗೆ ಕುಲಕರ್ಣಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. ಈ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ತನಿಖಾ ತಂಡವು ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

2016ರ ಜೂನ್ 15ರಂದು ಧಾರವಾಡದ ಸಪ್ತಾಪುರದಲ್ಲಿರುವ ಜಿಮ್ ಎದುರು ಯೋಗೀಶಗೌಡ ಕೊಲೆ ನಡೆದಿತ್ತು. 2019ರ ಸೆಪ್ಟೆಂಬರ್ 6ರಂದು ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಆದೇಶಿಸಿತ್ತು. ಸಿಬಿಐ ತನಿಖೆಯನ್ನು ಅಮಾನತಿನಲ್ಲಿ ಇರಿಸಿ ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ 2020ರ ಫೆಬ್ರುವರಿ 21ರಂದು ತಡೆ ನೀಡಿದ್ದರಿಂದ ತನಿಖೆ ಮುಂದುವರಿಸಿದ್ದ ಸಿಬಿಐ, 2020ರ ನವೆಂಬರ್ 5ರಂದು ವಿನಯ್ ಕುಲಕರ್ಣಿ ಅವರನ್ನು ಬಂಧಿಸಿತ್ತು.

ಇಂದಿನಿಂದ ಇಂಡೋ–ಆಸೀಸ್ ಟಿ20 ಸರಣಿ: ಉತ್ತಮ ಲಯದಲ್ಲಿ ಟೀಂ ಇಂಡಿಯಾ

ಕ್ಯಾನ್‌ಬೆರಾ, ಅ.28(ವಿವಿಹೆಚ್)– ಭಾರತ ಮತ್ತು ಆಸ್ಟ್ರೇಲಿಯಾ ನಡುವಣ 5 ಟಿ20 ಪಂದ್ಯಗಳ ಸರಣಿ ನಾಳೆ(ಅ.29)ಯಿಂದ ಆರಂಭವಾಗಲಿದೆ.

ಈಗಾಗಲೇ 3 ಏಕದಿನ ಸರಣಿ ಸೋತಿರುವ ಭಾರತ ತಂಡಕ್ಕೆ ನಾಯಕ ಸೂರ್ಯಕುಮಾರ್ ಯಾದವ್, ಶಿವಂ ದುಬೆ ಹಾಗೂ ಅನುಭವಿ ಜಸ್ಪ್ರಿತ್ ಬುಮ್ರಾ ಉಪಸ್ಥಿತಿಯಲ್ಲಿ ಲಯದಲ್ಲಿರುವ ತಂಡ 5 ಪಂದ್ಯಗಳ ಟಿ20 ಸರಣಿಯಲ್ಲಿ ಪುಟಿದೇಳುವ ನಿರೀಕ್ಷೆಯಿದೆ.



ಭಾರತ ಮತ್ತು ಆಸ್ಟ್ರೇಲಿಯಾ ಟಿ20 ಸರಣಿ ವೇಳಾಪಟ್ಟಿ

- ಅ.29: ಮೊದಲ ಟಿ20 ಪಂದ್ಯ (ಮನುಕಾ ಓವಲ್, ಕ್ಯಾನ್‌ಬೆರಾ)
- ಅ.31: ಎರಡನೇ ಟಿ20 ಪಂದ್ಯ (ಮೆಲ್ಬೋರ್ನ್ ಕ್ರಿಕೆಟ್ ಮೈದಾನ)
- ನ.2: ಮೂರನೇ ಟಿ20 ಪಂದ್ಯ (ಬೆಲ್ಲೆರಿವ್ ಓವಲ್, ಹೋಬಾರ್ಟ್)
- ನ.6: ನಾಲ್ಕನೇ ಟಿ20 ಪಂದ್ಯ (ಗೋಲ್ಡ್ ಕೋಸ್ಟ್ ಕ್ರೀಡಾಂಗಣ, ಕ್ಯಾರಾರಾ)
- ನ.8: ಐದನೇ ಟಿ20 ಪಂದ್ಯ (ದಿ ಗಬ್ಬಾ, ಬ್ರಿಸ್ಬೇನ್)

2017ರಲ್ಲಿ ಎಂ.ಎಸ್.ಧೋನಿ ನಾಯಕತ್ವದಲ್ಲಿ ಭಾರತ ಆಸೀಸ್ ತಂಡವನ್ನು ಆಸ್ಟ್ರೇಲಿಯಾದಲ್ಲಿ 3–0 ಅಂತರದಿಂದ ಬಗ್ಗುಬಡಿದು ಕ್ಲೀನ್ ಸ್ವೀಪ್ ಮಾಡಿತ್ತು. ಇತ್ತಂಡಗಳು ಈವರೆಗೆ 32 ಬಾರಿ ಮುಖಾಮುಖಿಯಾಗಿದ್ದು, ಇದರಲ್ಲಿ ಭಾರತ 20 ಬಾರಿ ಗೆದ್ದು ಪಾರುಪತ್ಯ ಮೆರೆದಿದೆ. ಆಸೀಸ್ 11 ಪಂದ್ಯಗಳಲ್ಲಿ ಗೆಲುವು ದಾಖಲಿಸಿದ್ದು, 1 ಪಂದ್ಯ ರದ್ದಾಗಿದೆ. ಇನ್ನು 2023ರಲ್ಲಿ ಭಾರತ ಪ್ರವಾಸ ಕೈಗೊಂಡಿದ್ದ ಆಸೀಸ್ 5 ಟಿ20 ಪಂದ್ಯಗಳಲ್ಲಿ 4–1ರಲ್ಲಿ ಹೀನಾಯವಾಗಿ ಸೋಲು ಕಂಡಿತ್ತು.

ಕ್ಯಾನ್‌ಬೆರಾದ ಮನುಕಾ ಓವಲ್ ಮೈದಾನದಲ್ಲಿ ನಾಳೆ ಭಾರತ ಮತ್ತು ಆಸೀಸ್ ಮೊದಲ ಪಂದ್ಯ ಆಡಲಿದೆ. ಏಕದಿನ ಸರಣಿ ಗೆದ್ದ ಉತ್ಸಾಹದಲ್ಲಿರುವ ಮಿಚೆಲ್ ಮಾರ್ಷ್ ಟಿ20ಯಲ್ಲೂ ಕಮಾಲ್ ಮಾಡಲಿದ್ದಾರೆಯೇ ಎಂಬುದನ್ನು ನೋಡಬೇಕಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಆಲ್‌ರೌಂಡರ್ ಜಡೇಜಾ ಅನುಪಸ್ಥಿತಿಯಲ್ಲಿ ಟಿ20 ಮಾದರಿಯಲ್ಲಿ ತಂಡವನ್ನು ಯುವ ಬಳಗದೊಂದಿಗೆ ಅತ್ಯಂತ ಜವಾಬ್ದಾರಿಯುತವಾಗಿ ಸೂರ್ಯಕುಮಾರ್ ಯಾದವ್ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ತಂಡದಲ್ಲಿ ಆರಂಭಿಕರಾಗಿ ಅಭಿಷೇಕ್ ಶರ್ಮಾ ಮತ್ತು ಗಿಲ್ ಕಣಕ್ಕಿಳಿಯಲಿದ್ದು, ತಿಲಕ್ ವರ್ಮಾ, ನಾಯಕ ಸೂರ್ಯಕುಮಾರ್ ಯಾದವ್ ಮತ್ತು ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಮಿಡಲ್ ಆರ್ಡರ್ ಅಲ್ಲಿ ಬಲ ತುಂಬಲಿದ್ದಾರೆ.

ಕೆಳ ಹಂತದಲ್ಲಿ ಅಕ್ಷರ್ ಪಟೇಲ್ ಹಾಗೂ ವಾಷಿಂಗ್ಟನ್ ಸುಂದರ್ ಆಲ್‌ರೌಂಡರ್ ಆಗಿದ್ದರೆ, ಪವರ ಹಿಟ್ಟರ್ ರಿಂಕು ಸಿಂಗ್ ಹಾಗೂ ದುಬೆ ತಂಡವನ್ನು ಗೆಲ್ಲಿಸಿಕೊಡಬಲ್ಲ ಆಟಗಾರರಾಗಿದ್ದಾರೆ.

ಇನ್ನು ಬೌಲಿಂಗ್ ವಿಭಾಗದಲ್ಲಿ ಅನುಭವಿ ಬುಮ್ರಾ, ಅರ್ಶ್‌ದೀಪ್ ಸಿಂಗ್ ಮತ್ತು ಕುಲ್ದೀಪ್ ಯಾದವ್‌ಗೆ ವರುಣ್ ಚಕ್ರವರ್ತಿ, ನಿತೀಶ್ ಕುಮಾರ್ ರೆಡ್ಡಿ ಹಾಗೂ ಹರ್ಷಿತ್ ರಾಣಾ ಸಾಥ್ ನೀಡಲು ಸಿದ್ಧರಿದ್ದಾರೆ. ಸಂಜುಗೆ ಸ್ಟೇರ್ ಆಗಿ ಜಿತೇಶ್ ಶರ್ಮಾ ಇದ್ದಾರೆ.

ಇತ್ತ ಎಲ್ಲಾ ಉತ್ತಮ ಆಟಗಾರರನ್ನೊಳಗೊಂಡಿರುವ ಭಾರತ ತಂಡದಲ್ಲಿ ಆಡುವ 11ರ ಬಳಗ ಆಯ್ಕೆಯೇ ದೊಡ್ಡ ಸಮಸ್ಯೆಯಾಗಿದ್ದು, ನಾಯಕ ಸೂರ್ಯ ಮತ್ತು ಮುಖ್ಯ ಕೋಚ್ ಗಂಭೀರ್ ಇದನ್ನು ಹೇಗೆ ನಿಭಾಹಿಸಲಿದ್ದಾರೆ ಎಂಬುದನ್ನು ಕಾದು ನೋಡಬೇಕು.

ಇತ್ತ ಬಲಿಷ್ಠ ಆಸೀಸ್ ತಂಡಕ್ಕೆ ಮಿಚೆಲ್ ಮಾರ್ಷ್ ನಾಯಕರಾಗಿದ್ದು, ಟಿಮ್ ಡೇವಿಡ್, ಮಾರ್ಕಸ್ ಸ್ಟೋಯ್ನಿಸ್, ಬೌಲರ್ ಜೋಷ್ ಹೇಜಲ್ವುಡ್, ಟ್ರಾವಿಸ್ ಹೆಡ್ ಉತ್ತಮ ಲಯದಲ್ಲಿದ್ದಾರೆ. ಇವರ ಆಕ್ರಮಣಕಾರಿ ಆಟಕ್ಕೆ ಟೀಂ ಇಂಡಿಯಾ ಕ್ರೀಡಾಂಗಣದಲ್ಲಿ ಪ್ರತಿತಂತ್ರ ಹೂಡಿ ಸೆಡ್ಡು ಹೊಡೆದು ನಿಲ್ಲಲಿದೆಯೇ ಎಂಬುದನ್ನು ಇನ್ನಷ್ಟೆ ಕಾಣಬೇಕಿದೆ.

ಇಂಡೋ–ಆಸೀಸ್‌ನ ಎಲ್ಲಾ 5 ಪಂದ್ಯಗಳು ಭಾರತೀಯ ಕಾಲಮಾನ ಮಧ್ಯಾಹ್ನ 1.45 ಗಂಟೆಗೆ ಆರಂಭವಾಗಲಿವೆ. ಈ ಸರಣಿಯನ್ನು ಸ್ಟಾರ್ ಸ್ಪೋರ್ಟ್ಸ್ ನೆಟ್ವರ್ಕ್ ಚಾನೆಲ್‌ಗಳಲ್ಲಿ ಮತ್ತು ಜಿಯೋ ಸ್ಟಾರ್‌ನಲ್ಲಿ ಲೈವ್ ಸ್ಟ್ರೀಮಿಂಗ್ ವೀಕ್ಷಿಸಬಹುದಾಗಿದೆ.

ನಕ್ಕರೆ ಅದೇ ಸ್ವರ್ಗ

ತಿಮ್ಮ : ಅಲ್ವೋ ಕಾಲಿಗೆ ಹಾವು ಕಚ್ಚಿ ಇನ್ನು ಐದು ನಿಮಿಷ ಆಗಲಿಲ್ಲ, ಅಷ್ಟರಲ್ಲೇ ಹೆಂಗೆ ಸತ್ತ?

ಗುಂಡ : ತಲೆಗೆ ವಿಷ ಏರುತ್ತೇನೋ ಎಂದು ಕುತ್ತಿಗೆಗೆ ಹಗ್ಗ ಬಿಗಿದಿದ್ವಿ!

ಮೈಸೂರು ಮಿತ್ರ

ಬುಧವಾರ, 29 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ತಿಳಿದವರೊಂದಿಗೆ ಅರ್ಧ ಗಂಟೆ ಕಳೆದರೆ ನಾಲ್ಕು ಪುಸ್ತಕಗಳನ್ನು ಓದಿದಂತೆ. ಯೋಗಿಗಳೊಂದಿಗೆ ಅರ್ಧ ಗಂಟೆ ಕಳೆದರೆ ಅರ್ಧ ಬದುಕನ್ನೇ ದಾಟಿದಂತೆ.
– ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

■ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣೆ

ಮಾನ್ಯರೇ



'ಕರ್ನಾಟಕ ರತ್ನ' ಡಾ. ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನು ಅಗಲಿ ಇಂದಿಗೆ (ಅ. 29) ನಾಲ್ಕು ವರ್ಷಗಳು. ಅವರ ಜೀವನವೇ ಒಂದು ಆದರ್ಶ ಪಥ. ಯಾವುದೇ ಅಹಂ ಇಲ್ಲದೆ, ಅತ್ಯಂತ ಸರಳ ಮತ್ತು ವಿನಮ್ರ ಗುಣದಿಂದ ಅವರು ನಡೆದುಕೊಂಡ ರೀತಿ ಎಲ್ಲರಿಗೂ ಮಾದರಿ. ಬಾಲ ನಟನಾಗಿ 'ಬೆಟ್ಟದ ಹೂವು' ಚಿತ್ರಕ್ಕಾಗಿ ಚಿಕ್ಕ ವಯಸ್ಸಿನಲ್ಲೇ ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಅಪೂರ್ವ ಪ್ರತಿಭೆ ಅವರದ್ದು. ಅವರ ನಟನೆಯಷ್ಟೇ ಪ್ರೀತಿಪಾತ್ರವಾದದ್ದು ಅವರ ಹೃದಯ ವೈಶಾಲ್ಯತೆ ಮತ್ತು ಮಾನವೀಯತೆ. ಅಸಂಖ್ಯಾತ ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಉಚಿತ ಶಾಲೆಗಳು ಮತ್ತು ಶಕ್ತಿಧಾಮದಂತಹ ಸಂಸ್ಥೆಗಳಿಗೆ ಅವರು ನೀಡಿದ ಕೊಡುಗೆ ದೊಡ್ಡದು. ಸಿನಿಮಾದಲ್ಲಿ 'ಪವರ್ ಸ್ಟಾರ್' ಆಗಿ ಮೆರೆದರೂ, ವೈಯಕ್ತಿಕ ಜೀವನದಲ್ಲಿ ಅವರು ಎಲ್ಲರೊಡನೆ ಬೆರೆಯುತ್ತಿದ್ದ ರೀತಿ ಅನನ್ಯ. ಅವರ ನಿಷ್ಕಲ್ಮಶ ನಗು ಕನ್ನಡಿಗರ ಮನೆ–ಮನಗಳಲ್ಲಿ ಎಂದಿಗೂ ಅಳಿಯದ ಒಂದು ಸಿಹಿ ನೆನಪು. ಅದ್ಭುತ ನೃತ್ಯಗಾರಿಕೆ, ಮನೋಜ್ಞ ಹಾಡುಗಾರಿಕೆ ಮತ್ತು ನಟನೆ ಹೀಗೆ ಹಲವು ಆಯಾಮಗಳಲ್ಲಿ ಕನ್ನಡಿಗರನ್ನು ರಂಜಿಸಿದ ಅವರು, ಜೀವನವನ್ನು ಉತ್ಸಾಹದಿಂದ ತುಂಬಿಕೊಂಡಿದ್ದರು.ಅಪ್ಪು ಇಂದು ನಮ್ಮ ಜೊತೆ ದೈಹಿಕವಾಗಿ ಇಲ್ಲದಿರಬಹುದು, ಆದರೆ ಅವರು ತಮ್ಮ ಕೆಲಸ, ಪ್ರೀತಿ ಮತ್ತು ಆದರ್ಶಗಳ ಮೂಲಕ ಕನ್ನಡಿಗರಿಗೆ ಸದಾ ಪ್ರೇರಣೆಯ ಚಿಲುಮೆಯಾಗಿ, ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧರಾದಿಯಾಗಿ ಎಲ್ಲರ ಮನದಲ್ಲಿ ಮರೆಯಲಾಗದ ಮಾಣಿಕ್ಯವಾಗಿ ಶಾಶ್ವತವಾಗಿ ನೆಲೆಸಿದ್ದಾರೆ. ಅವರು ತೋರಿದ ಸರಳತೆಯ ಹಾದಿ ಮತ್ತು ಮಾನವೀಯತೆಯ ದೀವಿಗೆ ಕರುನಾಡಿನಲ್ಲಿ ಎಂದೆಂದಿಗೂ ಉರಿಯುತ್ತಿರುತ್ತದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಸಾರಿಗೆ ಇಲಾಖೆ ಸುರಕ್ಷತಾ ಕ್ರಮ ಕೈಗೊಳ್ಳಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಸಂಭವಿಸುತ್ತಿರುವ ಬಸ್ ಅಪಘಾತಗಳು ಮತ್ತು ಬೆಂಕಿ ಅವಘಡಗಳು ನಮ್ಮೆಲ್ಲರಲ್ಲೂ ಆತಂಕ ಮೂಡಿಸಿವೆ. ಸಾರ್ವಜನಿಕ ಸಾರಿಗೆ ಸೇವೆಗಳು ಲಕ್ಷಾಂತರ ಜನರ ದಿನನಿತ್ಯದ ಜೀವನದ ಅವಿಭಾಜ್ಯ ಭಾಗವಾಗಿವೆ. ಆದರೆ ಸುರಕ್ಷತೆ ಕುರಿತಾಗಿ ಅಗತ್ಯ ಎಚ್ಚರಿಕೆ ಮತ್ತು ತಾಂತ್ರಿಕ ಸುಧಾರಣೆಗಳು ಇನ್ನೂ ಅಲ್ಪಮಟ್ಟದಲ್ಲೇ ಇವೆ. ನಮ್ಮ ರಾಜ್ಯದ ಬಸ್‌ಗಳಲ್ಲಿ ಅಗ್ನಿನಂದಕ (ಫೈರ್ ಎಕ್ಸ್‌ಟಿಂಗ್ವಿಷರ್) ಉಪಕರಣ ಕಡ್ಡಾಯವಾಗಿರಬೇಕು ಎಂಬ ನಿಯಮದ ಅನುಷ್ಠಾನವನ್ನು ಬಿಗಿಗೊಳಿಸುವ ಅವಶ್ಯಕತೆ ಇದೆ. ಅದೇ ರೀತಿ ಬಸ್‌ಗಳಲ್ಲಿ ತಾಪಮಾನ ನಿಯಂತ್ರಕ (ಟೆಂಪರೇಚರ್ ಸೆನ್ಸಾರ್) ಹಾಗೂ ಅಗ್ನಿ ಪತ್ತೆ ಯಂತ್ರ (ಸ್ಮೋಕ್ ಡಿಟೆಕ್ಟರ್) ಅಳವಡಿಸುವುದು ಅವಘಡದ ಮುನ್ನೆಚ್ಚರಿಕೆಗೆ ಸಹಕಾರಿಯಾಗುತ್ತದೆ. ಮತ್ತೊಂದು ಸೃಜನಾತ್ಮಕ ಯೋಚನೆ ಎಂದರೆ ಬಸ್‌ಗಳ ಮೇಲ್ಭಾಗದಲ್ಲಿ ಸ್ವಯಂಚಾಲಿತ ನೀರಿನ ಸಿಂಪಡಣೆ ವ್ಯವಸ್ಥೆ (ಆಟೋಮ್ಯಾಟಿಕ್ ವಾಟರ್ ಸ್ಪ್ರಿಂಕ್ಲರ್ ಸಿಸ್ಟಂ) ಅಳವಡಿಸುವುದು. ಅಗ್ನಿ ಕಾಣಿಸಿಕೊಂಡ ತಕ್ಷಣ ಅದು ಕಾರ್ಯ ನಿರ್ವಹಿಸಿ ಬೆಂಕಿಯನ್ನು ತಕ್ಷಣ ನಂದಿಸುತ್ತದೆ. ಮುಂದುವರೆದು ಬಸ್ ಚಾಲಕರು ಮತ್ತು ನಿರ್ವಾಹಕರು ಪ್ರತಿ ಆರು ತಿಂಗಳಿಗೊಮ್ಮೆ ಸುರಕ್ಷತಾ ತರಬೇತಿ ಪಡೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಪ್ರಯಾಣಿಕರಿಗೆ ತುರ್ತು ಪರಿಸ್ಥಿತಿಯಲ್ಲಿ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಮಾಹಿತಿ ಬಸ್ ಒಳ ಭಾಗದಲ್ಲೇ ಸ್ಪಷ್ಟವಾಗಿ ಪ್ರದರ್ಶಿಸಬೇಕು. ಸಾರಿಗೆ ಇಲಾಖೆಯು ಈ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಿ ಅನುಷ್ಠಾನ ಮಾಡಿದರೆ, ಸಾರ್ವಜನಿಕರು ಭಯರಹಿತವಾಗಿ, ಪ್ರಯಾಣಿಸಬಹುದು.

ಸರ್ಕಾರ ತಕ್ಷಣ ಈ ಕ್ರಮಗಳನ್ನು ಕೈಗೊಂಡು ಹೊಸ ಸುರಕ್ಷತಾ ನಿಯಮಗಳು ಕಡ್ಡಾಯಗೊಳಿಸಲಿ ಇಲ್ಲದಿದ್ದರೆ ಸಾರ್ವಜನಿಕರ ಆಕ್ರೋಶ ತಪ್ಪದು.

– ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

■ ಅರಣ್ಯ ಇಲಾಖೆ ನಿರ್ಲಕ್ಷ್ಯ, ಬೇಜವಾಬ್ದಾರಿ

ಮಾನ್ಯರೆ,

ಸರಗೂರು ತಾಲೂಕಿನ ಮುಳ್ಳೂರು ಬೆಣ್ಣೆಗೆರೆ ಗ್ರಾಮದಲ್ಲಿ ಹುಲಿ ದಾಳಿ ಮಾಡಿ ದನ ಮೇಯಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ಹತ್ಯೆಗೈದಿರುವುದು ತುಂಬಾ ದುಃಖಕರವಾದ ಸಂಗತಿ. ಹತ್ತು ದಿನಗಳ ಹಿಂದೆ ಇದೇ ತಾಲೂಕಿನ ಬಡಗಲಪುರ ಗ್ರಾಮದ ವ್ಯಕ್ತಿ ಒಬ್ಬರ ಮೇಲೆ ಹುಲಿ ದಾಳಿ ಮಾಡಿ ಅವರು ಕೂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು ಹುಲಿಗಳು ಸಂಚರಿಸುತ್ತಿರುವ ಬಗ್ಗೆ ಮಾಹಿತಿ ಪಡೆದು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಹುಲಿಗಳನ್ನು ಸೆರೆಹಿಡಿದಿದ್ದರೆ ನಿನ್ನೆಯ ಘಟನೆಯನ್ನು ತಪ್ಪಿಸಬಹುದಾಗಿತ್ತಲ್ಲವೇ. ಇದು ಅರಣ್ಯ ಇಲಾಖೆಯವರ ಬೇಜವಾಬ್ದಾರಿ ಮತ್ತು ನಿರ್ಲಕ್ಷವನ್ನು ತೋರಿಸುತ್ತಿದೆ. ತಮ್ಮ ತಮ್ಮ ಜಮೀನಿನಲ್ಲಿ ರೈತರು ದನಗಳನ್ನು ಮೇಯಿಸುವುದು ತಪ್ಪಾ? ಹಾಗಿದ್ದರೆ ಅವರು ಇನ್ನೆಲ್ಲಿಗೆ ದನ ಕರುಗಳನ್ನು ಬಿಡಬೇಕು? ರೈತರ ಜೀವಕ್ಕೆ ಬೆಲೆ ಇಲ್ಲವೇ. ಅವರ ಕುಟುಂಬದ ಗತಿ ಏನು? ಇಪ್ಪತ್ತು ಲಕ್ಷ ಪರಿಹಾರ ಘೋಷಿಸಿದರೆ ಸಾಕೇ? ಹೀಗೆ ಪರಿಹಾರ ಕೊಟ್ಟು ರೈತರ ಬಾಯಿ ಮುಚ್ಚಿಸುತ್ತೀರಾ? ಅಥವಾ ಹುಲಿಗಳನ್ನು ಸೆರೆಹಿಡಿಯಲು ಕ್ರಮ ಕೈಗೊಂಡು ತಾಲೂಕಿನ ರೈತರ ರಕ್ಷಣೆಗೆ ಮುಂದಾಗುತ್ತಿರೋ? ಇನ್ನೆಷ್ಟು ಬಲಿ ಬೇಕು? ಎಂದು ಹತ್ತು ಹಲವಾರು ಪ್ರಶ್ನೆಗಳು ಕಾಡುತ್ತಿವೆ. ಶಾಸಕರು, ಅರಣ್ಯ ಸಚಿವರು, ರೈತ ಸಂಘದ ಅಧ್ಯಕ್ಷರು ಇದರ ಬಗ್ಗೆ ಗಮನ ಹರಿಸಿ ಹುಲಿಗಳನ್ನು ಸೆರೆಹಿಡಿದು ಶಾಶ್ವತ ಕಡಿವಾಣ ಹಾಕಲಿ. ಕಾಲುವೆ ಏರಿ ಮೇಲೆ ಗಿಡ–ಗಂಟಿಗಳನ್ನು ತೆರವುಗೊಳಿಸಬೇಕು. ರೈತರು ಹಾಗೂ ಗ್ರಾಮಸ್ಥರು ನಿರಾಳವಾಗಿ ಓಡಾಡುವ ಹಾಗೆ ಆಗಲಿ.

–ರೂಪ ಎಂ. ಮುಳ್ಳೂರು, ಸೋಮನಾಥನಗರ, ಮೈಸೂರು.

■ ಶಾಲಾ ಮಕ್ಕಳಿಗೆ ಮೌಲ್ಯ ಶಿಕ್ಷಣ ಹೆಚ್ಚಾಗಲಿ

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ 33 ಅಂಕ ಸಾಕು ತೇರ್ಗಡೆಯಾಗಲು ಎಂದು ಶಿಕ್ಷಣ ಸಚಿವರು ಹೇಳಿರುವ ಹೇಳಿಕೆ ಕೆಲ ಮಕ್ಕಳಲ್ಲಿ ಕಡಿಮೆ ಅಂಕ ಪಡೆದು ಪಾಸ್ ಆಗಬಹುದು ಎಂಬ ಮನೋಭಾವ ಬರುತ್ತದೆ. ಅನುದಾನಿತ ಶಾಲೆಗಳಲ್ಲಿ ಒಂದರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಒಂದು ಅಥವಾ ಎರಡು ತರಗತಿಗಳು 10 ಮೌಲ್ಯ ಶಿಕ್ಷಣವನ್ನು ನೀಡಲಾಗುವುದು ಎಂದಿರುವುದು ಸ್ವಾಗತಾರ್ಹ. ಇಂತಹ ಮೌಲ್ಯ ಶಿಕ್ಷಣಗಳು ಹೆಚ್ಚಾಗಲಿ. ಅಂಕಗಳನ್ನು ಕೊಟ್ಟು ಮುಂದಿನ ತರಗತಿಗೆ ತೇರ್ಗಡೆ ಮಾಡುವುದು ಸರಿಯಾದ ಕ್ರಮವಲ್ಲ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಪ್ರಪಂಚದಲ್ಲೆಲ್ಲ ವ್ಯಾಪಿಸಿರುವ ಪಂಚತಂತ್ರ

ಸಂಸ್ಕೃತ ಭಾಷೆ ಜಗತ್ತಿಗೆ ನೀಡಿರುವ ಅದ್ಭುತ ಗ್ರಂಥಗಳಲ್ಲಿ ಪಂಚತಂತ್ರವೂ ಒಂದು. ರಾಮಾಯಣ, ಮಹಾಭಾರತಗಳಾದ ಮೇಲೆ ಜನಪ್ರಿಯತೆಯಲ್ಲಿ ಗಣನೆಗೆ ಬರುವುದು ಪಂಚತಂತ್ರವೇ. ಬಹು ಹಿಂದೆಯೇ ವಕ್ತೃ ಶ್ರೋತೃ ಪರಂಪರೆಯಿಂದ ಪ್ರಪಂಚದ ಎಷ್ಟೋ ದೇಶಗಳನ್ನು ತಲುಪಿ ಆ ಭಾಷೆಗಳಿಗೆ ಅನುವಾದಗೊಂಡು ಇಂದಿಗೂ ಪ್ರಸ್ತುತತೆಯನ್ನು ಉಳಿಸಿಕೊಂಡಿರುವ ವಿಶಿಷ್ಟ ಕಥಾಸಂಕಲನ ಪಂಚತಂತ್ರ. ಇದರಲ್ಲಿರುವ ಕಥೆಗಳು ಕಾಲ್ಪನಿಕ. ಇವುಗಳಲ್ಲಿ ಪ್ರಾಣಿಗಳೂ ಮಾತನಾಡುತ್ತವೆ, ಶ್ಲೋಕಗಳನ್ನೂ ಹೇಳುತ್ತವೆ. ಇಂತಹ ಕಥೆಗಳನ್ನು ಆಂಗ್ಲ ಭಾಷೆಯಲ್ಲಿ Fable ಎಂದು ಕರೆಯುತ್ತಾರೆ. Fable is a tale to teach a moral, often with animals or inanimate objects as character ಎಂದು ಅದರ ಲಕ್ಷಣವನ್ನು ಹೇಳುತ್ತಾರೆ. ಪಂಚತಂತ್ರದ ಉದ್ದೇಶ ಕಥೆಗಳ ಮೂಲಕ ನೀತಿ ಬೋಧನೆಯನ್ನು ಮಾಡುವುದಾಗಿದೆ. ಗ್ರಂಥಕ್ಕೆ ಈ ಹೆಸರು ಬರುವುದಕ್ಕೆ ಕಾರಣ ಇದರಲ್ಲಿ ಐದು ಭಾಗಗಳಿರುವುದು. ಒಂದೊಂದು ಭಾಗವೂ ಒಂದೊಂದು ತಂತ್ರವನ್ನು ವಿವರಿಸುತ್ತದೆ. ಆ ತಂತ್ರಗಳ ಹೆಸರುಗಳೇನೆಂದರೆ–**ಮಿತ್ರಭೇದ, ಮಿತ್ರ ಸಂಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತ ಕಾರಕ**. ಮಿತ್ರಭೇದದಲ್ಲಿ ಒಟ್ಟಾಗಿರುವ ಮಿತ್ರರ (ಗೆಳೆಯರ) ಒಗ್ಗಟ್ಟನ್ನು ಸ್ವಾರ್ಥಿಗಳು ಹೇಗೆ ಒಡೆದು ಹಾಕಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ ಎಂದು ಸೂಚಿಸಲಾಗಿದೆ. ಮಿತ್ರ ಸಂಪ್ರಾಪ್ತಿಯಲ್ಲಿ ಹೇಗೆ ಅಪರಿಚಿತರೂ ಪರಸ್ಪರ ಸ್ನೇಹದಿಂದ ಮಿತ್ರರಾಗುತ್ತಾರೆ ಎಂದು ತೋರಿಸಿದ್ದಾರೆ. ಕಾಕೋಲೂಕೀಯದಲ್ಲಿ ಜನ್ಮತಃ ವೈರಿಗಳಾದ ಕಾಗೆಗಳ ಮತ್ತು ಗೂಬೆಗಳ ಕಥೆಯನ್ನು ಹೇಳಿ ಒಂದು ಕಾಗೆ ಗೂಬೆಗಳ ಮೇಲೆ ಹೇಗೆ ಸೇಡನ್ನು ತೀರಿಸಿಕೊಂಡು ತನ್ನ ಬುದ್ಧಿಯನ್ನು ಪ್ರದರ್ಶಿಸಿತೆಂದು ಹೇಳಲಾಗಿದೆ. ಲಬ್ಧ ಪ್ರಣಾಶವೆಂದರೆ ಸಿಕ್ಕಿದ್ದನ್ನೂ ಅವಿವೇಕದಿಂದ ಕಳೆದುಕೊಳ್ಳುವವರ ಕಥೆ. ಅಪರೀಕ್ಷಿತಕಾರಕ ಸರಿಯಾಗಿ ಪರೀಕ್ಷಿಸದೆ ಕೆಲಸವನ್ನು ಆರಂಭಿಸಿ ಪಶ್ಚಾತ್ತಾಪ ಪಡುವವರ ಕಥೆ. ಈ ಐದು ತಂತ್ರಗಳನ್ನು ಕಥೆಗಳು, ಕಥೆಗಳೊಳಗಿನ ಕಥೆಗಳು ಎಂಬ ಉಪಾಯದಿಂದ ಹೇಳುವ ವಿಧಾನ ಆಕರ್ಷಣೆಯನ್ನುಂಟು ಮಾಡುತ್ತದೆ.

ಪಂಚತಂತ್ರವು ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಕನ್ನಡ ಭಾಷೆಯಲ್ಲಿ ಅವತರಿಸಿತು. ಹನ್ನೊಂದನೆಯ ಶತಮಾನದಲ್ಲಿ ದುರ್ಗಸಿಂಹನೆಂಬ ಕವಿಯು ಕನ್ನಡದಲ್ಲಿ ಪಂಚತಂತ್ರವನ್ನು ರಚಿಸಿದನು.

ವಿಷ್ಣುಶರ್ಮನ ಪಂಚತಂತ್ರವನ್ನು ಅನಂತರ ಕಾಲದಲ್ಲಿ ಹಲವರು ಕನ್ನಡದಲ್ಲಿ ಅನುವಾದಿಸಿದ್ದಾರೆ. ಈಚೆಗೆ (2022) ಡಾ.ಲೀಲಾಪ್ರಕಾಶ್ ಪಂಚತಂತ್ರದ ಮೊದಲನೆಯ ಭಾಗವಾದ ಮಿತ್ರಭೇದವನ್ನು ಅನುವಾದಿಸಿ ವಿದ್ಯುತ್ ಪ್ರಕಾಶನದಿಂದ ಪ್ರಕಟಿಸಿದ್ದಾರೆ.

ಡಾ.ಕೆ.ಲೀಲಾಪ್ರಕಾಶ್: ಇಪ್ಪತ್ತನೆಯ ಶತಮಾನದ ಆನಂದವರ್ಧನರೆಂದೇ ವಿದ್ವತ್ ಪ್ರಪಂಚದಲ್ಲಿ ಪ್ರಖ್ಯಾತರಾಗಿದ್ದ ಪ್ರಾತಃಸ್ಮರಣೀಯ ಡಾ.ಕೆ.ಕೃಷ್ಣಮೂರ್ತಿಗಳ ಸುಪುತ್ರಿ ಡಾ.ಕೆ. ಲೀಲಾಪ್ರಕಾಶ್ ಅವರು ತಂದೆಯ ಕೀರ್ತಿಯನ್ನು ಬೆಳೆಸುವ ಮಗಳಾಗಿ ಹೆಸರಾಂತ ವ್ಯಕ್ತಿಗಳಾಗಿದ್ದಾರೆ. ಪ್ರವಚನ ಪಟು, ಸಾಹಿತ್ಯ ಸರಸ್ವತಿ, ವಿದ್ಯಾವಾರಿಧಿ ಮುಂತಾದ ಹಲವು ಬಿರುದುಗಳಿಗೆ ಭಾಜನರಾಗಿ, ಕನ್ನಡ–ಸಂಸ್ಕೃತಗಳ ಕೊಂಡಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಲವಾರು ಅನುವಾದಗಳನ್ನೂ ಸ್ವತಂತ್ರ ಗ್ರಂಥಗಳನ್ನೂ ರಚಿಸಿ ಕನ್ನಡದ ಸಿರಿವಂತಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಪ್ರಸ್ತುತ ಪಂಚತಂತ್ರ ಭಾಗ–1 ಮಿತ್ರಭೇದ ಎಂಬ ಪುಸ್ತಕದಲ್ಲಿ ಅವರು ಬರೆದಿರುವ ಪಂಚತಂತ್ರದ ಬಗ್ಗೆ ಎಂಬ ಮುನ್ನುಡಿ



ಅಥವಾ ಪ್ರಸ್ತಾವನೆ ಅವರ ವೈದುಷ್ಯಕ್ಕೂ ಪರಿಶ್ರಮಕ್ಕೂ ಹಿಡಿದ ಕನ್ನಡಿಯಾಗಿದೆ. ಅರುವತ್ತು ಪುಟಗಳಷ್ಟು ದೀರ್ಘವಾಗಿರುವ ಈ ಮುನ್ನುಡಿಯಲ್ಲಿ ಕಥಾಸಾಹಿತ್ಯದ ಇತಿಹಾಸದ ಬಗೆಗೆ ಅವರು ಬೆಳಕನ್ನು ಚೆಲ್ಲಿದ್ದಾರೆ. ವೇದಗಳಲ್ಲಿ, ಇತಿಹಾಸಗಳೆಂದು ಪ್ರಸಿದ್ಧವಾದ ರಾಮಾಯಣ–ಮಹಾಭಾರತಗಳಲ್ಲಿ, ಪುರಾಣಗಳಲ್ಲಿ, ವೇತಾಳ ಪಂಚವಿಂಶತಿ, ಶುಕ ಸಪ್ತತಿ, ಕಥಾ ಸರಿತ್ಸಾಗರ ಮುಂತಾದವುಗಳಲ್ಲಿ ಕಥೆಗಳು ಹೇರಳವಾಗಿವೆ.

ಪಂಚತಂತ್ರವನ್ನು ರೂಪಾಂತರಗಳಲ್ಲಿ ಹೇಳುವ ಪ್ರಯತ್ನಗಳೂ ನಡೆದಿವೆ. ಹನ್ನೆರಡನೆಯ ಶತಮಾನದಲ್ಲಿ ನಾರಾಯಣ ಭಟ್ಟನು ಹಿತೋಪದೇಶ ಎಂಬ ಗ್ರಂಥವನ್ನು ರಚಿಸಿ ಪಂಚತಂತ್ರದ ಕಥೆಗಳನ್ನು ವಿಶಿಷ್ಟವಾಗಿ ಹೇಳಿದ್ದಾನೆ. ಇದೆಲ್ಲವನ್ನೂ ಡಾ. ಲೀಲಾ ಅವರು ಸವಿಸ್ತಾರವಾಗಿ ಚರ್ಚಿಸಿದ್ದಾರೆ.

ಪ್ರಸ್ತುತ ಪುಸ್ತಕದ ವೈಶಿಷ್ಟ್ಯ

ಸಂಸ್ಕೃತ ಮೂಲವನ್ನೂ ಕನ್ನಡ ಲಿಪಿಯಲ್ಲಿ ಕೊಟ್ಟು ಪಕ್ಕದಲ್ಲಿ ಕನ್ನಡಾನುವಾದವನ್ನು ಕೊಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ಅನುವಾದವನ್ನು ಓದಿದವರಿಗೆ ಅದರ ಮೂಲವನ್ನು ನೋಡುವ ಕುತೂಹಲ ಸಹಜ. ಅದಕ್ಕಾಗಿ ಬೇರೆ ಪುಸ್ತಕವನ್ನು ನೋಡುವ ಆವಶ್ಯಕತೆ ಇಲ್ಲಿಲ್ಲ. ಡಾ.ಲೀಲಾ ಅವರು ಗದ್ಯವನ್ನು ಗದ್ಯದಲ್ಲೂ ಪದ್ಯವನ್ನು ಪದ್ಯದಲ್ಲೂ ಅನುವಾದ ಮಾಡಿದ್ದಾರೆ. ಉದಾಹರಣೆ–

ಅಸ್ತಿ ದಾಕ್ಷಿಣಾತ್ಯೇ ಜನಪದೇ ಮಹಿಳಾರೋಪ್ಯಂ ನಾಮ ನಗರಮ್
ದಾಕ್ಷಿಣಾತ್ಯದ ಜನಪದದಲ್ಲಿ ಮಹಿಳಾರೋಪ್ಯವೆಂಬ ನಗರವೊಂದುಂಟು.
ಸಕಲಾರ್ಥಶಾಸ್ತ್ರಂ ಜಗತಿ ಸಮಾಲೋಕ್ಯ ವಿಷ್ಣು ಶರ್ಮೋದೇಮ್ ।
ತನ್ತ್ರೈಃ ಪಞ್ಚಭಿರೇತಚ್ಚಕಾರ ಸುಮನೋಹರಂ ಶಾಸ್ತ್ರಮ್ ॥
ಸಕಲ ಅರ್ಥಶಾಸ್ತ್ರದ ಸಾರವ ಸಮಾಲೋಚಿಸಿ ವಿಷ್ಣುಶರ್ಮನು ಈ ಜಗದಿ।
ಪಂಚತುತ್ರಗಳಿಂದ ವಿರಚಿಸಿಹನು ಈ ನೀತಿ ಶಾಸ್ತ್ರವನು ಮನೋಹರವಾಗಿ॥

ಪಂಚತಂತ್ರವು ಅತ್ಯಂತಾಕರ್ಷಕವಾಗಿರುವುದು ಅದರಲ್ಲಿರುವ ಕಥೆಗಳಿಂದ. ಮೂಲ ಕಥೆ ಒಂದು. ಆ ಕಥೆಗಳಲ್ಲಿ ಬರುವ ಪಾತ್ರಗಳು (ಅವು ಮನುಷ್ಯರೇ ಆಗಿರಲಿ, ಪ್ರಾಣಿಗಳೇ ಆಗಿರಲಿ) ಹೇಳುವ ಕಥೆಗಳು ಆಕರ್ಷಕ.

ಹಾಗೆ ಮಧ್ಯದಲ್ಲಿ ಬರುವ ಉಪಕಥೆಯೊಂದು ಹೀಗಿದೆ– "ಯಾವುದೋ ಒಂದು ಪ್ರದೇಶದಲ್ಲಿ ಗೋಮಾಯುವೆಂಬ ನರಿಯು ವಾಸ ಮಾಡುತ್ತಿತ್ತು. ಆಹಾರವಿಲ್ಲದೆ ಅದು ಹಸಿದಿತ್ತು. ಅದು ಅಲೆದಾಡುತ್ತಿದ್ದಾಗ ಅಲ್ಲೊಂದು ಹಳೆಯ ದುಂದುಭಿಯನ್ನು ಕಂಡಿತು. ಅದರ ಮೇಲೆ ಮರದ ಕೊಂಬೆಗಳು ಉಜ್ಜಿದಾಗ ದೊಡ್ಡ ಶಬ್ದವೂ ಹುಟ್ಟುತ್ತಿತ್ತು. ನರಿಗೆ ಭಯವಾಯಿತು. ಇದು ಯಾವ ಪ್ರಾಣಿ ಎಂದು ಆಲೋಚಿಸಿತು. ಅಲ್ಲೇ ಇದ್ದ ಕೋಲಿನಿಂದ ಅದಕ್ಕೆ ಹೊಡೆಯಿತು. ಜೋರಾದ ಶಬ್ದ ಹುಟ್ಟಿತು. ಆದರೆ ದುಂದುಭಿ ಏನನ್ನೂ ಮಾಡಲಿಲ್ಲ ಈ ಪ್ರಾಣಿ ಅಪಾಯಕಾರಿ ಅಲ್ಲ, ಇದನ್ನು ಕೊಂದರೆ ನನಗೆ ಎಷ್ಟೋ ದಿನಗಳ ಆಹಾರ ಲಭ್ಯವಾಗುತ್ತದೆ ಎಂಬ ಆಸೆಯಿಂದ ನರಿಯು ದುಂದುಭಿಯ ಚರ್ಮವನ್ನು ಸೀಳಿ ಒಳಗೆ ಹೋಗಲು ಯತ್ನಿಸಿತು. ಆ ಚರ್ಮ ತುಂಬ ಒರಟಾಗಿದ್ದುದರಿಂದ ನರಿಯ ಹಲ್ಲುಗಳು ಮುರಿದು ಹೋದುವು. ದುಂದುಭಿಯ ಒಳಗೆ ನೋಡಿದರೆ ಏನೂ ಇರಲಿಲ್ಲ".

ನಮ್ಮ ಅನುಭವಗಳೂ ಇದೇ ತತ್ತ್ವವನ್ನು ಬೋಧಿಸುತ್ತವೆಯಲ್ಲವೆ? ದೊಡ್ಡ ಗುರುಗಳು ಜ್ಞಾನಿಗಳು, ತಪಸ್ವಿಗಳು ಎಂದುಕೊಂಡು ಯಾರನ್ನೋ ಪೂಜಿಸಲು ಹೋಗುತ್ತೇವೆ. ಅವರ ಶಬ್ದ ಪುಂಜಕ್ಕೆ ಮಾರು ಹೋಗುತ್ತೇವೆ. ಆದರೆ ಅವರ ಸೋಗಿನ ಚರ್ಮವನ್ನು ಹರಿದು ನೋಡಿ ದರೆ ಒಳಗೆ ಏನೂ ಇಲ್ಲ. ಬರೀ ಟೊಳ್ಳು. ಕೇವಲ ಶೂನ್ಯ. ಈ ನೀತಿಯನ್ನು ನರಿ–ದುಂದುಭಿ ಕಥೆ ಬೋಧಿಸುತ್ತದೆ.

ಪಂಚತಂತ್ರ ಮುಕ್ತಕಗಳ, ಸುಭಾಷಿತಗಳ ಗಣಿ. ನೂರಾರು ಸುಂದರ ಮುಕ್ತಕಗಳು ಈ ಗ್ರಂಥದಲ್ಲಿ ದೊರಕುತ್ತವೆ. ಅವುಗಳನ್ನು ಕಲಿತರೆ, ಕಂಠಸ್ಥ ಮಾಡಿದರೆ, ವಾಗ್ಮಿಗಳಿಗೆ ಅನುಕೂಲ. ಉದಾಹರಣೆ–

ಅತ್ತುಂ ವಾಂಛತಿ ಶಾಂಭವೋ ಗಣಪತೇರಾಖುಂ ಕ್ಷುಧಾರ್ತಃ ಫಣೀ
ತಂ ಚ ಕ್ರೌಂಚರಿಪೋಃ ಶಿಖೀ ಗಿರಿಸುತಾಸಿಂಹೋಽಪಿ ನಾಗಾಶನಮ್।
ಇತ್ಥ ಯತ್ರ ಪರಿಗ್ರಹಸ್ಯ ಘಟನಾ ಶಂಭೋರಪಿ ಸ್ಯಾದ್ ಗೃಹೇ
ತತ್ರಾನ್ಯಸ್ಯ ಕಥಂ ನ ಭಾವಿ? ಜಗತೋ ಯಸ್ಮಾತ್ ಸ್ವರೂಪಹಿತತ್।
ಲೀಲಾ ಅವರು ಮಾಡಿರುವ ಅನುವಾದ :
ಶಂಭುವಿನ ಮೇಲಿರುವ ಫಣಿಯು ಕಾಯುತ್ತಿದೆ ಗಣಪನಿಲಿಯನ್ನು
ಹಸಿದ ಸ್ಕಂದನ ನವಿಲು ಹಾವನ್ನು ತಿನ್ನಲು ಹಸಿವಿನಿಂದ
ಉಮೆಯ ಸಿಂಹವು ಕಾಯುತ್ತಿದೆ ನವಿಲನ್ನು ತಿನ್ನಲು

ಈ ರೀತಿಯಾದ ಪರಿಗ್ರಹದ ಘಟನೆ ಶಂಭುವಿನ ಮನೆಯಲ್ಲಿಯೂ ಇದೆಯೆಂದರೆ ನಮ್ಮಂತಹವರ ಗತಿಯೇನು? ಆ ಶಿವಸಂಸಾರದ ಪ್ರತಿರೂಪವೇ ಈ ಭುವಿಯಲ್ಲಿದೆ.

ಈ ಪದ್ಯದಲ್ಲಿ ಶಿವನ ಮನೆಯಲ್ಲಿ ಕಂಡ ವಿರೋಧಗಳ ವರ್ಣನೆಯನ್ನು ಕವಿ ಮಾಡಿರುವುದೇಕೆಂದರೆ, 'ಸಾಮಾನ್ಯ ಮನುಷ್ಯರು ತಮ್ಮ ಮನೆಗಳಲ್ಲಿ ಹುಟ್ಟುವ ವೈರುಧ್ಯಗಳನ್ನು ಶಾಂತ ಮನಸ್ಸಿನಿಂದ ಪರಿಹರಿಸಿಕೊಳ್ಳಬೇಕು ಎಂದು ಸೂಚಿಸುವುದಕ್ಕಾಗಿ ಮಾತ್ರ, ಶಿವನ ಮನೆಯಲ್ಲಿ ಈ ವಿರೋಧ ನಡೆಯುತ್ತಿದೆ ಎಂದು ಹೇಳುವುದು ಕವಿಯ ಉದ್ದೇಶವಲ್ಲ. ವಾಚ್ಯಾರ್ಥವನ್ನು ಬದಿಗಿರಿಸಿ ಸೂಚ್ಯಾರ್ಥವನ್ನು ಸಹೃದಯರು ಗ್ರಹಿಸಬೇಕು.

ಪಂಚತಂತ್ರದಲ್ಲಿರುವ ಎಲ್ಲಾ ಪದ್ಯಗಳೂ ವಿಷ್ಣುಶರ್ಮ ರಚಿತವಲ್ಲ. ಕೆಲವು ಪಾತ್ರ ವಿಷ್ಣು ಶರ್ಮ ರಚಿತವಿರಬಹುದು. ಉಳಿದುವನ್ನು ಮಹಾಕವಿ ಭರ್ತೃ ಹರಿದು ನೀತಿ ಶತಕ ಮುಂತಾದ ಗ್ರಂಥಗಳಿಂದ ಸ್ವೀಕರಿಸಿರಬಹುದು. ಭಗವದ್ಗೀತೆಯ ಪದ್ಯಗಳೂ ಇಲ್ಲಿವೆ. ಮೊದಲನೆಯ ತಂತ್ರ ಮಿತ್ರಭೇದದಲ್ಲೇ ನಾನೂರ ಅರುವತ್ತನಾಲ್ಕು ಪದ್ಯಗಳಿವೆ. ಇನ್ನು ಸಮಸ್ತ ಪಂಚತಂತ್ರದಲ್ಲಿ? ಎಷ್ಟೋ ಪ್ರಕ್ಷೇಪಗಳು, ಎಂದರೆ ಕಾಲಾನುಕ್ರಮದಲ್ಲಿ ಲಿಪಿಕಾರರು ಸೇರಿಸಿರುವ ಪದ್ಯಗಳೂ ಇಲ್ಲಿರಬಹುದು. ಅದರಿಂದಲೂ ಓದುಗರಿಗೆ ಲಾಭವೇ.

ಪಂಚತಂತ್ರದಂತಹ ಗ್ರಂಥಗಳು ಜನಮಾನಸದಿಂದ ಮರೆ ಆಗಬಾರದು. ಸತತವಾಗಿ ಅವುಗಳ ಪಠನ–ಪಾಠನಗಳು ಜರುಗಬೇಕು. ಈ ದಿಸೆಯಲ್ಲಿ ಪ್ರಸ್ತುತ ಪುಸ್ತಕ ಸ್ವಾಗತಾರ್ಹ. ಅನುವಾದದಲ್ಲಿ ಮತ್ತು ಅಕ್ಷರ ಯೋಜನೆಯಲ್ಲಿ ಆಗಿರುವ ತಪ್ಪುಗಳನ್ನು ಮುಂದೆ ತಿದ್ದಿ ಮುದ್ರಿಸುವುದು ಉಚಿತವೆಂದು ಸೂಚಿಸುವುದನ್ನು ಅನುವಾದಕರು ಅನುಕರಿಸಬೇಕು.

ಮೈಸೂರಿನ ಸಾಡೆ ರಸ್ತೆಯ ಫುಟ್‌ಪಾತ್ ಅತಿಕ್ರಮಣ ತೆರವಿಗೆ ಪೊಲೀಸರ ಆದೇಶ

ಡಿಸಿಪಿ ಸುಂದರ್‌ರಾಜ್ ನೇತೃತ್ವದಲ್ಲಿ ಕಾಲು ನಡಿಗೆಯಲ್ಲಿ ಸಾಗಿ ಮೌಖಿಕ ಸೂಚನೆ





ಮೈಸೂರಿನ ಸಾಡೆ ರಸ್ತೆಗೆ ಮಂಗಳವಾರ ಭೇಟಿ ನೀಡಿದ ಡಿಸಿಪಿ ಸುಂದರ್‌ರಾಜ್ ನೇತೃತ್ವದ ಪೊಲೀಸ್ ಅಧಿಕಾರಿಗಳ ತಂಡ ಫುಟ್‌ಪಾತ್ ತೆರವು ಮಾಡುವಂತೆ ಮೌಖಿಕ ಆದೇಶ ನೀಡಿದರು. (ಎಡಚಿತ್ರ). ತರುವಾಯ ನರಸಿಂಹರಾಜ ವಿಭಾಗದ ಜನಸಂಪರ್ಕ ಸಭೆ ನಡೆಸಿ, ಫುಟ್‌ಪಾತ್ ತೆರವು ಮಾಡಿ ಸಂಚಾರ ನಿಯಮಗಳನ್ನು ಪಾಲಿಸುವಂತೆ ಡಿಸಿಪಿ ತಾಕೀತು ಮಾಡಿದರು.

- ಅಡ್ಡಾದಿಡ್ಡಿಯಾಗಿ ದ್ವಿಚಕ್ರ ವಾಹನ ನಿಲುಗಡೆ
- ಆಟೋ ಕನ್ಸಲ್ಟೆನ್ಸಿಯವರ ಫುಟ್‌ಪಾತ್ ಅತಿಕ್ರಮಣವೇ ಹೆಚ್ಚು
- ಇಲ್ಲಿ ಟ್ರಾಫಿಕ್ ಜಾಮ್ ದಿನ ನಿತ್ಯದ ಗೋಳಾಗಿತ್ತು
- ಇಂದಿನಿಂದ ಫುಟ್‌ಪಾತ್ ಅತಿಕ್ರಮಣ ತೆರವು ಮಾಡಬೇಕು
- ಜನ ಸಂಪರ್ಕ ಸಭೆಯಲ್ಲೂ ತಾಕೀತು

ಮೈಸೂರು, ಅ.28(ಬಿಎಲ್‌ಯು)– ಮೈಸೂರಿನ ಮಂಡಿಮೊಹಲ್ಲಾದ ಮೀನಾ ಬಜಾರ್‌ನ ಸಾಡೆ ರಸ್ತೆಯಲ್ಲಿ ಫುಟ್‌ಪಾತ್ ಅತಿಕ್ರಮಣವನ್ನು ಇಂದೇ ತೆರವು ಮಾಡಬೇಕು. ನಾಳೆ (ಅಕ್ಟೋಬರ್ 29) ಯಿಂದ ಫುಟ್‌ಪಾತ್ ಮೇಲೆ ಯಾವುದೇ ವಾಹನ ನಿಲ್ಲಿಸದೆ ಸಂಚಾರ ನಿಯಮ ಪಾಲಿಸಬೇಕು ಎಂದು ಪೊಲೀಸ್ ಅಧಿಕಾರಿಗಳು ಕಟ್ಟು ನಿಟ್ಟಿನ ಆದೇಶ ನೀಡಿದ್ದಾರೆ.

ಅಪರಾಧ ಮತ್ತು ಸಂಚಾರ ವಿಭಾಗದ ಉಪಪೊಲೀಸ್ ಆಯುಕ್ತ ಸುಂದರ್ ರಾಜ್, ನರಸಿಂಹರಾಜ ವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್, ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ನರಸಿಂಹ ರಾಜ ಸಂಚಾರಿ ಠಾಣೆಯ ಇನ್ಸ್‌ಪೆಕ್ಟರ್ ರೇಖಾಬಾಯಿ, ಮಂಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ದಿವಾಕರ್ ಅವರು ಮಂಗಳವಾರ ಸಾಡೆ ರಸ್ತೆಗೆ ಖುದ್ದು ಭೇಟಿ ನೀಡಿ, ನಾಳೆಯಿಂದ ಫುಟ್‌ಪಾತ್ ಅತಿಕ್ರಮಣ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಿಲಾದ್ ಪಾರ್ಕ್‌ನಿಂದ ಮಿಷನ್ ಆಸ್ಪತ್ರೆವರೆಗಿನ ಸಾಡೇ ರಸ್ತೆಯಲ್ಲಿ ಇಂದು ಬೆಳಿಗ್ಗೆ ಕಾಲು ನಡಿಗೆಯಲ್ಲಿ ಸಾಗಿದ ಪೊಲೀಸ್ ಅಧಿಕಾರಿಗಳು ನಾಳೆಯಿಂದ ಯಾರೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆ ಸೇರಿ ಯಾವುದೇ ವ್ಯಾಪಾರ ಮಾಡಬಾರದು. ಇಂದೇ ಫುಟ್‌ಪಾತ್ ತೆರವು ಮಾಡಬೇಕು ಎಂದು ಮೌಖಿಕವಾಗಿ ಆದೇಶ ನೀಡಿದರು.

ಮಿಲಾದ್ ಪಾರ್ಕ್‌ನಿಂದ ಮಿಷನ್ ಆಸ್ಪತ್ರೆವರೆಗಿನ ಸಾಡೇ ರಸ್ತೆಯ ಒಂದೂವರೆ ಕಿಲೋಮೀಟರ್‌ವರೆಗಿನ ರಸ್ತೆ ಅಕ್ಕಪಕ್ಕದಲ್ಲಿ ಸಾವಿರಾರು ದ್ವಿಚಕ್ರ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿದ್ದರು. ಆಟೋ ಕನ್ಸಲ್ಟೆನ್ಸಿಯವರು ದ್ವಿಚಕ್ರ ವಾಹನಗಳನ್ನು ನಿಲ್ಲಿಸಿ ಫುಟ್‌ಪಾತ್ ಅತಿಕ್ರಮಿಸಿಕೊಂಡಿದ್ದರು. ಕೆಲವು ಅಂಗಡಿ ಮುಂಗಟ್ಟುಗಳ ಮಾಲೀಕರು ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ ಮಾಡುತ್ತಿದ್ದರು. ಇದರಿಂದ ಜನನಿಬಿಡ ಸ್ಥಳವಾದ ಇಲ್ಲಿ ಟ್ರಾಫಿಕ್ ಜಾಮ್ ಸಾಮಾನ್ಯವಾಗಿತ್ತು.

ಈ ಹಿನ್ನೆಲೆ ಸಾಡೆ ರಸ್ತೆಯಲ್ಲಿ ಫುಟ್‌ಪಾತ್ ತೆರವು ಮಾಡುವಂತೆ ಪೊಲೀಸರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಂಗಳವಾರ ಸಂಜೆ ನರಸಿಂಹರಾಜ ವಿಭಾಗದ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ಜನ ಸಂಪರ್ಕ ಸಭೆ ನಡೆಸಿದ ಉಪ ಪೊಲೀಸ್ ಆಯುಕ್ತ ಸುಂದರ್‌ರಾಜ್ ನಾಳೆಯಿಂದ ಫುಟ್‌ಪಾತ್ ಅತಿಕ್ರಮಣ ತೆರವು ಮಾಡುವಂತೆ ತಾಕೀತು ಮಾಡಿದರು. ಈ ವೇಳೆ ಇಂದೇ ಫುಟ್‌ಪಾತ್ ತೆರವು ಮಾಡುವುದಾಗಿ ಸಾಡೆ ರಸ್ತೆಯ ನೂರಾರು ಅಂಗಡಿ ಮಾಲೀಕರು ತಿಳಿಸಿದರು.

> "ಸಾಡೆ ರಸ್ತೆಯಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವು ಮಾಡುವಂತೆ ಈಗ ಮೌಖಿಕವಾಗಿ ಸೂಚನೆ ನೀಡಿದ್ದೇವೆ. ಒಂದು ವೇಳೆ ಫುಟ್‌ಪಾತ್ ಅತಿಕ್ರಮಣ ತೆರವು ಮಾಡದಿದ್ದರೆ ಸಂಚಾರಿ ಪೊಲೀಸರು, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪೊಲೀಸರು ಹಾಗೂ ಮೈಸೂರು ನಗರ ಪಾಲಿಕೆಯವರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸುತ್ತೇವೆ. ಇದಕ್ಕೆ ಅವಕಾಶ ನೀಡದಂತೆ ಇಂದೇ ಫುಟ್ ಪಾತ್ ಅತಿಕ್ರಮಣ ತೆರವು ಮಾಡಿದರೆ ಅವರಿಗೆ ಒಳ್ಳೆಯದು. – ರೇಖಾಬಾಯಿ, ಇನ್ಸ್‌ಪೆಕ್ಟರ್, ಎನ್.ಆರ್.ಸಂಚಾರ ವಿಭಾಗ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ

ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ವಿರುದ್ಧ ವಕೀಲರ ಪ್ರತಿಭಟನೆ



ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಮೈಸೂರಿನ ಜ್ಞಾನಪ್ರಕಾಶ ಸ್ವಾಮೀಜಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮೈಸೂರು ವಕೀಲರ ಸಂಘದವರು ನ್ಯಾಯಾಲಯದ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು, ಅ.28(ಬಿಎಲ್‌ಯು)– ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ಬಗ್ಗೆ ಮೈಸೂರಿನ ಉರಿ ಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಮೈಸೂರು ವಕೀಲರು ನಿನ್ನೆ ಪ್ರತಿಭಟನೆ ನಡೆಸಿದ್ದಾರೆ.

ಮೈಸೂರು ವಕೀಲರ ಸರ್ವ ಸದಸ್ಯರ ವಿಶೇಷ ಸಭೆ ನಡೆಸಿ ಜ್ಞಾನಪ್ರಕಾಶ ಸ್ವಾಮೀಜಿ ಅವರ ಹೇಳಿಕೆಯನ್ನು ಖಂಡಿಸಿದರು.

ನಂತರ ನ್ಯಾಯಾಲಯದ ಮುಂಭಾಗದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ವಕೀಲರು, ನ್ಯಾಯಮೂರ್ತಿಗಳ ಬಗ್ಗೆ ಹಗುರವಾಗಿ ಮಾತನಾಡಿರುವ ಸ್ವಾಮೀಜಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನ್ಯಾಯಾಂಗವು ಈ ದೇಶದ ಪ್ರಜಾಸತಾತ್ಮಕ ವ್ಯವಸ್ಥೆಯ ಆಧಾರ ಸ್ತಂಭವಾಗಿದೆ. ಹೀಗಿರುವಾಗ ನ್ಯಾಯಾಂಗ ಹಾಗೂ ನ್ಯಾಯಮೂರ್ತಿಗಳ ಬಗ್ಗೆ ಗೌರವ ಕಾಪಾಡಬೇಕು. ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಈ ವಿಚಾರ ತಿಳಿಯದ ಸ್ವಾಮೀಜಿ, ನ್ಯಾಯಮೂರ್ತಿಗಳ ಬಗ್ಗೆ ಅವ ಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಆರೋಪಿಸಿದರು.

ನ್ಯಾಯಮೂರ್ತಿಗಳ ಬಗ್ಗೆ ಹಗುರವಾಗಿ ಹೇಳಿಕೆ ನೀಡಿರುವ ಜ್ಞಾನಪ್ರಕಾಶ ಸ್ವಾಮೀಜಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ವಕೀಲರ ಸಂಘದ ಕಾರ್ಯದರ್ಶಿ ಎ.ಜಿ.ಸುಧೀರ್, ಜಂಟಿ ಕಾರ್ಯದರ್ಶಿ ಕೆ.ಆರ್.ಚರಣರಾಜ್ ಸೇರಿದಂತೆ ಹಲವು ವಕೀಲರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನಿಸಿದ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳದಿರುವುದು ವಿಷಾದನೀಯ

● ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಬೇಸರ ● ತಾವು ಈ ವಿಚಾರವಾಗಿ ಯಾದಗಿರಿ ಪ್ರತಿಭಟನೆ ವೇಳೆ ಮಾತನಾಡಿದ್ದನ್ನು ತಿರುಚುವ ಯತ್ನ

ಮೈಸೂರು, ಅ.28(ಎಂಕೆ)– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ ಖಂಡಿಸಿ ಯಾದಗಿರಿಯಲ್ಲಿ ನಡೆದ ಪ್ರತಿಭಟನಾ ರ್‍ಯಾಲಿ ವೇಳೆ ನಾನು ಆಡಿದ ಮಾತುಗಳನ್ನು ಕತ್ತರಿಸಿ ಸಾಮಾ ಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ ಇದರಿಂದ ಯಾರಿಗಾದರು ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ ಎಂದು ಮೈಸೂರು ಗಾಂಧಿನಗರದ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸುದ್ದಿಗೋಷ್ಠಿ ನಡೆಸಿದರು. ಮಾಜಿ ಮೇಯರ್ ಪುರುಷೋತ್ತಮ್ ಮತ್ತಿತರರಿದ್ದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳತ್ತ ಶೂ ಎಸೆಯಲೆತ್ನಿಸಿ ನ್ಯಾಯಪೀಠಕ್ಕೆ ಅಪಮಾನ ಮಾಡಿದ ಘಟನೆ ಬಗ್ಗೆ ನನಗೆ ನೋವಿದೆ. ಸಂವಿಧಾನದ ಮುಂದೆ ಯಾರೂ ದೊಡ್ಡವರಲ್ಲ. ನ್ಯಾಯಪೀಠಕ್ಕೆ ಅಪಮಾನ ಮಾಡಿದವರು ಇನ್ನೂ ಕ್ಷಮೆ ಯಾಚಿಸದಿರುವುದು ಬೇಸರದ ಸಂಗತಿ. ಈ ನೋವಿನಲ್ಲಿ ನಾನು ಯಾದಗಿರಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ್ದು, ಅದರ ಪೂರ್ಣ ಭಾಗದ ಬದಲು ಕತ್ತರಿಸಿ ವೈರಲ್ ಮಾಡಲಾಗಿದೆ ಎಂದು ದೂರಿದರು.

ನ್ಯಾಯಾಧೀಶರು, ವಕೀಲರನ್ನು ಅಪಮಾನಿಸುವ ಮನಸ್ಥಿತಿ ತಮ್ಮದಲ್ಲ. ಸಂವಿಧಾನಕ್ಕೆ, ನ್ಯಾಯಾಧೀಶರಿಗೆ ಮತ್ತು ವಕೀಲರಿಗೆ ಅಪಮಾನವಾಗುವ ಘಟನೆ ನಡೆದಾಗ ಮೊದಲು ವಿರೋಧಿಸುವವರೇ ನಾವು ಎಂದು ಸ್ಪಷ್ಟಪಡಿಸಿದರಲ್ಲದೆ, ಸಂವಿಧಾನಕ್ಕಿಂತ ಸನಾತನವೇ ದೊಡ್ಡದು ಎಂದು ಶೂ ಎಸೆದುದನ್ನು ಸಮರ್ಥಿಸಿಕೊಂಡು ಇನ್ನೂ ಕ್ಷಮೆ ಯಾಚಿಸದ ವ್ಯಕ್ತಿ ವಿರುದ್ಧ ಮಾತ್ರವೇ ಮಾತನಾಡಿದ್ದೇನೆ ಹೊರತು ಬೇರೆ ಯಾರ ಮೇಲೂ ಅಲ್ಲ. ಅದಾಗ್ಯೂ ಒಂದು ವೇಳೆ ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ ಎಂದು ಹೇಳಿದರು.

ಸ್ವಾಮೀಜಿಯವರು ತಪ್ಪು ಮಾತಾಡಿಲ್ಲ: ಸ್ವಾಮೀಜಿಯವರು ತಪ್ಪು ಮಾಡಿದವರ ವಿರುದ್ಧ ಮಾತ್ರ ಮಾತನಾಡಿದ್ದಾರೆಯೇ ಹೊರತು ಅವರು ಯಾರನ್ನೂ ನಿಂದಿಸಿಲ್ಲ ಎಂದು ಸಮರ್ಥಿಸಿಕೊಂಡ ಮಾಜಿ ಮೇಯರ್ ಪುರುಷೋತ್ತಮ್, ಸಿಜೆಐ ಅವರ ಮೇಲೆ ಶೂ ಎಸೆದ ಪ್ರಕರಣ ಖಂಡಿಸಿ ದೇಶದಾದ್ಯಂತ ಹೋರಾಟಗಳು ನಡೆಯುತ್ತಿದ್ದರು ಶೂ ಎಸೆಯಲೆತ್ನಿಸಿದ ವಕೀಲನ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಜಿಎಸ್‌ಟಿ ಕಟ್ಟಿಲ್ಲ ಎಂಬ ಕಾರಣಕ್ಕೆ ಸಂಸ್ಥೆಗಳನ್ನು ಮುಚ್ಚುವಾಗ ನೋಂದಣಿಯಾಗದೆ 100 ವರ್ಷಗಳಿಂದ ಯಾವುದೇ ಬಗೆಯ ತೆರಿಗೆ ಕಟ್ಟದೆ ಹತ್ತಾರು ಶಾಖೆಗಳನ್ನು 100 ಮಾಡಿಕೊಂಡಿರುವ ಆರ್‌ಎಸ್‌ಎಸ್‌ಗೆ ಇದುವರೆಗೆ ಯಾವುದೇ ನೋಟಿಸ್ ನೀಡಿಲ್ಲ. ಅಲ್ಲದೆ ಪಥಸಂಚನ ಮಾಡಲು ಅನುಮತಿ ಕೇಳುತ್ತಾರೆ. ಆದರೆ ನೋಂದಣಿಯಾಗಿರುವ ಸಂಸ್ಥೆ ಹಲವು ವರ್ಷಗಳಿಂದ ಮಹಿಷ ದಸರಾ ನಡೆಸಿಕೊಂಡು ಬಂದರೂ ಪುಷ್ಪಾರ್ಚನೆಗೆ ಅನುಮತಿ ನೀಡುತಿಲ್ಲ ಎಂದು ವಿಷಾಧಿಸಿದರು. ಪತ್ರಿಕಾಗೋಷ್ಠಿಯಲ್ಲಿ ದಲಿತ ಮುಖಂಡರಾದ ಸೋಮಯ್ಯ ಮಲೆಯೂರು, ಸಿದ್ದಸ್ವಾಮಿ, ಮಣಿಯಯ್ಯ ಭುಗತಗಳ್ಳಿ ಉಸ್ಥಿತರಿದ್ದರು.

ದಲಿತ ನಾಯಕರಿಗೆ ಸಿಎಂ ಸ್ಥಾನ ನೀಡಬೇಕು...

“ ದಲಿತ ರಾಜಕೀಯ ನಾಯಕರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬುದು ಕಳೆದ 20–30 ವರ್ಷಗಳಿಂದಲೂ ಕೇಳಿ ಬರುತ್ತಿರುವ ವಿಚಾರ. ರಾಜ್ಯ ಹಾಲಿ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಅಪಾರ ನಂಬಿಕೆ ಮತ್ತು ಗೌರವವಿದೆ. ನೂರಾರು ವರ್ಷಗಳಿಂದ ದಲಿತರು ಕಾಂಗ್ರೆಸ್‌ಗೆ ಬೆನ್ನುಲುಬಾಗಿ ನಿಂತಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಏನಾದರೂ ರಾಜಕೀಯ ಬದಲಾವಣೆಗಳಾದರೆ, ಸಮರ್ಥ, ಹಿರಿತನ, ಪರಿಸ್ಥಿತಿ ನಿಭಾಯಿಸುವ ದಲಿತ ನಾಯಕರೊಬ್ಬರಿಗೆ ಸಿಎಂ ಸ್ಥಾನ ನೀಡಬೇಕೆಂಬುದು ನಮ್ಮೆಲ್ಲರ ಒತ್ತಾಸೆ.

–ಪುರುಷೋತ್ತಮ್, ಮಾಜಿ ಮೇಯರ್

ದಲಿತ ಸಮಾವೇಶ ಮಾಡಿದರೇನು?

● ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪ್ರಶ್ನೆ
● ಮೊದಲು ಮಾಡಲು ಹೋದಾಗ ಬೇಡ ಅಂದರು
● ದಲಿತರಿಗೆ ಸರ್ಕಾರದ ಯೋಜನೆಗಳ ತಿಳಿಸಬೇಡವೇ?

ಬೆಂಗಳೂರು, ಅ.28(ಕೆಎಂಶಿ)– ದಲಿತ ಸಮಾವೇಶ ಮಾಡಲು ತೊಂದರೆ ಏನಿದೆ. ಈ ಹಿಂದೆ ಹೈಕಮಾಂಡ್ ಬೇರೆ ಕಾರಣಕ್ಕಾಗಿ ಸಮಾವೇಶ ಸ್ಥಗಿತ ಮಾಡುವಂತೆ ಹೇಳಿದ್ದರು. ಅದಕ್ಕೆ ಒಪ್ಪಿಕೊಂಡಿದ್ದೆವು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.



ಡಾ.ಜಿ.ಪರಮೇಶ್ವರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹಿತದೃಷ್ಟಿಯಿಂದ, ದಲಿತ ಸಮುದಾಯ ಯಾವಾಗಲೂ ಕಾಂಗ್ರೆಸ್ ಜೊತೆಗೆ ಇರುತ್ತದೆ. ನಾವೆಲ್ಲ ಒಟ್ಟಿಗೆ ಇರಬೇಕಾದರೆ ಆಗಾಗ ಸಮಾವೇಶ ಮಾಡಿ ದಲಿತ ಸಮುದಾಯಕ್ಕೆ ಸರ್ಕಾರ ನೀಡಿರುವ ಯೋಜನೆಗಳನ್ನು ತಿಳಿಸಬೇಕಾಗುತ್ತದೆ. ಸಮುದಾಯದ ಬೇಡಿಕೆಯಂತೆ ಭರವಸೆಗಳನ್ನು ಕೊಡಬೇಕಾಗುತ್ತದೆ ಎಂದರು.

ದಲಿತ ಮುಖ್ಯಮಂತ್ರಿ ಮಾಡಬೇಕು ಎಂಬ ದಲಿತ ಸಂಘಟನೆಗಳ ಒತ್ತಾಯದಲ್ಲಿ ತಪ್ಪೇನಿದೆ. ಅವರವರ ಅಭಿಪ್ರಾಯ ಹೇಳುತ್ತಾರೆ. ಕಾಂಗ್ರೆಸ್‌ನಲ್ಲಿ ಸಾಕಷ್ಟು ಜನ ಸಮರ್ಥರಿದ್ದಾರೆ. ಕಾಂಗ್ರೆಸ್ ಅನೇಕ ಜನ ಮುಖಂಡರನ್ನು ಹುಟ್ಟು ಹಾಕಿದೆ. ಬೇರೆ ಪಕ್ಷಗಳಿಗೆ ಹೋಗಿ ದೊಡ್ಡವರಾದವರೂ ಇದ್ದಾರೆ. ನಮ್ಮ ಪಕ್ಷ ಟ್ರೈನಿಂಗ್ ಸ್ಕೂಲ್ ಇದ್ದಂತೆ. ಎಲ್ಲರಿಗೂ ತರಬೇತಿ ನೀಡಿ ಕಳುಹಿಸುತ್ತಿರುತ್ತೇವೆ. ನಮ್ಮ ಸಮರ್ಥ ಮುಖಂಡರಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ಹೈಕಮಾಂಡ್‌ಗೆ ಬಿಟ್ಟಿದ್ದು.

ಕಾಂಗ್ರೆಸ್ ರಾಜ್ಯದಲ್ಲಿ 2023ರಲ್ಲಿ ಅಧಿಕಾರಕ್ಕೆ ಬಂದಾಗ ಶಾಸಕಾಂಗ ಪಕ್ಷ ನಾಯಕರನ್ನು ಆಯ್ಕೆ ಮಾಡಿತು. ಆಗ ಸಿದ್ದರಾಮಯ್ಯ ಎರಡೂವರೆ ವರ್ಷ ಅವಧಿಗೆ ಮುಖ್ಯಮಂತ್ರಿ ಎಂಬುದಾಗಿ ಯಾರು ಹೇಳಿರಲಿಲ್ಲ, ಸಮಯ ನಿಗದಿಯೂ ಮಾಡಿರಲಿಲ್ಲ.

ಸಿದ್ದರಾಮಯ್ಯ ಅವರನ್ನು ಐದು ವರ್ಷದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದೆವು. ಮಧ್ಯದಲ್ಲಿ ಹೈಕಮಾಂಡ್ ಏನಾದರು ತೀರ್ಮಾನ ಮಾಡಿದ್ದರೆ ಅವರಿಗೆ ಬಿಟ್ಟಿದ್ದು. ದಿನನಿತ್ಯ ಈ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತಿರುವುದು ಸರಿಯಲ್ಲ. ಈ ಗೊಂದಲ ನಿವಾರಣೆ ಸಂದರ್ಭ ಬಂದಾಗ ಹೈಕಮಾಂಡ್‌ಗೆ ಮನವಿ ಮಾಡುತ್ತೇನೆ ಎಂದರು.

ಮದ್ಯ ತಯಾರಿಕಾ ಕಂಪನಿಯಿಂದ ಅಕ್ರಮವಾಗಿ ಅಂತರ್ಜಲ ಬಳಕೆ ಆರೋಪ

ಮೈಸೂರು, ಅ.28(ಎಂಕೆ)– ಟಿ.ನರಸೀಪುರ ತಾಲೂಕಿನ ಮಲಿಯೂರು ಗ್ರಾಪಂ ವ್ಯಾಪ್ತಿಯಲ್ಲಿರುವ ‘ಅನ್ಹೂ ಸರ್ ಬುಶ್ ಇನ್‌ಬೆವ್ ಇಂಡಿಯಾ ಲಿಮಿಟೆಡ್ (ಎಸ್‌ಪಿಆರ್ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್)–Anheuser Busch Inbev India Ltd(SPR Distilleries pvt limited)’ ಮದ್ಯ ತಯಾರಕ ಕಂಪನಿಯು ಕಾನೂನು ಬಾಹಿರವಾಗಿ ಬೋರ್‌ವೆಲ್‌ಗಳ ನೀರು ಬಳಕೆ, ಅಕ್ರಮ ವಹಿವಾಟು ಹಾಗೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ವಂಚಿಸುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಎಸ್.ಎಂ.ಪ್ರಸಾದ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಆಂತರಿಕ ಬಳಕೆಗಾಗಿ ಅನುಮತಿ ಪಡೆದಿರುವುದು ಮೂರು ಬೋರ್‌ವೆಲ್‌ಗಳಿಗೆ. ಆದರೆ, ಎಂಟು ಬೋರ್‌ವೆಲ್‌ಗಳನ್ನು ಕೊರೆಸಿಕೊಂಡು ನೀರನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಭಾಗದಲ್ಲಿ ಅಂತರ್ಜಲ ಮಟ್ಟ ಕುಸಿದು ರೈತರ ಕೃಷಿ ಚಟುವಟಿಕೆಗೆ ತೊಂದರೆಯಾಗುತ್ತಿದೆ. ಈ ಸಂಬಂಧ ದೂರು ನೀಡಿದ್ದರು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಕಿಡಿಕಾರಿದರು.

ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ಕಾರ್ಮಿಕರು ಹೊರಗಿನವರೇ ಆಗಿದ್ದು, ಸ್ಥಳೀಯರಿಗೆ ಕೆಲಸ ನೀಡಿಲ್ಲ. ಅಲ್ಲದೆ ನೀರನ್ನು ಹೊರಗಿನಿಂದ ಟ್ಯಾಂಕರ್‌ಗಳ ಮೂಲಕವೂ ತರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಆಗಾಗ ನಿರಪೇಕ್ಷಣಾ ಪತ್ರ ಪಡೆಯುತ್ತಿದ್ದು, ಇದರಲ್ಲಿ ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯ ಗ್ರಾಪಂ ಅಭಿವೃದ್ಧಿ ಅಧಿಕಾರಿ ಶಾಮೀಲಾಗಿರುವಂತಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಭೂಮಿಯನ್ನು ಕಬಳಿಸಲಾಗಿದೆ. ನೀರನ್ನು ಶುದ್ಧೀಕರಿಸದೆ ಮದ್ಯ ತಯಾರಿಸುತ್ತಿರುವ ಈ ಕಂಪನಿಯ ವಿರುದ್ಧ ಈಗಾಗಲೇ ಹಲವು ದೂರುಗಳು ದಾಖಲಾಗಿದೆ. ಹೀಗಾಗಿ ಕೂಡಲೇ ಈ ಕಂಪನಿಯು ತನ್ನ ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಿ, ನಿಯಮಾನುಸಾರ ನಡೆದುಕೊಳ್ಳದಿದ್ದಲ್ಲಿ ನ್ಯಾಯಾಂಗ ಹೋರಾಟ ನಡೆಸಲಾಗುವುದು. ಲೋಕಾಯುಕ್ತರಿಗೂ ದೂರು ನೀಡಲಾಗುವುದು ಎಂದು ಎಚ್ಚರಿಸಿದರು. ಸಾಮಾಜಿಕ ಹೋರಾಟಗಾರ ಚಿನ್ನಸ್ವಾಮಿ, ರೈತ ಮುಖಂಡ ಚಿನ್ನಸ್ವಾಮಿ, ವಕೀಲರಾದ ಪ್ರಜ್ವಲ್, ಗವಿಸ್ವಾಮಿ, ಲೋಕೇಶ್ ಉಪಸ್ಥಿತರಿದ್ದರು.

ಪೈಲ್ವಾನ್ ಸಂಜಯ್ ಚಂದ್ರ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಮೈಸೂರು, ಅ. 28– ವಿಜಯಪುರ ಸಿಂದಗಿಯಲ್ಲಿ ಇತ್ತೀಚೆಗೆ ನಡೆದ ಶಾಲಾ ಶಿಕ್ಷಣ ಇಲಾಖೆಯ ಪದವಿಪೂರ್ವ 2024–25ನೇ ಸಾಲಿನ ರಾಜ್ಯಮಟ್ಟದ ಕ್ರೀಡಾಕೂಟದ 86ಕೆಜಿ ಫ್ರೀ ಸ್ಟೈಲ್ ಕುಸ್ತಿ ಪಂದ್ಯಾವಳಿಯಲ್ಲಿ ಮೈಸೂರಿನ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ದ್ವಿತೀಯ ಪಿಯು ವಾಣಿಜ್ಯ ವಿಭಾಗದ ಪೈಲ್ವಾನ್ ಸಂಜಯ್ ಚಂದ್ರ ಜೆ. ಪ್ರಥಮ ಸ್ಥಾನವನ್ನು ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಚಾಮುಂಡಿ ಕ್ರೀಡಾಂಗಣದ ನಿರ್ದೇಶಕ ಭಾಸ್ಕರ್ ನಾಯಕರ ನೇತೃತ್ವದಲ್ಲಿ ಪೈಲ್ವಾನ್ ಮಧು ಅವರ ಶಿಷ್ಯ ಮತ್ತು ಶಂಕರ್ ಚಾಮುಂಡಿ ಕ್ರೀಡಾಂಗಣದ ವಿಶ್ವ ಅವರಿಂದ ತರಬೇತಿ ಪಡೆದಿದ್ದಾರೆ. ಇವರನ್ನು ಸದ್ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಪ್ರಾಂಶುಪಾಲ ರಮೇಶ್, ದೈಹಿಕ ಶಿಕ್ಷಣ ಉಪನ್ಯಾಸಕರಾದ ಕೃಷ್ಣ, ಸಂಜಯ್, ಚಂದ್ರ, ಪೋಷಕರಾದ ಜಯಚಂದ್ರ ಅಭಿನಂದಿಸಿದ್ದಾರೆ.

ಎಂ.ಬಿ.ಅಶ್ವಿನಿಗೆ ಪಿಹೆಚ್.ಡಿ ಪದವಿ



ಮೈಸೂರು,ಅ.28– ಡಾ.ಎಸ್.ಎಂ.ವನಮಾಲ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಎಂ.ಬಿ.ಅಶ್ವಿನಿ ಅವರ ಮಹಾಪ್ರಬಂಧವನ್ನು ಇಂಗ್ಲಿಷ್ ವಿಷಯದಲ್ಲಿ ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ‘ಕ್ರಾಸ್‌ಕಲ್ಚರಲ್ ಪರ್ಸಿಎಫ್ಷನ್ಸ್ ಆಫ್ ಎಂ/ಅಥೆರಿಂಗ್ ಇನ್ ದಿ ಸೆಲೆಕ್ಟ್ ಆಫ್ರಿಕನ್ ಅಮೆರಿಕನ್ ಅಂಡ್ ಇಂಡಿಯನ್ ನೊವೆಲ್ಸ್’ ವಿಷಯದಲ್ಲಿ ಇವರು ಮಹಾಪ್ರಬಂಧ ಮಂಡಿಸಿದ್ದು, ಎಂ.ಬಿ.ಅಶ್ವಿನಿ ಅವರು ಎಸ್.ಪದ್ಮಾವತಿ ಮತ್ತು ಬಿ.ಬಸವರಾಜ್ ದಂಪತಿ ಪುತ್ರಿಯಾಗಿದ್ದಾರೆ.

ನಾಳೆ ಹಿರಿಯ ನಾಗರಿಕರ ದಿನಾಚರಣೆ

ಮೈಸೂರು, ಅ. 28– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಅ.30ರಂದು ಬೆಳಗ್ಗೆ 11 ಗಂಟೆಗೆ ಹಿರಿಯ ನಾಗರಿಕ ಮಂಡಳಿಯ ಸರಸ್ವತಿ ಸಮುದಾಯ ಭವನದಲ್ಲಿ ಸಾಧಕ ಹಿರಿಯ ನಾಗರಿಕರನ್ನು ಸನ್ಮಾನಿಸುವ ಮೂಲಕ ಹಿರಿಯ ನಾಗರಿಕರ ದಿನಾಚರಣೆ ಏರ್ಪಡಿಸಲಾಗಿದೆ.

ಇದೇ ವೇಳೆ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪಿ.ವೆಂಕಟರಾಮಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಜಿ.ಸದಾನಂದಯ್ಯ ಅವರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಉದ್ಯಮಿ ಜಗನ್ನಾಥ್ ಶೆಣೈ ಉದ್ಘಾಟಿಸಲಿದ್ದಾರೆ. ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು ಮತ್ತು ಟ್ರಸ್ಟ್ ಅಧ್ಯಕ್ಷ ಗೌಡಪ್ಪ ಉಪಸ್ಥಿತರಿರುವರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮಗನಿಗೆ ಅದೃಷ್ಟ ತಂದ ತಾಯಿಯ ಹುಟ್ಟುಹಬ್ಬದ ದಿನಾಂಕ: ಯುಎಇ ಲಾಟರಿಯಲ್ಲಿ 240 ಕೋಟಿ ಗೆದ್ದ ಭಾರತೀಯ



ದುಬೈ: 29 ವರ್ಷದ ಭಾರತೀಯ ಪ್ರಜೆ ಮತ್ತು ದೀರ್ಘಕಾಲದಿಂದ ಅಬುಧಾಬಿಯಲ್ಲಿ ನೆಲೆಸಿರುವ ಆಂಧ್ರ ಮೂಲದ ಅನಿಲ್‌ಕುಮಾರ್ ಬೊಲ್ಲಾ ಎಂಬಾತನ ಭವಿಷ್ಯವೇ ಬದಲಾಗಿದೆ. ಅದಕ್ಕೆ ಕಾರಣವಾಗಿದ್ದು ಆತನ ತಾಯಿಯ ಹುಟ್ಟುಹಬ್ಬದ ದಿನ. ಅಕ್ಟೋಬರ್ 18ರ ಶನಿವಾರ ನಡೆದ ಯುಎಇ ಲಾಟರಿಯ 23ನೇ ಲಕ್ಕಿ ಡೇ ಡ್ರಾ #251018 ರಲ್ಲಿ ಚಿನ್ನ ಗೆದ್ದು, ಕ್ಷಣಾರ್ಧದಲ್ಲಿ ಕೋಟ್ಯಾಧಿಪತಿಯಾಗಿದ್ದಾನೆ.

ಯುಎಇ ಲಾಟರಿ ಅಧಿಕಾರಿಗಳು ಅದೃಷ್ಟಶಾಲಿ ಭಾರತೀಯನ ಚಿತ್ರವನ್ನು ಬಿಡುಗಡೆ ಮಾಡಿರುವುದರಿಂದ ಸಸ್ಪೆನ್ಸ್ ಕೊನೆಗೂ ಕೊನೆಗೊಂಡಿದೆ. ಇತಿಹಾಸದಲ್ಲಿಯೇ ಅತಿ ದೊಡ್ಡ ಬಹುಮಾನ (ಸುಮಾರು 240 ಕೋಟಿ ರೂಪಾಯಿಗಳು (10 ಕೋಟಿ ದಿರ್ಹಮ್‌ಗಳು)) ಗೆದ್ದ ಅದೃಷ್ಟಶಾಲಿ ವಿಜೇತರ ಸಂಪೂರ್ಣ ವಿವರಗಳನ್ನು ಬಿಡುಗಡೆ ಮಾಡಲಾಗಿದ್ದು, ಒಂದು ವಾರಕ್ಕೂ ಹೆಚ್ಚು ಕಾಲದ ವದಂತಿಗಳಿಗೆ ಅಂತ್ಯ ಹಾಡಲಾಗಿದೆ. ಅನಿಲ್‌ಕುಮಾರ್ ಒಟ್ಟಾರೆ 12 ಟಿಕೆಟ್‌ಗಳನ್ನು ತಲಾ 1210 ರೂಪಾಯಿ ಕೊಟ್ಟು ಖರೀದಿಸಿದ್ದರು.

ಈ ಗೆಲುವು ತನ್ನ ಕನಸಿಗೆ ಮೀರಿದ್ದು ಎಂದು ಅನಿಲ್ ಕುಮಾರ್ ಬೊಲ್ಲಾ ಭಾವುಕರಾದರು. 100 ಮಿಲಿಯನ್ ದಿರ್ಹಮ್‌ಗಳ ಬಹು ಮಾನವನ್ನು ಗೆದ್ದಿದ್ದೇನೆ ಎಂದು ತಿಳಿದಾಗ ತಾನು ಅಕ್ಷರಶಃ ದಿಗ್ಭ್ರಮೆಗೊಂಡಿದ್ದಾಗಿ ಹೇಳಿದರು.

ಯುಎಇ ಲಾಟರಿ ಅಧಿಕಾರಿಗಳಿಂದ ಕರೆ ಬಂದಾಗ, ಅದು ಅವಾಸ್ತವವೆನಿಸಿತು. ನಾನು ಅವರನ್ನು ಮತ್ತೆ ಸಂದೇಶವನ್ನು ಪುನರಾವರ್ತಿಸಲು ಕೇಳಿದೆ. ಇದನ್ನು ಅರ್ಥಮಾಡಿಕೊಳ್ಳಲು ನನಗೆ ಸ್ವಲ್ಪ ಸಮಯ ಹಿಡಿಯಿತು. ಇಂದಿಗೂ ನನ್ನ ಈ ಹೊಸ ವಾಸ್ತವ ನಂಬಲು ಸಾಧ್ಯವಿಲ್ಲ. ಬೊಲ್ಲಾ ಆಯ್ಕೆ ಮಾಡಿದ ಸಂಖ್ಯೆಗಳು, ಅವರ ತಾಯಿಯ ಹುಟ್ಟುಹಬ್ಬದ 11ನೇ ತಿಂಗಳು ಸೇರಿದಂತೆ, ಈ ಐತಿಹಾಸಿಕ ಗೆಲುವಿಗೆ ಕಾರಣವಾಯಿತು. ಅವರ ತಾಯಿಯ ಪ್ರಭಾವ ಅವರ ಅದೃಷ್ಟದ ಮೇಲೆ ಇತ್ತು ಎಂದು ನಂಬಲಾಗಿದೆ.

ದೀಪಾವಳಿಗೆ ಸ್ವಲ್ಪ ಮೊದಲು ಈ ಗೆಲುವು ಬಂದಿರುವುದು ಅನಿಲ್‌ಕುಮಾರ್‌ಗೆ ಇನ್ನಷ್ಟು ಸಂತೋಷವನ್ನು ತಂದಿತು. ಇದು ಅಸಾಧಾರಣ ಆಶೀರ್ವಾದದಂತೆ ತೋರುತ್ತದೆ. ಅಂತಹ ಶುಭ ಸಂದರ್ಭದಲ್ಲಿ ಗೆಲ್ಲುವುದು ಇನ್ನಷ್ಟು ಅರ್ಥಪೂರ್ಣವಾಗಿದೆ. ಯುಎಇ ಲಾಟರಿಯ ವಾಣಿಜ್ಯ ಗೇಮಿಂಗ್ ನಿರ್ದೇಶಕ ಸ್ಕಾಟ್ ಬರ್ಟನ್, ಅನಿಲ್‌ಕುಮಾರ್ ಅವರ ಗೆಲುವಿಗೆ ಅಭಿನಂದಿಸಿದರು. 100 ಮಿಲಿಯನ್ ದಿರ್ಹಮ್ ಬಹುಮಾನವು ಅವರ ಜೀವನವನ್ನು ಬದಲಾಯಿಸಿದ್ದಲ್ಲದೆ, ಯುಎಇ ಲಾಟರಿಗೆ ಒಂದು ಮೈಲಿಗಲ್ಲು ಕೂಡ ಎಂದು ಸ್ಕಾಟ್ ಬರ್ಟನ್ ಹೇಳಿದರು.

ಕೇಂದ್ರ ಸರ್ಕಾರಿ ನೌಕರರಿಗೆ ಶುಭಸುದ್ದಿ: 8ನೇ ವೇತನ ಆಯೋಗಕ್ಕೆ ಸಂಪುಟ ಅಸ್ತು

ನವದೆಹಲಿ: ಕೇಂದ್ರ ಸರ್ಕಾರ ನೌಕರರ ವೇತನ ಹಾಗೂ ಪಿಂಚಣಿದಾರರ ಭತ್ಯೆಗಳ ಪರಿಷ್ಕರಣೆಗೆ 8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದ್ದು, 2026ರ ಜನವರಿ 1ರಿಂದ ಜಾರಿಗೆ ಬರುವ ನಿರೀಕ್ಷೆಯಿದೆ.



ಇದರಿಂದಾಗಿ 50 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 69 ಲಕ್ಷ ಪಿಂಚಣಿದಾರರಿಗೆ ಅನುಕೂಲ ವಾಗಲಿದೆ. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನ್ ಪ್ರಕಾಶ್ ದೇಸಾಯಿ ಅವರ ನೇತೃತ್ವದ ಸಮಿತಿ ಇದಾಗಿದೆ. ಇದರಲ್ಲಿ ಒಬ್ಬರು ಕಾರ್ಯದರ್ಶಿ ಹಾಗೂ ಒಬ್ಬರು ಅರೆಕಾಲಿಕ ಸದಸ್ಯ ಇರುತ್ತಾರೆ. ಆಯೋಗ ರಚನೆಯಾದ ದಿನಾಂಕದಿಂದ 18 ತಿಂಗಳೊಳಗೆ ಈ ಸಮಿತಿಯು ತನ್ನ ಶಿಫಾರಸುಗಳನ್ನು ಮಾಡಲಿದೆ. ಸಮಿತಿ ನೀಡುವ ಮಧ್ಯಂತರ ವರದಿ ಕೈಸೇರಿದ ನಂತರ 8ನೇ ವೇತನ ಆಯೋಗ ಜಾರಿಯ ನಿಖರ ದಿನಾಂಕವನ್ನು ಘೋಷಿಸಲಾಗುವುದು. ಸದ್ಯದ ಪರಿಸ್ಥಿತಿಯಲ್ಲಿ 2026ರ ಜ.1ಕ್ಕೆ ಜಾರಿಯಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಎನ್‌ಎಸ್‌ಎಸ್ ಸಮಾಜದಲ್ಲಿ ವಿದ್ಯಾರ್ಥಿಗಳು ಮಾದರಿಯಾಗಿ ಬದುಕುವ ಪಾಠ ಕಲಿಸುತ್ತದೆ

● ನಿವೃತ್ತ ಪ್ರಾಧ್ಯಾಪಕ ಡಾ.ಕಾಳಚನ್ನೇಗೌಡ ● ಶೇಷಾದ್ರಿಪುರಂ ಸ್ವತಂತ್ರ ಪ.ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ಉದ್ಘಾಟನೆ

ಮೈಸೂರು, ಅ.28(ಪಿಎಂ)– ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಮೂಲಕ ವಿದ್ಯಾರ್ಥಿಗಳು ಸಮಾಜದಲ್ಲಿ ಮಾದರಿಯಾಗಿ ಬದುಕುವುದನ್ನು ಕಲಿಯಬಹುದು ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಕಾಳಚನ್ನೇಗೌಡ ಹೇಳಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಇಲ್ಲಿನ ಗ್ರಾಪಂ ಸಹಯೋಗದೊಂದಿಗೆ ಮೈಸೂರಿನ ಹೆಬ್ಬಾಳದ ಹೊರವರ್ತುಲ ರಸ್ತೆಯಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ವತಿಯಿಂದ ಹಮ್ಮಿಕೊಂಡಿರುವ 2025–26ನೇ ಸಾಲಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.



ಬನ್ನಂಗಾಡಿ ಗ್ರಾಮದಲ್ಲಿ ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವತಿಯಿಂದ ಹಮ್ಮಿಕೊಂಡಿರುವ ಎನ್‌ಎಸ್‌ಎಸ್ ಶಿಬಿರವನ್ನು ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಕಾಳಚನ್ನೇಗೌಡ ಉದ್ಘಾಟಿಸಿದರು.

ಸಮಾಜ ಸೇವೆಯ ಮಹತ್ವದೊಂದಿಗೆ ಜನಸಮುದಾಯದಲ್ಲಿ ಬೆರೆಯುವ ಮೂಲಕ ಆದರ್ಶ ಜೀವನ ನಡೆಸುವ ವಿವೇಚನೆಯು ಎನ್‌ಎಸ್‌ಎಸ್ ಶಿಬಿರದಿಂದ ವಿದ್ಯಾರ್ಥಿಗಳಿಗೆ ದೊರೆಯಲಿದೆ. ಜೊತೆಗೆ ಅವರಿಗೆ ಆತ್ಮವಿಶ್ವಾಸ, ಕಾರ್ಯಕ್ರಮ ರೂಪಿಸುವ ಜವಾಬ್ದಾರಿ ಬರುತ್ತದೆ ಎಂದರು.

ವಿದ್ಯಾರ್ಥಿಗಳು ಓದುವುದರ ಜೊತೆಗೆ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಲಿಯಬೇಕು. ಅದನ್ನು ಎನ್‌ಎಸ್‌ಎಸ್ ಕಲಿಸುತ್ತದೆ. ಒಗ್ಗಟ್ಟಿನಲ್ಲಿ ಬದುಕುವುದನ್ನು ಕಲಿಸಿ, ರಾಷ್ಟ್ರನಿರ್ಮಾಣಕ್ಕೆ ಪೂರಕ ವ್ಯಕ್ತಿತ್ವ ಬೆಳೆಸಲಿದೆ. ಆ ಮೂಲಕ ಈ ಚಟುವಟಿಕೆಯು ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬಿತ್ತಲಿದೆ ಎಂದು ತಿಳಿಸಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಗೌರವ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಗಾಂಧೀಜಿಯವರ ಪರಿಕಲ್ಪನೆಯ ಎನ್‌ಎಸ್‌ಎಸ್ ಚಟುವಟಿಕೆ ಮೂಲಕ ಸಮಾಜದಲ್ಲಿ ಉನ್ನತ ಬದಲಾವಣೆ ತರಲು ಸಾಧ್ಯವಿದೆ. ಹಳ್ಳಿಗಳ ಉದ್ಧಾರದಿಂದ ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಬಹುದು ಎಂದರು. ಬನ್ನಂಗಾಡಿ ಗ್ರಾಪಂ ಅಧ್ಯಕ್ಷ ಎ.ಜೆ.ಮಂಜಯ್ಯ, ಪಿಡಿಓ ಲಕ್ಷ್ಮೇಗೌಡ, ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ಮುಖಂಡರಾದ ಪ್ರಭಾಕರ್, ಕರೀಗೌಡ ಮತ್ತಿತರರು ಹಾಜರಿದ್ದರು.

ಬಸವಣ್ಣನವರ ಆದರ್ಶಗಳು ಇಂದಿನ ಪೀಳಿಗೆಗೆ ದಾರಿದೀಪ

ಆಧ್ಯಾತ್ಮ ಚಿಂತಕ ದೇವನೂರು ಶಂಕರ ಅಭಿಮತ

ಮೈಸೂರು, ಅ.28(ಎಸ್‌ಪಿಎನ್)– 12ನೇ ಶತಮಾನದ ವಚನ ಚಳವಳಿ ಜಗತ್ತಿನ ಮಹಾ ಬೆಳಕು. ಈ ಅರಿವಿನ ಜ್ಯೋತಿಯನ್ನು ಇಂದಿನ ಪೀಳಿಗೆಗೆ ಜೋಪಾನವಾಗಿ ಕಾಪಾಡಿಕೊಳ್ಳಬೇಕು ಎಂದು ಆಧ್ಯಾತ್ಮ ಚಿಂತಕ ದೇವನೂರು ಶಂಕರ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರದ ಹೊಸಮಠದ ಆವರಣದ ನಟರಾಜ ಕಲ್ಯಾಣ ಮಂಟಪದಲ್ಲಿ ಹೊಸಮಠದ ವತಿಯಿಂದ ಕಾರ್ತಿಕ ಮಾಸದ ಮೊದಲನೇ ಸೋಮವಾರದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶರಣ–ಶರಣೆಯರ ವಿಶೇಷ ಚಿಂತನೆಗಳು ಶೀರ್ಷಿಕೆಯಡಿ ಅವರು ಮಾತನಾಡಿದರು.



ಶರಣ–ಶರಣೆಯರ ವಿಶೇಷ ಚಿಂತನೆಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಆಧ್ಯಾತ್ಮ ಚಿಂತಕ, ದೇವನೂರು ಶಂಕರ್, ಹೊಸಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ದಬಸವ ಸ್ವಾಮೀಜಿ, ಶ್ರೀ ನೀಲಕಂಠೇಶ್ವರ ಮಠದ ಶ್ರೀ ಸಿದ್ದಮಲ್ಲಸ್ವಾಮೀಜಿ, ಪ್ರೊ.ಶಿವರಾಜಪ್ಪ ಇದ್ದರು.

ವಚನ ಚಳವಳಿ ನೇತೃತ್ವ ವಹಿಸಿದ್ದ ಅಪ್ಪ ಬಸವಣ್ಣನವರ ಆದರ್ಶಗಳೇ ಇಂದಿನ ಪೀಳಿಗೆಗೆ ದಾರಿದೀಪ. ಶರಣರು 12ನೇ ಶತಮಾನದಲ್ಲಿ ಮೌಢ್ಯದ ವಿರುದ್ಧ ಹೋರಾಟ ನಡೆಸಿದರು. ದನಿ ಇಲ್ಲದವರೆಗೆ ಅಪ್ಪ ಬಸವಣ್ಣ ದನಿಯಾದರು. ಆಶ್ರಯ ಇಲ್ಲದವರಿಗೆ ಆಸರೆಯಾಗಿದ್ದರು. ಒಟ್ಟಿನಲ್ಲಿ ಸಮಾಜದಲ್ಲಿ ತುಳಿತಕ್ಕೊಳಗಾದವರ ಪರ ನಿಂತಿದ್ದವರು ಬಸವಣ್ಣ ಎಂದು ಬಣ್ಣಿಸಿದರು.

12ನೇ ಶತಮಾನದ ವಚನ ಚಳವಳಿ ಇಂದಿನ ನಮ್ಮ ಬದುಕನ್ನು ಶ್ರೀಮಂತವಾಗಿಸಿದೆ. ಈ ನೆಲದ ಜಲ, ಗಾಳಿಯನ್ನು ಸೇವಿಸಿ ಬದುಕಿದ್ದೇವೆ. ಜೊತೆಗೆ ಶರಣರ ಆಚಾರ–ವಿಚಾರಗಳನ್ನು ಅರಿತು ಪ್ರತಿ ಯೊಬ್ಬರು ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಾತಿ–ಮತ–ಕುಲ ಯಾವುದಕ್ಕೂ ವಚನದಲ್ಲಿ ಜಾಗವಿಲ್ಲ. ಜಾತಿ ನಾಶವಾಗಬೇಕು ಎಂಬುದು ಶರಣರ ಆಲೋಚನೆಗಳಾಗಿವೆ. ಅಲ್ಲದೆ ಕಾಯಕ ಸಿದ್ಧಾಂತದ ಮೂಲಕ ಮನುಷ್ಯರಿಗೆ ಸ್ವಾಭಿಮಾನದ ಬದುಕು ಕಲಿಸಿಕೊಟ್ಟ ಕೀರ್ತಿ ಅಪ್ಪ ಬಸವಣ್ಣ ನವರಿಗೆ ಸಲ್ಲಬೇಕು. ತಳ ಸಮುದಾಯದ ಬೆವರಿನ ಸಂಸ್ಕೃತಿ ಕುರಿತು ಇಂದಿನ ಪೀಳಿಗೆಗೆ ಅರಿವಾಗಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಹೊಸಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ದಬಸವಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಚೂಡಾಮಣಿ ಪ್ರಾರ್ಥಿಸಿದರು. ಹಿರಿಯ ವಿದ್ಯಾರ್ಥಿನಿ ಸಿ.ಎಸ್. ವೇದಾಶ್ರೀ ಸಿತಾರ್ ವಾದನ ನಡೆಸಿಕೊಟ್ಟರು. ಶ್ರೀ ನೀಲಕಂಠೇಶ್ವರ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಶ್ರೀ ನಟರಾಜ ಪ್ರತಿಷ್ಠಾನದ ಪ್ರೊ.ಎಸ್.ಶಿವರಾಜಪ್ಪ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕಿ ವೀಣಾ ಕುಂಚೂರು ವಂದಿಸಿದರು. ಸಹಾಯಕ ಪ್ರಾಧ್ಯಾಪಕ ಸಂತೋಷ್ ಪಟೇಲ್ ನಿರೂಪಿಸಿದರು.

ಸಾವಿನಲ್ಲೂ ಒಂದಾದ ದಂಪತಿ

ಮೊದಲು ಪತ್ನಿ ಸಾವು, ಪತ್ನಿಗೆ ಪೂಜೆ ಸಲ್ಲಿಸುವ ವೇಳೆ ಪತಿ ನಿಧನ


ನಿಂಗರಾಜನಾಯಕ


ಗೌರಮ್ಮ

ಕೆ.ಆರ್.ಪೇಟೆ, ಅ.28– ಗಂಡ, ಹೆಂಡತಿ ಇಬ್ಬರೂ ಒಂದೇ ದಿನ ನಿಧನರಾದ ಘಟನೆ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದಲ್ಲಿ ನಡೆದಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹುಟ್ಟೂರು ಬೂಕನಕೆರೆ ಗ್ರಾಮದಲ್ಲಿ ಗೌರಮ್ಮ ಭಾನುವಾರ ನಿಧನ ಹೊಂದಿದ್ದರು. ಗೌರಮ್ಮ ಅವರ ಅಂತ್ಯಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಅವರ ಪತಿ ನಿಂಗರಾಜನಾಯಕ ಅವರು ಪತ್ನಿಯ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸುವ ವೇಳೆ ಅಸ್ವಸ್ಥಗೊಂಡು ಸಾವನ್ನಪ್ಪಿದ್ದಾರೆ.

ಕಳೆದ 46 ವರ್ಷಗಳ ಹಿಂದೆ ಗೌರಮ್ಮ ಮತ್ತು ನಿಂಗರಾಜನಾಯಕ ಅವರು ಸಾಂಪ್ರದಾಯಿಕ ವಿವಾಹವಾಗಿದ್ದರು. ದಂಪತಿ ಎಲ್ಲಿಗೆ ಹೋದರೂ ಜೊತೆಯಲ್ಲಿಯೇ ಹೋಗಿ ಬರುತ್ತಿದ್ದರು. ಈ ದಂಪತಿ ಜಗದೀಶ್ ಮತ್ತು ವಿಜಯ್ ಕುಮಾರ್ ಎಂಬ ಇಬ್ಬರು ಪುತ್ರರಿದ್ದಾರೆ. ಜಗದೀಶ್‌ಗೆ ಮದುವೆ ಮಾಡಿದ್ದರೆ ಇನ್ನೊಬ್ಬ ಮಗನಿಗೆ ವಿವಾಹ ಮಾಡಲು ಹೆಣ್ಣನ್ನು ಹುಡುಕುತ್ತಿದ್ದರು. ಈ ನಡುವೆ ಗೌರಮ್ಮ ಭಾನುವಾರ ಬೆಳಿಗ್ಗೆ ಅನಾರೋಗ್ಯದಿಂದ ನಿಧನ ಹೊಂದಿದ್ದರು. ಕುಟುಂಬದವರು ಗೌರಮ್ಮ ಅವರ ಅಂತ್ಯಕ್ರಿಯೆಗೆ ಸಿದ್ಧತೆ ಮಾಡಿಕೊಂಡು, ಮೃತ ಗೌರಮ್ಮ ಅವರ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸುವ ಸಮಯದಲ್ಲಿ ಅವರ ಪತಿ ನಿಂಗರಾಜ ನಾಯಕ ಅವರು ಪೂಜೆ ಸಲ್ಲಿಸುವ ವೇಳೆ ಮುನ್ನವೇ ಅಸ್ವಸ್ಥಗೊಂಡು ಕುಸಿದು ಬಿದ್ದು ಪ್ರಾಣ ಬಿಟ್ಟಿದ್ದಾರೆ.

ನಂತರ ಇಬ್ಬರಿಗೂ ಪೂಜೆ ಸಲ್ಲಿಸಿದ ಕುಟುಂಬದವರು, ಹಾಗೂ ಬಂಧುಗಳು ಒಂದೇ ಕಡೆ ಒಂದೇ ಸಮಯದಲ್ಲಿ ಗಂಡ ನಿಂಗರಾಜನಾಯಕ, ಹೆಂಡತಿ ಗೌರಮ್ಮ ಅವರ ಪಾರ್ಥಿವ ಶರೀರವನ್ನು ಅವರ ಜಮೀನಿನಲ್ಲಿ ಅಕ್ಕಪಕ್ಕ ಹೂಳುವ ಮೂಲಕ ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ.

ಒಂದೇ ದಿನ ದಂಪತಿಗಳಿಬ್ಬರೂ ಸಾವನ್ನಪ್ಪಿರುವ ಸುದ್ದಿಯೂ ಕಾಡ್ಗಿಚ್ಚಿನಂತೆ ಹರಡಿ, ಬೂಕನಕೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಸಾರ್ವಜನಿಕರು ಆಗಮಿಸಿ ಮೃತ ದಂಪತಿಗಳ ಅಂತಿಮ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿ ದುಃಖ ವ್ಯಕ್ತಪಡಿಸಿದರು.

ಪರಿಸರ ಮಾಲಿನ್ಯ ಕುರಿತು ಅರಿವು ಮೂಡಿಸಿ


ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50 ವರ್ಷಗಳ ಸಾರ್ಥಕ ಪಯಣದ ಹಿನ್ನೆಲೆಯಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಮೈದಾನದಲ್ಲಿ ಆಯೋಜಿಸಲಾಗಿದ್ದ "ಸುವರ್ಣ ಮಹೋತ್ಸವ" ಕಾರ್ಯಕ್ರಮವನ್ನು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ: ಜಿಲ್ಲೆಯಲ್ಲಿನ ಮಕ್ಕಳು ಮತ್ತು ವಿದ್ಯಾರ್ಥಿಗಳಿಗೆ ಪರಿಸರ ಮಾಲಿನ್ಯದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಬಹಳ ಅಗತ್ಯ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50 ವರ್ಷಗಳ ಸಾರ್ಥಕ ಪಯಣದ ಹಿನ್ನೆಲೆಯಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಮೈದಾನದಲ್ಲಿ ಆಯೋಜಿಸಲಾಗಿದ್ದ "ಸುವರ್ಣ ಮಹೋತ್ಸವ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಪರಿಸರವನ್ನು ಮಾಲಿನ್ಯ ಮಾಡದೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಹಿರಿಯರಿಗೆ ಪರಿಸರ ಮಾಲಿನ್ಯದ ಅರಿವು ಮೂಡಿಸುವುದಕ್ಕಿಂತಲೂ ವಿದ್ಯಾರ್ಥಿಗಳಿಗೆ ಪರಿಸರ ಮಾಲಿನ್ಯದಿಂದಾಗುವ ದುಷ್ಪರಿಣಾಮ, ಅನಾನುಕೂಲತೆ ಕುರಿತು ಹೆಚ್ಚಿನ ಅರಿವು ಮೂಡಿಸುವುದರಿಂದ ಮುಂದಿನ ಪೀಳಿಗೆಗಳ ಭವಿಷ್ಯಕ್ಕೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪರಿಸರ ಮಾಲಿನ್ಯದಿಂದಾಗುವ ದುಷ್ಪರಿಣಾಮ ಕುರಿತು ಅರಿವು ಮೂಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ರಾಜ್ಯದಲ್ಲಿ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ನಿಮ್ಮ ಸುತ್ತ ಮುತ್ತಲಿನ ವಾತಾವರಣವನ್ನು ಶುದ್ಧವಾಗಿರಿಸಿಕೊಂಡು ಇತರರಿಗೂ ಪರಿಸರ ಮಾಲಿನ್ಯದ ಅರಿವು ಮೂಡಿಸಬೇಕು ಎಂದು ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಗ್ರಾಮಾಂತರ ಪ್ರದೇಶಗಳಿಂದ ಹಿಡಿದು, ತಾಲೂಕು, ಜಿಲ್ಲೆ ಸೇರಿದಂತೆ ರಾಜ್ಯ ಮಟ್ಟದವರೆಗೆ ಏಕ ಕಾಲಕ್ಕೆ ದೊಡ್ಡ ಪ್ರಮಾಣದಲ್ಲಿ ಪರಿಸರ ಜಾಗೃತಿ ಮೂಡಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ಮಾಡಬೇಕಾದ ಅಗತ್ಯದ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿನ ಬೃಹತ್, ಮಧ್ಯಮ ಮತ್ತು ಸಣ್ಣ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ಶುದ್ಧೀಕರಣ ಘಟಕವನ್ನು ಅಳವಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಸಂಸ್ಕರಿಸಿದ ನೀರನ್ನು ಕಾರ್ಖಾನೆಯ ಆವರಣದಲ್ಲಿ ಹಾಗೂ ಕೈಗಾರಿಕೆ ಚಟುವಟಿಕೆಗೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಕಾರ್ಖಾನೆಯ ಆವರಣದಿಂದ ತ್ಯಾಜ್ಯ ನೀರನ್ನು ಹೊರ ಹೋಗದಂತೆ ನಿರ್ಬಂಧ ವಿಧಿಸಲಾಗುತ್ತಿದೆ ಎಂದು ವಿವರಿಸಿದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಕಾವೇರಿನದಿ ಮಂಡ್ಯ ಜಿಲ್ಲೆಯ ಜೀವನಾಡಿ ಆಗಿದೆ ಪ್ರಸ್ತುತ ಜಿಲ್ಲೆಯಲ್ಲಿ ರೆಸಾರ್ಟ್, ಹೋಟೆಲ್‌ಗಳು ಮೋಜು ಮಸ್ತಿ ಎಂದು ಕಾವೇರಿ ನದಿಯನ್ನು ಮಾಲಿನ್ಯ ಮಾಡುತ್ತಿವೆ. ಜಿಲ್ಲೆಯಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಸ್ಥಳೀಯ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕೃಷಿ ಸಖಿ, ಆಶಾ ಕಾರ್ಯಕರ್ತೆಯರು ಹಾಗೂ ಶಾಲಾ ಶಿಕ್ಷಕಿಯರಿಗೆ ಸಾಂಕೇತಿಕವಾಗಿ ಮುಟ್ಟಿನ ಕಪ್ ವಿತರಿಸಲಾಯಿತು ಹಾಗೂ ಜಿಲ್ಲೆಯಲ್ಲಿ ಪರಿಸರಕ್ಕೆ ಕೊಡುಗೆ ನೀಡಿರುವ ಸಾಧಕರಿಗೆ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳೀಗೌಡ, ಮಧು ಜಿ.ಮಾದೇಗೌಡ, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷ ಸಿ.ಡಿ. ಗಂಗಾಧರ, ಮುಡಾ ಅಧ್ಯಕ್ಷ ನಯೀಮ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಉಪಸ್ಥಿತರಿದ್ದರು.

ಚಿನಕುರಳಿ ಗ್ರಾಮದ ದೇಗುಲಗಳಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜೆ



ಪಾಂಡವಪುರ, ಅ.28– ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಕಾರ್ತಿಕ ಮಾಸದ ಮೊದಲನೇ ಸೋಮವಾರದ ಪ್ರಯುಕ್ತ ದಿ.ಸಾಕಮ್ಮ ಮಂಚೇಗೌಡರ ಕುಟುಂಬ ವರ್ಗದಿಂದ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ, ಶ್ರೀ ರಾಮೇಶ್ವರ ದೇವಸ್ಥಾನ, ಶ್ರೀ ಅಂಕನಾಥೇಶ್ವರ ದೇವಸ್ಥಾನ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಶ್ರೀ ಮನೆ ಮಂಚಮ್ಮ ಹಾಗೂ ಶ್ರೀ ಮಾಸ್ತಮ್ಮ ದೇವಸ್ಥಾನ, ಶ್ರೀ ಲಕ್ಷ್ಮಿದೇವಿ ದೇವಸ್ಥಾನದ ವಿಗ್ರಹಗಳಿಗೆ ಅಭಿಷೇಕ ಮತ್ತು ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ನಂತರ ಶ್ರೀ ಆಂಜನೇಯಸ್ವಾಮಿಯ ಉತ್ಸವವನ್ನು ಗ್ರಾಮದ ಎಲ್ಲಾ ಪ್ರಮುಖ ಬೀದಿಗಳಲ್ಲೂ ಮೆರವಣಿಗೆ ಮೂಲಕ ಅದ್ಧೂರಿಯಾಗಿ ನೆರವೇರಿಸಲಾಯಿತು. ಎಲ್ಲಾ ದೇವಾಲಯಗಳನ್ನೂ ವಿದ್ಯುತ್ ದೀಪಾಲಂಕಾರದಿಂದ ಅಲಂಕರಿಸಲಾಗಿತ್ತು.

ಜಿಲ್ಲಾಮಟ್ಟದ ಕಲಾಶ್ರೀ ಸ್ಪರ್ಧೆ

ಮಂಡ್ಯ: ಮಕ್ಕಳ ದಿನಾಚರಣೆಯ ಅಂಗವಾಗಿ 5 ರಿಂದ 15 ವರ್ಷದ ಒಳಗಿನ ಮಕ್ಕಳಿಗೆ ಜಿಲ್ಲೆಯ ಬಾಲ ಭವನದಲ್ಲಿ ಜಿಲ್ಲಾಮಟ್ಟದ ಕಲಾಶ್ರೀ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸೃಜನಾತ್ಮಕ ಕಲೆ, ಸೃಜನಾತ್ಮಕ ಪ್ರದರ್ಶನ ಕಲೆ, ಸೃಜನಾತ್ಮಕ ಬರವಣಿಗೆ ಮತ್ತು ವಿಜ್ಞಾನದಲ್ಲಿ ನೂತನ ಆವಿಷ್ಕಾರ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗುವುದು ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮ ಸಂಯೋಜಕರಾದ ಕೋಮಲ ಪಿ ದೂ.ಸಂ 9036801065 ಅನ್ನು ಸಂಪರ್ಕಿಸಬಹುದಾಗಿದೆ.

ಎಂಡಿಸಿಸಿ ಬ್ಯಾಂಕ್ ಚುನಾವಣೆ; ಜೆಡಿಎಸ್ ಬಿರುಸಿನ ಪ್ರಚಾರ


ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎಚ್.ಸಿ.ಪುಟ್ಟಸ್ವಾಮೀಗೌಡ, ಜಿಪಂ ಸದಸ್ಯ ಸಿ.ಅಶೋಕ್ ಅವರು ಬಿರುಸಿನ ಪ್ರಚಾರ ನಡೆಸಿದರು.

ಪಾಂಡವಪುರ, ಅ.28– ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕ್(ಡಿಸಿಸಿ)ನ ನಿರ್ದೇಶಕ ಸ್ಥಾನದ ಚುನಾವಣೆ ಹಿನ್ನೆಲೆಯಲ್ಲಿ ಪಾಂಡವಪುರ ತಾಲೂಕಿನ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎಚ್.ಸಿ.ಪುಟ್ಟಸ್ವಾಮೀಗೌಡ (ಹೊಸಕೋಟೆಪುಟ್ಟಣ್ಣ) ಅವರು ತಾಲೂಕಿನಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರ ನೇತೃತ್ವದಲ್ಲಿ ತಾಲೂಕಿನ ವಿವಿಧ ಗ್ರಾಮಗಳ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಡೆಲಿಗೇಟ್ಸ್ (ಮತದಾರರು)ಗಳನ್ನು ಭೇಟಿಮಾಡಿ ತಮಗೆ ಮತನೀಡುವಂತೆ ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಅಭ್ಯರ್ಥಿ ಎಚ್.ಸಿ.ಪುಟ್ಟಸ್ವಾಮೀಗೌಡ ಮಾತನಾಡಿ, ನಮ್ಮ ನಾಯಕರಾದ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದದಿಂದ ಡಿಸಿಸಿ ಬ್ಯಾಂಕ್ ಚುನಾವಣೆಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೇನೆ. ಜೆಡಿಎಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಪಕ್ಷ ಸಂಘಟನೆ ಮಾಡಿದ್ದೇನೆ. ನನ್ನನ್ನು ಗುರುತಿಸಿ ಅಭ್ಯರ್ಥಿಯನ್ನಾಗಿ ಮಾಡಿದ್ದಕ್ಕೆ ನಮ್ಮ ನಾಯಕರಾದ ಸಿ.ಎಸ್.ಪುಟ್ಟರಾಜು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕ್ಷೇತ್ರದಲ್ಲಿ ಮತದಾರರನ್ನು ಭೇಟಿ ಮಾಡಿ ಮತ ನೀಡುವಂತೆ ಮನವಿ ಮಾಡುತ್ತಿದ್ದು, ಮತದಾರರು ಸಹಕಾರ ನೀಡುವ ಭರವಸೆ ನೀಡಿದ್ದಾರೆ. ಕ್ಷೇತ್ರದ ಜೆಡಿಎಸ್ ಬೆಂಬಲಿತ ಮತದಾರರು ಸೇರಿದಂತೆ ಎಲ್ಲಾ ಮತದಾರರು ಪಕ್ಷಾತೀತವಾಗಿ ನನಗೆ ಆಶೀರ್ವಾದ ಮಾಡುತ್ತಾರೆ ಎನ್ನುವ ವಿಶ್ವಾಸವಿದೆ ಎಂದರು.

ಇದೇ ವೇಳೆ ಜೆಡಿಎಸ್ ಪಕ್ಷದ ಅಧ್ಯಕ್ಷ ಎಸ್.ಎ.ಮಲ್ಲೇಶ್, ಡಿಸಿಸಿ ಬ್ಯಾಂಕ್ ಹಾಲಿ ನಿರ್ದೇಶಕ ಪಿ.ಚಲುವರಾಜು, ಹಳೇಬೀಡು ಗ್ರಾಪಂ ಅಧ್ಯಕ್ಷ ಎಚ್.ಸಿ.ಧನಂಜಯ್ ಸೇರಿದಂತೆ ಹಲವರು ಇದ್ದರು.

ಬಿ.ಇಡಿ ಕೋರ್ಸಿಗೆ ಅರ್ಜಿ ಆಹ್ವಾನ

ಮಂಡ್ಯ, ಅ.28–2025–26ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ನ.3ರೊಳಗೆ https://schooleducation.karnataka.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಡಯಟ್ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ತವರಿನ ಕವಿ ಕೆ.ಎಸ್.ನರಸಿಂಹಸ್ವಾಮಿ ಗೀತಗಾಯನ, ಉಪನ್ಯಾಸ ಕಾರ್ಯಕ್ರಮ



ಕಿಕ್ಕೇರಿ: ಕಿಕ್ಕೇರಿಯ ಸುಪುತ್ರರಾದ ಮೈಸೂರು ಮಲ್ಲಿಗೆ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರ ನೆನಪಿನ ಕಾರ್ಯಕ್ರಮ ಬುಧವಾರ (ಅ.29) ಇಲ್ಲಿನ ಕೆಪಿಎಸ್ ಶಾಲಾ ವರಣದಲ್ಲಿ ಜರುಗಲಿದ್ದು ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಡೆಯುತ್ತಿದೆ.

ಕವಿಯ ಹುಟ್ಟೂರಿನಲ್ಲಿ ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್, ಮೈಸೂರು ಆಕಾಶವಾಣಿ ಕೇಂದ್ರ, ಮಂಡ್ಯ ಕರ್ನಾಟಕ ಸಂಘ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿರುವ ನೆನಪಿನ ಕಾರ್ಯಕ್ರಮದಲ್ಲಿ ನಾಡಿನ ಶ್ರೇಷ್ಠಗಾಯಕರಾದ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಡಾ.ಅಪ್ಪಗೆರೆ ತಿಮ್ಮರಾಜು, ನಗರ ಶ್ರೀನಿವಾಸ ಉಡುಪ, ಡಾ.ಎಂ.ಡಿ.ಶ್ರೀನಿವಾಸ್, ಹುಸಿನಿ, ಅಮೂಲ್ಯ, ಶ್ರೀಧರ್, ಡೇವಿಡ್ ಕೆಎಸ್‌ನ ವಿರಚಿತ ಗೀತೆಗಳನ್ನು ಹಾಡಲಿದ್ದಾರೆ. ಜೊತೆಗೆ ಶಾಲಾ ಮಕ್ಕಳಿಂದ ಕೆ.ಎಸ್.ನ. ಗೀತಾ ಗುಚ್ಛ ಕಾರ್ಯಕ್ರಮ ವಿಶೇಷವಾಗಿದೆ.

ಕವಿಯ ಪರಿಚಯ ಹಿರಿಯರಲ್ಲಿ ಮಾತ್ರ ಇದ್ದು, ಇದು ಕಿರಿಯ, ಶಾಲಾ ಕಾಲೇಜು ಮಕ್ಕಳಿಗೆ ಪರಿಚಯವಾಗುವ ಉದ್ದೇಶದಿಂದ ಸಾಹಿತಿ ಡಾ.ಎಸ್.ಬಿ.ಶಂಕರೇಗೌಡರವರಿಂದ ಉಪನ್ಯಾಸ ಇದೆ. ಕೆಎಸ್‌ನ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಹೊನ್ನಮ್ಮ ನಿಧನ



ಭಾರತೀನಗರ, ಅ.28– ಇಲ್ಲಿಗೆ ಸಮೀಪದ ಕೆ.ಶೆಟ್ಟಹಳ್ಳಿ ಗ್ರಾಮದ ಭಾರತ ವಿಕಾಸ ಪರಿಷತ್ ಮಾಜಿ ಅಧ್ಯಕ್ಷ ಬೋರಯ್ಯ ಅವರ ತಾಯಿ ಹೊನ್ನಮ್ಮ(95) ಮಂಗಳವಾರ ನಿಧನರಾಗಿದ್ದಾರೆ. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಶೆಟ್ಟಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಮಂಗಳವಾರ ಸಂಜೆ ನಡೆಯಿತು.

ಒಂದನೇ ಪುಟದಿಂದ

ಸ್ಮಾರ್ಟ್ ಪೀಕ್ ಕ್ಯಾಪ್‌ನಲ್ಲಿ ಮಿಂಚಿಂಗ್!

ಕಳೆದ ಸರ್ಕಾರದ ಅವಧಿಯಲ್ಲಿ ಆಯುಧ ಪೂಜೆ ವೇಳೆ ವಿಜಯಪುರ ಹಾಗೂ ಉಡುಪಿಯಲ್ಲಿ ಕೆಲವರು ಸಮವಸ್ತ್ರ ತೆಗೆದು ಕೇಸರಿ ವಸ್ತ್ರ ಧರಿಸಿದ್ದರು. ರಾಜಕೀಯ ಒತ್ತಡ ಹಾಗೂ ಬೇರೆಯವರನ್ನು ಮೆಚ್ಚಿಸಲು ಈ ರೀತಿ ಮಾಡಿದರೆ ನಿಮ್ಮನ್ನು ನೀವು ಮಾರಿಕೊಂಡಂತೆ. ನಿಮ್ಮ ವ್ಯಕ್ತಿತ್ವ, ಇಲಾಖೆಗೆ ಇರುವ ಘನತೆ ನಾಶವಾಗುತ್ತದೆ. ನೀವು ರಾಜಕೀಯ ಹಿಂಬಾಲಕರಾಗುತ್ತೀರಿ. ಆಗ ನಿಮ್ಮನ್ನು ಯಾರು ನಂಬುತ್ತಾರೆ. ಇಂತಹ ಪದ್ಧತಿಗೆ ಯಾವುದೇ ಕಾರಣಕ್ಕೂ ಅವಕಾಶ ಮಾಡಿಕೊಡಬೇಡಿ.

ಹೆಚ್ಚುತ್ತಿರುವ ಸೈಬರ್ ಅಪರಾಧ ಹತೋಟಿಗೆ ಮೇಲಾಧಿಕಾರಿಗಳು, ಕೆಳಹಂತದ ಅಧಿಕಾರಿಗಳು ತಯಾರಾಗಬೇಕು. ಬೆಂಗಳೂರು ಸೇರಿದಂತೆ ನಗರ ಪ್ರದೇಶ ಗಳಲ್ಲಿ ಮನೆಗೆಲಸದವರು, ಚಾಲಕರು, ಕಾವಲುಗಾರರ ವಿವರ ನೋಂದಾಯಿಸಿಕೊಳ್ಳಬೇಕು. ಆಗ ಬಹುಮಟ್ಟಿಗೆ ಅಪರಾಧ ನಿಯಂತ್ರಣಕ್ಕೆ ಬರುತ್ತದೆ. ಗಡಿಯಲ್ಲಿ ಸೈನಿಕ, ಗಡಿಯೊಳಗೆ ಆರಕ್ಷಕ, ಇವರಿಬ್ಬರೂ ನಾಡಿನ ರಕ್ಷಕರು, ರಾಜ್ಯ ಪೊಲೀಸ್ ಇಲಾಖೆಗೆ ಬಹಳ ಗೌರವ ಇದೆ. ಪೊಲೀಸರ ಯಶಸ್ಸಿನಲ್ಲೇ, ಸರ್ಕಾರದ ಯಶಸ್ಸು ಇದೆ. ರಾಜ್ಯ ಪೊಲೀಸ್ ಸಿಬ್ಬಂದಿ ಸಮರ್ಥರಿದ್ದಾರೆ.

ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ 1988ರಲ್ಲಿ ವಿಶ್ವ ಯುವ ಸಮ್ಮೇಳನಕ್ಕೆ ಉತ್ತರ ಕೊರಿಯಾದ ಪ್ಯೋಂಗ್ಯಾಂಗ್‌ಗೆ ತೆರಳಿದ್ದೆ. ಆಗ ಅಲ್ಲಿನ ಪ್ರಮುಖ ವೃತ್ತವೊಂದರಲ್ಲಿ ಮಹಿಳಾ ಪೊಲೀಸ್ ಒಬ್ಬರು ಏಕಾಂಗಿಯಾಗಿ ಸಂಚಾರ ದಟ್ಟಣೆ ನಿಭಾಯಿಸುತ್ತಿದ್ದರು. ನಾನು ಆಕೆಯ ಸಂಬಳ ಎಷ್ಟು ಎಂದು ಕೇಳಿದೆ. ಆಕೆ ಕೋಪಗೊಂಡು ನಾನು ದೇಶಕ್ಕಾಗಿ ಕೆಲಸ ಮಾಡುತ್ತಿದ್ದೇನೆ, ಸಂಬಳಕ್ಕಾಗಿ ಅಲ್ಲ ಎಂದರು.

ಡಾ.ಪರಮೇಶ್ವರ್ ಗೃಹ ಇಲಾಖೆ ಜವಾಬ್ದಾರಿ ವಹಿಸಿಕೊಂಡ ನಂತರ ಹೊಸ ರೂಪ ನೀಡಿದ್ದಾರೆ. ಪೊಲೀಸರಿಗಾಗಿ ವಸತಿ ನಿಲಯ, ಸೇವೆ ವೇಳೆ ಮೃತರಾದರೆ ಪರಿಹಾರ, ಸನ್ಮಿತ್ರ ಕಾರ್ಯಕ್ರಮ ತರಲಾಗುತ್ತಿದೆ. ಪೊಲೀಸ್ ಕುಟುಂಬಕ್ಕಾಗಿ ಅನೇಕ ಯೋಜನೆ ತರಲಾಗಿದೆ. ಬೆಂಗಳೂರಿನ ಜನಸಂಖ್ಯೆ 1.40 ಕೋಟಿ, ವಾಹನಗಳ ಸಂಖ್ಯೆ 1.23 ಕೋಟಿ, ಜನತೆ ಸಾರ್ವಜನಿಕ ಸಾರಿಗೆಗಿಂತ ಸ್ವಂತ ಸಾರಿಗೆ ಮೇಲೆ ಆಸಕ್ತಿ ಹೊಂದಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಬಿಬಿಸಿ ರಸ್ತೆ, ಟನಲ್ ರಸ್ತೆ, ಎಲಿವೇಟೆಡ್ ಕಾರಿಡಾರ್, ಡಬಲ್ ಡೆಕ್ಕರ್ ಸೇರಿದಂತೆ ಅನೇಕ ಯೋಜನೆ ಹಮ್ಮಿಕೊಂಡಿದ್ದೇವೆ. ಸಂಚಾರ ದಟ್ಟಣೆ ನಿವಾರಣೆಗೆ ಸಲಹೆಗಳನ್ನು ಸರ್ಕಾರಕ್ಕೆ ನೀಡಿ ಎಂದರು.

ತಂಡಕ್ಕೆ ಸಿಕ್ತು ಬೇರೊಂದು ಹುಲಿ

ಎಂಬುವರ ಮೇಲೆ ದಾಳಿ ನಡೆಸಿದ್ದ ಹುಲಿಯನ್ನು ಅ.19ರಂದು ಸೆರೆ ಹಿಡಿಯಲಾಗಿತ್ತು. ಆದರೆ, ಅ.26ರಂದು ಬೆಣ್ಣೆಗೆರೆ ಗ್ರಾಮದ ಬಳಿ ರಾಜಶೇಖರ ಅವರನ್ನು ಹತ್ಯೆಗೈಯ್ದಿದೆ. ಇದರ ನಡುವೆ ಯಡಿಯಾಲ ಸಮೀಪದ ಗ್ರಾಮಗಳಲ್ಲಿ ಭೀತಿ ಹುಟ್ಟಿಸಿದ್ದ ಬೇರೊಂದು ಹುಲಿಯನ್ನು ಇಂದು ಸೆರೆ ಹಿಡಿಯಲಾಗಿದೆ.

ಅದೆಷ್ಟು ಹುಲಿಗಳಿವೆ?: ರೈತನ ಮೇಲೆ ದಾಳಿ ನಡೆಸಿದ ಹುಲಿಯೊಂದಿಗೆ ಎರಡು ಮರಿಗಳಿರುವ ಫೋಟೊ ಮತ್ತು ವಿಡಿಯೋ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದ್ದಾರೆ. ಅಲ್ಲದೆ, ಸ್ಥಳೀಯರು 3–4 ಹುಲಿಗಳು ಆ ಪ್ರದೇಶದಲ್ಲಿ ಓಡಾಡುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಅರಣ್ಯದಲ್ಲಿ ಬೇರೆ ಹುಲಿ ಅಥವಾ ಇತರೆ ಪ್ರಾಣಿಗಳಿಂದ ಮರಿಗಳನ್ನು ರಕ್ಷಿಸಲೆಂದೇ ತಾಯಿ ಹುಲಿ ಮರಿಗಳೊಂದಿಗೆ ಕಾಡಂಚಿನ ಹೊಲ, ಹಳ್ಳ–ಕೊಳ್ಳದಲ್ಲಿ ಬೀಡು ಬಿಡುತ್ತವೆ. ದಾಳಿ ನಡೆಸಿರುವ ಹುಲಿಯೂ ಮರಿಗಳೊಂದಿಗೆ ಇರಬಹುದು ಎಂಬ ಅನುಮಾನವೂ ವ್ಯಕ್ತವಾಗುತ್ತಿದೆ. ಅಂಜನಾಪುರದಲ್ಲಿ ಸೆರೆಯಾಗಿದ್ದು ರೈತ ರಾಜಶೇಖರ್ ಅವರನ್ನು ಹತ್ಯೆ ಮಾಡಿದ ಹುಲಿಯಲ್ಲ ಎಂದು ಅರಣ್ಯ ಇಲಾಖೆಯೇ ಸ್ಪಷ್ಟಪಡಿಸಿ, ಕಾರ್ಯಾಚರಣೆ ಮುಂದುವರೆಸಿದೆ. ಹಾಗಾದರೆ ಈ ಭಾಗದಲ್ಲಿ ಇನ್ನೂ ಎಷ್ಟು ಹುಲಿಗಳಿವೆ ಎಂಬುದು ಎಲ್ಲರ ಯಕ್ಷಪ್ರಶ್ನೆಯಾಗಿದೆ.

ನಾಲ್ಕು ದಿನದೊಳಗೆ ವರದಿಗೆ ಸೂಚನೆ

ಮೈಸೂರು: ಹುಲಿ ದಾಳಿಗೆ ಒಳಗಾಗಿ ಮೃತಪಟ್ಟ ಮುಳ್ಳೂರು ಗ್ರಾಮದ ರಾಜಶೇಖರ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಮೈಸೂರಿಗೆ ತಂದಿದ್ದು ಹಾಗೂ ಹುಲಿ ದಾಳಿ ನಡೆಸಿದ ಸ್ಥಳಕ್ಕೆ ಅರಣ್ಯ ಸಿಬ್ಬಂದಿ ತಡವಾಗಿ ಹೋಗಿದ್ದಕ್ಕೆ ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಕಾರಣ ಕೇಳಿ ಸಂಬಂಧಿಸಿದ ಅಧಿಕಾರಿಗೆ ಟಿಪ್ಪಣಿ ನೀಡಿ, ನಾಲ್ಕು ದಿನಗಳ ಒಳಗೆ ವರದಿ ನೀಡಲು ಸೂಚನೆ ನೀಡಿದ್ದಾರೆ.

ಹೈಕೋರ್ಟ್ ಬ್ರೇಕ್

ಇಂತಹ ಸಂದರ್ಭಗಳ ನಿಯಂತ್ರಣದ ಬಗ್ಗೆ ಕಲಂ 31ರ ಉಪವಿಭಾಗ (6)ರಲ್ಲಿ ಏನೆಲ್ಲಾ ವಿಧಾನಗಳನ್ನು ಅನುಸರಿಸಬೇಕೆಂಬುದನ್ನು ನಿಖರವಾಗಿ ಸೂಚಿಸಲಾಗಿದೆ. ಇಂತಹುದೊಂದು ಶಾಸನಬದ್ಧ ಕಲಂ ಅಸ್ತಿತ್ವದಲ್ಲಿ ಇರುವಾಗ ಸರ್ಕಾರದ ಹೊಸ ಆದೇಶ ಸಂವಿಧಾನ ವಿರೋಧಿ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನೋಟಿಸ್: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ ಕಾರ್ಯದರ್ಶಿ, ಡಿಜಿ–ಐಜಿಪಿ ಹಾಗೂ ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 17ರ ಮಧ್ಯಾಹ್ನ 2:30ಕ್ಕೆ ನಿಗದಿ ಮಾಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮಲ್ಲಿಕಾರ್ಜುನ ಹಿರೇಮಠ ವಕಾಲತ್ತು ವಹಿಸಿದ್ದಾರೆ.

ಸರ್ಕಾರದ ಅವಸಾನ ಆರಂಭ

ಎಲ್ಲರನ್ನೂ ಏಕವಚನದಲ್ಲಿ ಮಾತ ನಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ ಎಂದರು. ಕ್ರಾಂತಿ ಹೆಸರಿಟ್ಟಿದ್ದು ಕಾಂಗ್ರೆಸ್: ನವೆಂಬರ್ ಕ್ರಾಂತಿ ಹೆಸರಿಟ್ಟಿದ್ದು ನಾವಲ್ಲ, ಕಾಂಗ್ರೆಸ್‌ನವರು. ಮಾಜಿ ಸಚಿವ ರಾಜಣ್ಣ ಅವರೇ ನವೆಂಬರ್ ಕ್ರಾಂತಿ ಅಂತಾ ಹೇಳಿದ್ದು. ಜನರನ್ನು ದಿಕ್ಕು ತಪ್ಪಿಸಲು ನವೆಂಬರ್ ಕ್ರಾಂತಿ ಪ್ರಹಸನ ಮಾಡುತ್ತಿದೆ ಎಂದರು. ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ, ಕಾನೂನು ಸುವ್ಯವಸ್ಥೆ ಕುಸಿದಿದೆ. ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಅಭಿವೃದ್ಧಿ ಕೆಲಸವಾಗು ತ್ತಿಲ್ಲ. ಸರ್ಕಾರದ ಬಳಿ ಗುಂಡಿ ಮುಚ್ಚಲೂ ಕೂಡ ಹಣವಿಲ್ಲ ಎಂದು ಕಿಡಿಕಾರಿದರು.

ಆರ್‌ಎಸ್‌ಎಸ್ ಬ್ಯಾನ್ ಅಸಾಧ್ಯ : ಆರ್‌ಎಸ್‌ಎಸ್ ಬ್ಯಾನ್ ಮಾಡಲೂ ಕಾಂಗ್ರೆಸ್‌ನಿಂದ ಸಾಧ್ಯವಿಲ್ಲ. ಪ್ರಿಯಾಂಕ ಖರ್ಗೆ ಮೂಲಕ ಆರ್‌ಎಸ್‌ಎಸ್ ಟೀಕೆ, ಜಾತಿ ಸಮೀಕ್ಷೆ ಇಂತಹವುಗಳ ಮೂಲಕ ದಾರಿ ತಪ್ಪಿಸುತ್ತಿದ್ದಾರೆ ಎಂದರು. ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸದಂತೆ ಹೇಳುವ ಹಕ್ಕು ನಿಮಗಿಲ್ಲ. ಸಂವಿಧಾನ ಬದ್ಧ ಹಕ್ಕನ್ನು ಆರ್‌ಎಸ್‌ಎಸ್ ಪಡೆದಿದೆ. ದೇಶ ಕಟ್ಟುವ ಕೆಲಸ ಮಾಡುತ್ತಿರುವ ಆರ್‌ಎಸ್‌ಎಸ್ ವಿರುದ್ಧ ಬೆಳಗಿನಿಂದ ಸಂಜೆವರೆಗೂ ಮಾತನಾಡುತ್ತಾರೆ. ಆರ್‌ಎಸ್‌ಎಸ್ ಟೀಕೆ ಮೂಲಕ ಪ್ರಿಯಾಂಕ ಖರ್ಗೆ ಜನಪ್ರಿಯರಾಗಿರಬಹುದು. ಆದರೆ, ಕಾಂಗ್ರೆಸ್ ಅವಸಾನಕ್ಕೆ ಪ್ರಿಯಾಂಕ ಖರ್ಗೆ ಕಾರಣರಾಗುತ್ತಾರೆ. ಅವರ ಅಹಂಕಾರ ಕೂಡ ಮಿತಿಮೀರಿದೆ ಎಂದು ಟೀಕಿಸಿದರು.

ರಾಜ್ಯಕ್ಕೆ ರಾಹುಲ್ ಗಾಂಧಿ ಭೇಟಿ!

ಅವರ ಆಪ್ತರು ಸಾರ್ವಜನಿಕವಾಗಿ ಚರ್ಚಿಸುತ್ತಿದ್ದಾರೆ. ಇದಕ್ಕೆ ಇತಿಶ್ರೀ ಹಾಡುವ ಉದ್ದೇಶದಿಂದಲೇ ಮುಖ್ಯಮಂತ್ರಿ ವರಿಷ್ಠರ ಭೇಟಿ ಮಾಡಿ ನಾಯಕತ್ವ ಕುರಿತ ಗೊಂದಲಕ್ಕೆ ತೆರೆ ಎಳೆಯುವ ಉದ್ದೇಶದಿಂದ ನವೆಂಬರ್ 15ರಿಂದ 20 ರವರೆಗೆ ಖಾಸಗಿ ಕಾರ್ಯಕ್ರಮ ನಿಮಿತ್ತ ದೆಹಲಿಯಲ್ಲೇ ಉಳಿಯಲಿದ್ದಾರೆ.

ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಕಪಿಲ್ ಸಿಬಲ್ ಬರೆದಿರುವ ಪುಸ್ತಕ ಬಿಡುಗಡೆ ಸಮಾರಂಭ ನವೆಂಬರ್ 15 ರಂದು ನಡೆಯಲಿದ್ದು, ಆ ಕಾರ್ಯಕ್ರಮದಲ್ಲಿ ಭಾಗವಹಿಸುವ ಉದ್ದೇಶ ಇಟ್ಟುಕೊಂಡು ಮುಖ್ಯಮಂತ್ರಿ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲೇ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಅವಕಾಶ ಮಾಡಿಕೊಡುವಂತೆ ಮತ್ತು ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ ಎಳೆಯುವಂತೆ ಮನವಿ ಮಾಡಿಕೊಳ್ಳಲಿದ್ದಾರೆ.

ಮುಖ್ಯಮಂತ್ರಿ ಅವರ ಪ್ರವಾಸ ಮಾಹಿತಿ ಅರಿತ ಡಿ.ಕೆ.ಶಿವಕುಮಾರ್, ಕಳೆದ ಎರಡು ದಿನಗಳ ಹಿಂದೆ ದಿಢೀರನೆ ದೆಹಲಿಗೆ ತೆರಳಿ ಪಕ್ಷದ 100 ಕಚೇರಿ ನಿರ್ಮಾಣ ಶಂಕುಸ್ಥಾಪನೆಗೆ ನಾಯಕರನ್ನು ಆಹ್ವಾನಿಸಿ ಕರ್ನಾಟಕಕ್ಕೆ ಕರೆ ತರುವ ಪ್ರಯತ್ನ ನಡೆಸಿದ್ದಾರೆ. ರಾಹುಲ್ ಗಾಂಧಿ ರಾಜ್ಯ ಪ್ರವಾಸ ವೇಳೆ ಸಿದ್ದರಾಮಯ್ಯ ದೆಹಲಿಯಲ್ಲಿ ಉಳಿಯಲು ಸಾಧ್ಯವಿಲ್ಲ, ರಾಜ್ಯಕ್ಕೆ ಹಿಂತಿರುಗಬೇಕಾಗುತ್ತದೆ. ರಾಹುಲ್ ರಾಜ್ಯ ಪ್ರವಾಸಕ್ಕೆ ಮುನ್ನವೇ ಸಿದ್ದರಾಮಯ್ಯ ಆಡಳಿತ ಪಕ್ಷದಲ್ಲಿನ ಗೊಂದಲ ನಿವಾರಿಸಿಕೊಳ್ಳಬೇಕಿದೆ.

'ಮೊಂಥಾ' ಚಂಡಮಾರುತ ಎದುರಿಸಲು ಆಂಧ್ರ, ಒಡಿಶಾ ಸಜ್ಜು





ಅಮರಾವತಿ/ಭುವನೇಶ್ವರ: ಮೊಂಥಾ ಚಂಡಮಾರುತವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಯಾವುದೇ ಸಂದರ್ಭ ಆಂಧ್ರ ಪ್ರದೇಶದ ಮಚಲಿಪಟ್ಟಣ ಮತ್ತು ಕಾಕಿನಾಡ ನಡುವೆ ಅಪ್ಪಳಿಸಬಹುದು ಎಂದು ಅಂದಾಜಿಸಲಾಗಿದೆ. ಗಾಳಿಯ ವೇಗವು ಗಂಟೆಗೆ 110 ಕಿ.ಮೀನಷ್ಟು ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ಆಂಧ್ರ ಪ್ರದೇಶ ಮತ್ತು ಒಡಿಶಾದ ಮೇಲೆಯೇ ಚಂಡಮಾರುತವು ಹೆಚ್ಚು ಪರಿಣಾಮ ಬೀರಲಿದೆ. ಆದ್ದರಿಂದ, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮುನ್ನೆಚ್ಚರಿಕಾ ಕ್ರಮಗಳ ಪರಿಶೀಲನೆ ನಡೆಸಿದರು. ಯಾವುದೇ ಸಾವು ನೋವು ಸಂಭವಿಸದಂತೆ ನೋಡಿಕೊಳ್ಳುವುದೇ ಸರ್ಕಾರದ ಗುರಿ ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಹೇಳಿದ್ದಾರೆ.

ತೀವ್ರ ಮಳೆಯಾಗುವ ಪ್ರದೇಶಗಳು ಮತ್ತು ತಗ್ಗು ಪ್ರದೇಶಗಳ ಜನರನ್ನು ಸ್ಥಳಾಂತರಿಸುವ ಕಾರ್ಯವನ್ನು ಈ ರಾಜ್ಯಗಳಲ್ಲಿ ನಡೆಸಲಾಗುತ್ತಿದೆ. ಶಾಲೆಗಳು, ಅಂಗನವಾಡಿಗಳಿಗೆ ಅ.30ರವರೆಗೆ ರಜೆ ಘೋಷಿಸಲಾಗಿದೆ. ನೂರಾರು ಶಾಲೆಗಳನ್ನು ನಿರಾಶ್ರಿತ ಶಿಬಿರಗಳನ್ನಾಗಿ ಪರಿವರ್ತಿಸಲಾಗಿದೆ.

ಆಂಧ್ರದ ನೆಲ್ಲೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಮಳೆ ಸುರಿದಿದೆ. ಒಡಿಶಾದ ಎಂಟು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ. ಮೊಂಥಾ ಪರಿಣಾಮವು ರಾಜಸ್ಥಾನದವರೆಗೂ ಹಬ್ಬಿಕೊಂಡಿದ್ದು, ಬೂಂದಿ ಜಿಲ್ಲೆಯಲ್ಲಿ 13 ಸೆಂ.ಮೀ ಮಳೆ ಸುರಿದಿದೆ. ಅ.13ರಂದು ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ವಿಮಾನದ ಸ್ವಲ್ಪ ದೂರದಲ್ಲೇ ಏರ್ ಇಂಡಿಯಾ ಶಟಲ್ ಬಸ್‌ಗೆ ಬೆಂಕಿ

ನವದೆಹಲಿ, ಅ.28– ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್ 3 ರಲ್ಲಿ ಭಾರಿ ಅಗ್ನಿ ಅವಘಡವೊಂದು ನಡೆದಿದೆ. ಏರ್ ಇಂಡಿಯಾ ವಿಮಾನದಿಂದ ಕೆಲವೇ ಮೀಟರ್ ದೂರದಲ್ಲಿ ನಿಂತಿದ್ದ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಧಗ ಧಗನೆ ಹೊತ್ತಿ ಉರಿದಿದೆ. ಎಸ್‌ಎಟಿಎಸ್ ಏರ್‌ಪೋರ್ಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನಿಂದ ನಿರ್ವಹಿಸಲ್ಪಡುವ ಬಸ್ ಬೇ 32ರ ಬಳಿ ನಿಂತಿದ್ದಾಗ ಬೆಂಕಿ ಹೊತ್ತಿಕೊಂಡಿದೆ. ನೋಡ ನೋಡುತ್ತಿದ್ದಂತೆ ಧಗಧಗನೆ ಹೊತ್ತಿ ಉರಿದಿದೆ ಬೆಂಕಿಯ ಕೆನ್ನಾಲಿಗೆ ವಿಮಾನಕ್ಕೆ ತಾಗಿದ್ದರೆ ದೊಡ್ಡ ಗಂಡಾಂತರ ಎದುರಾಗುವ ಸಾಧ್ಯತೆಯಿತ್ತು. ಆದರೆ, ಅದೃಷ್ಟವ ಶಾತ್ ಬೆಂಕಿಯ ಕಿಡಿ ವಿಮಾನಕ್ಕೆ ತಾಗಿಲ್ಲ. ವಿಡಿಯೋದಲ್ಲಿ ಇಡೀ ಬಸ್ ಸುಟ್ಟು ಭಸ್ಮವಾಗಿರುವುದನ್ನು ಕಂಡು ಬರುತ್ತಿದೆ. ಇದೊಂದು ಕಣ್ತಪ್ಪಿನಿಂದ ಆದ ಘಟನೆಯಾಗಿದ್ದು, ಬಸ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಕೂಡಲೇ ಕಾರ್ಯಪ್ರವೃತ್ತರಾದ ನಮ್ಮ ತಜ್ಞ ಎಆರ್‌ಎಫ್‌ಎಫ್ ತಂಡ ಕೆಲವೇ ನಿಮಿಷಗಳಲ್ಲಿ ಬೆಂಕಿಯನ್ನು ನಂದಿಸಿದೆ

ಮಗುವಿನ ರಕ್ಷಣೆ ಮಾಡಿದರೆ ಮೌಲ್ಯಯುತ ಪದವಿ ಪಡೆದಂತೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಎನ್.ಟಿ.ಯೋಗೇಶ ಅಭಿಪ್ರಾಯ


ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಎನ್.ಟಿ. ಯೋಗೇಶ ಮಾತನಾಡಿದರು.

ಮೈಸೂರು, ಅ. 28 – ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಐಕ್ಯೂಎಸಿಯ ಸಹಯೋಗದೊಂದಿಗೆ 'ರಕ್ಷಣೆ ಮತ್ತು ಆರೈಕೆಯ ಮೂಲಕ ಮುಂದಿನ ಪೀಳಿಗೆಯನ್ನು ಸಬಲೀಕರಣಗೊಳಿಸುವುದು ವಿಷಯ ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಮೈಸೂರಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಎನ್.ಟಿ. ಯೋಗೇಶ ಮಾತನಾಡಿ, ಮಗುವಿನ ರಕ್ಷಣೆ, ಬಾಲ್ಯವಿವಾಹ, ಬಾಲ ಕಾರ್ಮಿಕ, ಭಿಕ್ಷಾಟನೆಗೊಳಗೊಂಡ ಒಂದು ಮಗುವನ್ನು ಕಾಪಾಡಿದರೆ ಪದವಿ ಪಡೆದಂತೆ ಮತ್ತು ಮಾನವಿಯತೆಯನ್ನು ತೋರುತ್ತದೆ ಎಂದು ತಿಳಿಸಿದರು.

ಸುಸ್ಥಿರ ಅಭಿವೃದ್ಧಿಯನ್ನು ಗುರುತಿಸುವ 17 ಸೂಚ್ಯಂಕಗಳಲ್ಲಿ 9 ಸೂಚ್ಯಂಕಗಳು ಮಂಡಳಿ ಮತ್ತು ಮಕ್ಕಳಿಗಾಗಿ ಸಂಬಂಧಿಸಿವೆ. ಮಕ್ಕಳನ್ನು ಕೇಂದ್ರವಾಗಿರಿಸಿಕೊಳ್ಳದ ಅಭಿವೃದ್ಧಿಯಿಂದ ಹೆಚ್ಚು ಅನುಕೂಲವಾಗುವುದಿಲ್ಲ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಮಕ್ಕಳು ತಮ್ಮ ಬಾಲ್ಯವನ್ನು ಆನಂದಿಸುವಂತಹ ವಾತಾವರಣ ಮತ್ತು ಸೌಲಭ್ಯ ಒದಗಿಸಬೇಕು. ಆಗಲೇ ಭಾರತ ಭವಿಷ್ಯ ಇನ್ನಷ್ಟು ಭವ್ಯವಾಗಬಲ್ಲದು ಎಂದರು.

ಮೈಸೂರಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಸಹಾಯವಾಣಿಯ ಜಿಲ್ಲಾ ಸಂಯೋಜಕ ರಘು ಎ ಎಸ್ ಮಾತನಾಡಿ, ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಎನ್ನುವುದಕ್ಕಿಂತ ಇಂದಿನ ಮಕ್ಕಳು ಇಂದಿನ ಪ್ರಜೆಗಳು ಎನ್ನುವುದು ಸೂಕ್ತ. ದೇಶದ ಭವಿಷ್ಯವಾಗಿರುವ ಮಕ್ಕಳ ಹಕ್ಕುಗಳ ರಕ್ಷಣೆಯ ವಿಷಯದಲ್ಲಿ ನಾವೆಲ್ಲ ಕೈಜೋಡಿಸಬೇಕಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, 18 ವರ್ಷದ ಕೆಳಗಿನ ಮಕ್ಕಳನ್ನು ಬಾಲ್ಯವಿವಾಹ ಹಾಗೂ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಿದ್ದಾರೆ. ಸಾಮಾಜಿಕ ವ್ಯವಸ್ಥೆ ಹಾಗೂ ಶಿಕ್ಷಣದ ವ್ಯವಸ್ಥೆ ಸರಿಯಿಲ್ಲದ ಕಾರಣ ಬಾಲ್ಯವಿವಾಹ ಮತ್ತು ಬಾಲಕಾರ್ಮಿಕ ಪದ್ಧತಿಯನ್ನು ತೊಲಗಿಸಿ ಜಾಗೃತಿ ಮೂಡಿಸಲು ನಾಗರಿಕರು ಹಾಗೂ ವಿದ್ಯಾರ್ಥಿಗಳ ಸಮೂಹ ಒಗ್ಗೂಡಬೇಕು ಎಂದು ಹೇಳಿದರು. ಪತ್ರಿಕೋದ್ಯಮ ಮತ್ತು ಸಂಮೂಹ ಸಂವಹನ ವಿಭಾಗದ ಮುಖ್ಯಸ್ಥರಾದ ಸ್ವರ್ಣ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಸೈಬೀನ್ ಇಕ್ಬಾಲ್ ಮತ್ತು ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ 100ಕ್ಕೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮದ್ಯ ಕೊಡಿಸದಕ್ಕೆ ಸ್ನೇಹಿತನಿಗೆ ಇರಿತ!



ಘಟನೆ ನಡೆದ ಸ್ಥಳದಲ್ಲಿ ಪೊಲೀಸರು ಮಹಜರು ನಡೆಸಿದರು.

ಮೈಸೂರಿನ ಜೆ.ಪಿ.ನಗರದಲ್ಲಿ ಘಟನೆ

ಮೈಸೂರು, ಅ.28(ಬಿಎಲ್‌ಯು)– ಮದ್ಯ ಕೊಡಿಸಲಿಲ್ಲವೆಂದು ಕೆರಳಿದ ಮದ್ಯವ್ಯಸನಿ, ಸ್ನೇಹಿತನಿಗೆ ಚಾಕುವಿನಿಂದ ಇರಿದ ಘಟನೆ ಮೈಸೂರಿನ ಜೆ.ಪಿ.ನಗರದಲ್ಲಿ ನಿನ್ನೆ ಸಂಭವಿಸಿದೆ.

ಮೈಸೂರಿನ ಮಹದೇವಪುರದ ವಾಸಿ ಸಂಜಯ್ ಚಾಕು ಇರಿತಕ್ಕೊಳಗಾದ ವ್ಯಕ್ತಿಯಾಗಿದ್ದಾನೆ. ಮಹದೇವಪುರದ ವಾಸಿ ರಾಜು ಹಾಗೂ ಸಂಜಯ್ ಸ್ನೇಹಿತರು. ಸಂಜಯ್ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ರಾಜು ಕಾರ್ ಡ್ರೈವರ್.

ಜೆ.ಪಿ.ನಗರದಿಂದ ಮಹದೇವಪುರಕ್ಕೆ ಹೋಗುವ ರಸ್ತೆಯಲ್ಲಿ ರೈಲ್ವೆ ಹಳಿ ಬಳಿ ಮದ್ಯ ಕೊಡಿಸುವಂತೆ ರಾಜು ಸಂಜಯ್‌ನ ಕೇಳಿದ್ದಾನೆ. ಇದಕ್ಕೆ ಸಂಜಯ್ ನಿರಾಕರಿಸಿದ್ದಾನೆ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಕೋಪಗೊಂಡ ರಾಜು, ಸಂಜಯ್‌ಗೆ ಚಾಕುವಿನಿಂದ ಇರಿದಿದ್ದಾನೆ. ಗಾಯಾಳು ಸಂಜಯ್‌ನನ್ನು ನಗರದ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ವಿದ್ಯಾರಣ್ಯಪುರಂ ಪೊಲೀಸರು ರಾಜುವನ್ನು ಬಂಧಿಸಿದ್ದಾರೆ.

ಇತ್ತೀಚೆಗೆ ವಿಜಯನಗರದಲ್ಲೂ ಇಂತಹದ್ದೇ ಪ್ರಕರಣ ವರದಿಯಾಗಿತ್ತು. ತಾನು ಕುಡಿದ ಬಿಲ್ ಪಾವತಿಸಲು ನಿರಾಕರಿಸಿದ ರಿಯಲ್ ಎಸ್ಟೇಟ್ ಏಜೆಂಟ್‌ನನ್ನು ರೌಡಿಯೊಬ್ಬ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಿದ್ದ.

ಪರಿಶುದ್ಧ ನಂದಿನಿ ಉತ್ಪನ್ನಗಳ ಬಳಸಿ; ನಮ್ಮ ರೈತರಿಗೆ ನೆರವಾಗಿ

●ಹೋಟೆಲ್ ಉದ್ಯಮಿಗಳಿಗೆ ಮೈಮುಲ್ ಅಧ್ಯಕ್ಷ ಈರೇಗೌಡ ಮನವಿ ●ನಂದಿನಿ ಉತ್ಪನ್ನಗಳಿಗೆ ಗುಣಮಟ್ಟದಲ್ಲಿ ಯಾವ ಸಂಸ್ಥೆ ಉತ್ಪನ್ನವೂ ಸಾಟಿಯಲ್ಲ ●ಹೋಟೆಲ್ ಉದ್ಯಮಿಗಳು ಶ್ರೇಷ್ಠ ಗುಣಮಟ್ಟದ ನಂದಿನಿ ಉತ್ಪನ್ನಗಳ ಬಳಸುವ ವಾಗ್ದಾನ

ಮೈಸೂರು, ಅ.28(ಎಂಟಿವೈ)– ಹೊರ ರಾಜ್ಯದಿಂದ ಸರಬರಾಜಾಗುತ್ತಿರುವ ಹಾಲು, ಕೋವಾ, ಪನ್ನೀರ್ ಹಾಗೂ ಮಜ್ಜಿಗೆ ನಕಲಿಯಾಗಿದ್ದು, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಈ ಹಿನ್ನೆಲೆಯಲ್ಲಿ ಹೋಟೆಲ್ ಉದ್ಯಮಿಗಳು ಸೇರಿದಂತೆ ಗ್ರಾಹಕರು ನಂದಿನಿ ಉತ್ಪನ್ನಗಳನ್ನು ಬಳಸಿ, ರೈತರಿಗೆ ನೆರವಾಗಬೇಕು ಎಂದು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ಈರೇಗೌಡ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದ ಡಾ.ವರ್ಗೀಸ್ ಕುರಿಯನ್ ಸಭಾಂಗಣದಲ್ಲಿ ನಡೆದ ಮೈಸೂರು ಹೋಟೆಲ್ ಮಾಲೀಕರ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಂದಿನಿ ಉತ್ಪನ್ನಗಳನ್ನು ಹೋಟೆಲ್ ಮಾಲೀಕರು ಬಳಸುವ ಮೂಲಕ ರೈತರ ಹೈನುಗಾರಿಕೆಯನ್ನು ಪ್ರೋತ್ಸಾಹಿಸಬೇಕು. ಮೈಸೂರು ಸೇರಿದಂತೆ ವಿವಿಧೆಡೆ ಹೊರ ರಾಜ್ಯದಿಂದ ನಕಲಿ ಹಾಲು, ತುಪ್ಪ, ಕೋವಾ, ಮಜ್ಜಿಗೆ, ಪನ್ನೀರು ಸೇರಿದಂತೆ ವಿವಿಧ ಹಾಲಿನ ಉತ್ಪನ್ನಗಳು ಸರಬರಾಜಾಗುತ್ತಿವೆ. ಹೋಟೆಲ್ ಉದ್ಯಮದವರು ಉತ್ತಮ ಗುಣಮಟ್ಟದ ಹಾಲಿನ ಖರೀದಿಗೆ ಆದ್ಯತೆ ನೀಡಬೇಕು. ಹಾಲು ಒಕ್ಕೂಟವು ರೈತರಿಂದ ನೇರವಾಗಿ ವೈಜ್ಞಾನಿಕವಾಗಿ ಹಾಲನ್ನು ಪರೀಕ್ಷಿಸಿ ಪಡೆಯುತ್ತಿದೆ. ರೈತರಿಂದ ಖರೀದಿಸಿದ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹೊರ ರಾಜ್ಯದಿಂದ ಬರುತ್ತಿರುವ ನಕಲಿ ಉತ್ಪನ್ನಗಳನ್ನು ತಿರಸ್ಕರಿಸಿ, ನಂದಿನಿ ಉತ್ಪನ್ನಗಳನ್ನೇ ಬಳಸಬೇಕು. ಯಾವುದೇ ಕಾರಣಕ್ಕೂ ನಂದಿನಿ ಉತ್ಪನ್ನ ನಕಲಿ ಆಗಲು ಸಾಧ್ಯವೇ ಇಲ್ಲ ಎಂದರು.



ಮೈಸೂರಿನ ಮೈಮುಲ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಹೋಟೆಲ್ ಉದ್ಯಮಿಗಳ ಸಮಾಲೋಚನಾ ಸಭೆಗೆ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ಈರೇಗೌಡ ಚಾಲನೆ ನೀಡಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ನಂದಿನಿ ಉತ್ಪನ್ನಗಳು ಶ್ರೇಷ್ಠವಾಗಿವೆ. ಬೇರೆ ಒಕ್ಕೂಟಗಳಿಗೆ ಹೋಲಿಕೆ ಮಾಡಿದರೂ ಮೈಮುಲ್‌ನಲ್ಲಿ ಸಿಗುವ ನಂದಿನಿ ಉತ್ಪನ್ನ ಪರಿಶುದ್ಧವಾಗಿದೆ. ಈಗಾಗಲೇ ಅನೇಕ ಹೋಟೆಲ್‌ಗಳಲ್ಲಿ ನಂದಿನಿ ಹಾಲಿನ ಉತ್ಪನ್ನವನ್ನೇ ಬಳಸಲಾಗುತ್ತಿದೆ. ಹೋಟೆಲ್ ಉದ್ಯಮದಲ್ಲಿ ಗುಣಮಟ್ಟ ಕಾಪಾಡುವ ನಿಟ್ಟಿನಲ್ಲಿ ನಂದಿನಿ ಉತ್ಪನ್ನಗಳನ್ನೇ ಹೆಚ್ಚಾಗಿ ಬಳಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಮಂದಿ ನಂದಿನಿ ಉತ್ಪನ್ನಗಳನ್ನೇ ಬಳಸುವಂತೆ ಪ್ರೇರೇಪಿಸುವುದಾಗಿ ಹೇಳಿದರು.

ಮೈಮುಲ್ ನಿರ್ದೇಶಕ ಓಂಪ್ರಕಾಶ್ ಮಾತನಾಡಿ, ಸಹಕಾರ ತತ್ವದಡಿಯಲ್ಲಿ ನಂದಿನಿ ನಡೆಯುತ್ತಿದ್ದು, 500ಎಂಎಲ್‌ನಿಂದ 500 ಲೀಟರ್‌ವರೆಗೂ ಹಾಲು ನೀಡುವವರು ನಮ್ಮ ಸೊಸೈಟಿಯಲ್ಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹೆಚ್‌ಎಫ್ ತಳಿಗಳ ಹಸುಗಳ ವ್ಯಾಮೋಹದಿಂದ ಹೈನೋದ್ಯಮ ಹೇರಳವಾಗಿ ಬೆಳೆಯುತ್ತಿದೆ. ಹೀಗಾಗಿ ಎಲ್ಲರೂ ರೈತ ಸಂಸ್ಥೆಗಳನ್ನು ಬೆಳೆಸಲು ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುರೇಶ್ ನಾಯ್ಕ್ ಮಾತನಾಡಿ, ಇತರೆ ಉತ್ಪನ್ನಗಳಿಗೆ ಹೋಲಿಕೆ ಮಾಡಿದರೆ ನಮ್ಮ ಉತ್ಪನ್ನ ಗುಣಮಟ್ಟದಿಂದ ಕೂಡಿದೆ. ಪನ್ನೀರು, ಬೆಣ್ಣೆ, ಹಾಲು, ತುಪ್ಪ ಮೊದಲಾದ ಉತ್ಪನ್ನಗಳನ್ನು ಬೇಡಿಕೆ ಅನುಗುಣವಾಗಿ ನಿಮಗೆ ಸರಬರಾಜು ಮಾಡಲು ಸಿದ್ಧರಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೋಟೆಲ್ ಉದ್ಯಮಿಗಳಾದ ಸತೀಶ್, ರವಿಶಾಸ್ತ್ರಿ, ಗೋವಿಂದೇಗೌಡ, ಮೈಮುಲ್ ನಿರ್ದೇಶಕ ಸದಾನಂದ ಮಾತನಾಡಿದರು. ನಿರ್ದೇಶಕರಾದ ಎ.ಟಿ.ಸೋಮಶೇಖರ, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂಪ್ರಕಾಶ್, ಪಿ.ಎಂ.ಪ್ರಸನ್ನ, ಆರ್.ಚಲುವರಾಜು, ಕೆ.ಎಸ್.ಕುಮಾರ್, ದಾಕ್ಷಾಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ.ನಾಗರಾಜು, ನೀಲಾಂಬಿಕೆ ಮಹೇಶ್ ಕುರುಬೂರು, ಶಿವಮಾಲಿ ಷಣ್ಮುಗಂ, ಬಿ.ಎಸ್.ಸದಾನಂದ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ಜೀವಮಾನ ಸಾಧನೆ' ಪ್ರಶಸ್ತಿ



ವಿಶಾಖಪಟ್ಟಣಂನ ನಟರಾಜ ಸಂಗೀತ ನೃತ್ಯ ಅಕಾಡೆಮಿಯು ಮೈಸೂರಿನ ರಮಾಬಾಯಿ ಗೋವಿಂದರಾವ್ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ನೃತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಿದರು. ಈ ವೇಳೆ ಬಿ.ಆರ್.ವಿಕ್ರಂ, ಡಾ.ತುಳಸೀ ರಾಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ರಮೇಶ್ ಕತ್ತಿ ವಿರುದ್ಧ ಪ್ರತಿಭಟನೆ ನಡೆಸಿ ಅಟ್ರಾಸಿಟಿ ಕೇಸ್ ಹಾಕಿದವರ ಜಾತಿ ಪ್ರಮಾಣ ಪತ್ರ ಪರಿಶೀಲನೆಗೆ ಆಗ್ರಹ

ಮೈಸೂರು, ಅ.28(ಎಂಕೆ)– ವಾಲ್ಮೀಕಿ ಸಮಾಜದ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದಾರೆಂದು ಮಾಜಿ ಸಂಸದ ರಮೇಶ್ ಕತ್ತಿ ವಿರುದ್ಧ ಪ್ರತಿಭಟನೆ ನೇತೃತ್ವ ವಹಿಸಿ, 15 ಅಟ್ರಾಸಿಟಿ ಕೇಸ್ ದಾಖಲಿಸಿರುವವರ ಜಾತಿ ಪ್ರಮಾಣಪತ್ರ ಪರಿಶೀಲಿಸುವಂತೆ ಅಖಿಲ ಭಾರತ ಆದಿವಾಸಿ(ಪಪಂ) ಹಿತರಕ್ಷಣಾ ಸಮಿತಿ ಅಧ್ಯಕ್ಷ ಜಿ.ಸ್ವಾಮಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಮೇಶ್ ಕತ್ತಿ 'ಬ್ಯಾಡ' ಎಂಬ ಪದಬಳಕೆ ಮಾಡಿದ್ದಾರೆಯೇ ವಿನಹಃ 'ಬೇಡ' ಎಂದಿಲ್ಲ. ಹಾಗಾಗಿ 'ಬ್ಯಾಡ' ಎಂಬ ಸಮುದಾಯ ಒಬಿಸಿ ಪಟ್ಟಿಯಲ್ಲಿ ಬರಲಿದೆ. ಆದರೂ 'ಬೇಡ' ಎಂಬ ಪದ ಬಳಕೆ ಮಾಡಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ರಮೇಶ್ ಕತ್ತಿ ವಿರುದ್ಧ ಪ್ರಕರಣ ದಾಖಲಿಸಿ, ಹೋರಾಟ ನಡೆಸಿದ ಕೆಲ ಮುಖಂಡರು, ಪರಿಶಿಷ್ಟ ಪಂಗಡದ ಮೂಲ ಆದಿವಾಸಿಗಳನ್ನು ಕಡೆಗಣಿಸುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಬ್ಯಾಡ' ಎಂಬ ಪದ ಬಳಕೆ ಮಾಡಿರುವುದು ಸ್ಪಷ್ಟವಾಗಿದ್ದರೂ ವಾಲ್ಮೀಕಿ ಅಥವಾ ನಾಯಕ ಸಮುದಾಯದವರು ಏಕೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಕೆಲ ವರ್ಷಗಳ ಹಿಂದೆಯಷ್ಟೇ ಪರಿಶಿಷ್ಟ ಪಂಗಡ ಪಟ್ಟಿಗೆ ಸೇರ್ಪಡೆಯಾದವರು ಮೂಲ ಆದಿವಾಸಿಗಳನ್ನು ಕಡೆಗಣಿಸಿ, ಸರ್ಕಾರದ ಸೌಲಭ್ಯಗಳನ್ನು ತಾವೇ ಪಡೆದು ನಮ್ಮನ್ನು ವಂಚಿಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.


ವಾಸ್ತವವಾಗಿ ನಾಯಕ ಸಮುದಾಯ ಮೊದಲಾದವರ ಶೋಷಣೆಯನ್ನು ಮೂಲ ಎಸ್‌ಟಿಗಳು ಅನುಭವಿಸಬೇಕಾಗುತ್ತಿದೆ. ನಿಜವಾದ ಮೂಲ ನಿವಾಸಿಗಳೇ ಸುಮ್ಮನಿರುವಾಗ 'ಬೇಡ' ಎಂಬ ಪದ ಬಳಸಿಕೊಂಡು ದೂರುಗಳನ್ನು ದಾಖಲಿಸಲಾಗುತ್ತಿದೆ ಎಂದರು. ಸಮಿತಿ ಪದಾಧಿಕಾರಿಗಳಾದ ವೈ.ಕೆ.ಸುಬ್ರಮಣ್ಯ, ರಾಜು, ದೇವಮ್ಮ, ಮಂಗಳಮ್ಮ ಉಪಸ್ಥಿತರಿದ್ದರು.

ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಶಿಬಿರ

ಮೈಸೂರು, ಅ. 28 –ಮೈಸೂರಿನ ಕೇಂದ್ರ ಪಿಂಚಣಿದಾರರ ಅಸೋಸಿಯೇಷನ್ ವತಿಯಿಂದ ನವೆಂಬರ್ 2ರಂದು ಬೆಳಗ್ಗೆ 9.30ರಿಂದ ಸಂಜೆ 4ರವರೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪಾಠಶಾಲೆ ಆವರಣದಲ್ಲಿ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಶಿಬಿರ ಆಯೋಜಿಸಲಾಗಿದೆ. ಎಲ್ಲಾ ಕೇಂದ್ರ ಸರ್ಕಾರಿ ಪಿಂಚಣಿದಾರರು ಶಿಬಿರದಲ್ಲಿ ಭಾಗವಹಿಸಿ, ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449621314 ಸಂಪರ್ಕಿಸಬಹುದು.

ಮೈಸೂರು, ಮಂಡ್ಯ, ಕೊಡಗು, ಹಾಸನದಲ್ಲಿ ದಟ್ಟ ಮೋಡ; ತುಂತುರು ಮಳೆ ಸಾಧ್ಯತೆ

ಬಂಗಾಳಕೊಲ್ಲಿಯ 'ಮೊಂತಾ' ಚಂಡಮಾರುತದ ಪರಿಣಾಮ



ಮೈಸೂರು, ಅ.28(ಬಿಎಲ್‌ಯು)– ಬಂಗಾಳ ಕೊಲ್ಲಿಯಲ್ಲಿ ಕ್ರೋಢೀಕರಣಗೊಂಡಿರುವ 'ಮೊಂತಾ' ಚಂಡ ಮಾರುತವು ಆಂಧ್ರಪ್ರದೇಶ ಹಾಗೂ ಒಡಿಶಾ ಕರಾವಳಿಯತ್ತ ಸಾಗುತ್ತಿದ್ದು, ಮೈಸೂರು, ಹಾಸನ, ಕೊಡಗು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನಾಳೆ (ಅ.29)ಯಿಂದ ನ.2ರವರೆಗೆ ಇಂದಿನಂತೆ ಮೋಡ ಕವಿದ ವಾತಾವರಣ ವಿರಲಿದ್ದು, ತುಂತುರು ಮಳೆ ಬೀಳುವ ಸಾಧ್ಯತೆ ಇದೆ.



ಈ ಕುರಿತು ಮೈಸೂರಿನ ನಾಗನಹಳ್ಳಿಯ ಹವಾಮಾನ ಇಲಾಖೆ ಅಧಿಕೃತ ಮಾಹಿತಿ ನೀಡಿದೆ. ಗರಿಷ್ಠ ಉಷ್ಣಾಂಶ 30ರಿಂದ 31 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 21ರಿಂದ 22 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ. ಬೆಳಗ್ಗಿನ ಗಾಳಿಯ ತೇವಾಂಶ ಶೇ.79ರಿಂದ 86 ಹಾಗೂ ಮಧ್ಯಾಹ್ನದ ತೇವಾಂಶ ಶೇ.70ರಿಂದ 72ರಷ್ಟು ಇರಲಿದೆ. ಗಾಳಿಯು ಗಂಟೆಗೆ 4ರಿಂದ 8 ಕಿಲೋ ಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಅರಬ್ಬಿಸಮುದ್ರದ ವಾಯುಭಾರ ಕುಸಿತವು ಗುಜರಾತ್ ತೀರದಲ್ಲಿದ್ದು, ಬಂಗಾಳಕೊಲ್ಲಿಯ 'ಮೊಂತಾ' ಚಂಡಮಾರುತವು ಆಂಧ್ರ ಪ್ರದೇಶದ ಕರಾವಳಿಯಿಂದ ನಾಳೆ ಒಡಿಸ್ಸಾ ಕರಾವಳಿ ತಲುಪಿ ಶಿಥಿಲಗೊಳ್ಳುವ ಲಕ್ಷಣಗಳಿವೆ.

ರೈತರಿಗೆ ಕೆಲವು ಸಲಹೆ

ಚಂಡಮಾರುತದ ಹಿನ್ನೆಲೆಯಲ್ಲಿ ಬೆಳೆ ಬೆಳೆಯುವ ರೈತರಿಗೆ ಹವಾಮಾನ ಇಲಾಖೆ ಕೆಲವು ಸಲಹೆಗಳನ್ನು ನೀಡಿದೆ.

ಭತ್ತ ಮತ್ತು ತರಕಾರಿ ಹೊಲಗಳಲ್ಲಿ ನೀರು ನಿಲ್ಲುವುದು ತಪ್ಪಿಸಲು ಒಳಚರಂಡಿ ವ್ಯವಸ್ಥೆ ಮಾಡಿ. ಶುಷ್ಕ ವಾತಾವರಣದಲ್ಲಿ ಕೀಟಗಳನ್ನು ಹೀರಲು ರಾಗಿ ಮತ್ತು ದ್ವಿದಳ ಧಾನ್ಯಗಳಲ್ಲಿ ಬೇವಿನ ಎಣ್ಣೆ ಅಥವಾ ಸಸ್ಯಶಾಸ್ತ್ರೀಯ ಸಿಂಪಡಣೆ ಮಾಡಿ ಎಂದು ಹೇಳಿದೆ. ಮಣ್ಣು ತುಂಬಾ ತೇವವಾಗಿದ್ದಾಗ ಅಂತಹ ಕೃಷಿ ಕಾರ್ಯಾಚರಣೆಗಳನ್ನು ನಿಲ್ಲಿಸಿ. ಗಾಳಿಯಿಂದ ಟೊಮೆಟೊ, ಮೆಣಸಿನ ಕಾಯಿ ಮತ್ತು ಬಳ್ಳಿಗಳು ನೆಲಕ್ಕೆ ತಾಕದಂತೆ ಗಿಡಗಳನ್ನು ಕಟ್ಟಿ, ಆರ್ದ್ರ(ಗಾಳಿಯ ತೇವಾಂಶ) ಪರಿಸ್ಥಿಗಳಲ್ಲಿ ಹಣ್ಣು ಕೊಳೆತ ಮತ್ತು ಎಲೆ ರೋಗವನ್ನು ಗಮನಿಸಿ ಎಂದು ಸಲಹೆ ನೀಡಿದೆ. ರಬಿ ಬೆಳೆ (ವಸಂತ ಕಾಲದ ಬೆಳೆ) ಗಾಗಿ ಕೃಷಿ ಹೊಂಡಗಳಲ್ಲಿ ಮಳೆ ನೀರನ್ನು ಕೊಯ್ಲು ಮಾಡಿ ಹಾಗೂ ಸಂಗ್ರಹಿಸಿ. ಗೋವುಗಳಿಗೆ ಒಣ ಮೇವು ನೀಡಿ. ಸೋಂಕು ತಡೆಗಟ್ಟಲು ಶೆಡ್‌ಗಳಲ್ಲಿ ನೈರ್ಮಲ್ಯ ಕಾಪಾಡಿ ಎಂದು ಹವಾಮಾನ ಇಲಾಖೆ ರೈತರಿಗೆ ಸಲಹೆ ನೀಡಿದೆ.

ಕನಕದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷರಿಂದ ಹಣ ದುರುಪಯೋಗ

ಹಾಲಿ ಅಧ್ಯಕ್ಷ ಮಾಲೇಗೌಡ ಆರೋಪ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಾಲೇಗೌಡ ಮಾತನಾಡಿದರು.

ಮೈಸೂರು,ಅ.28(ಜಿಎ)– ಹೆಚ್.ಡಿ. ಕೋಟೆ, ಸರಗೂರಿನ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರನ್ನಾಗಿ ಕಳೆದ ಫೆ.25ರಂದು ನಡೆದ ಸಂಘದ ವಿಶೇಷ ಸರ್ವ ಸದಸ್ಯರ ಸಭೆ ತಮ್ಮನ್ನು ಆಯ್ಕೆ ಮಾಡಿದೆ. ಇದೇ ವೇಳೆ ಹಿಂದಿನ ಅಧ್ಯಕ್ಷ ಆನಂದ್ ಅವರ ಮೇಲೆ ಕೆಲ ಆರೋಪಗಳಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಕರಣ ನ್ಯಾಯಾಲಯದಲ್ಲಿದೆ. ಹೀಗಿದ್ದರೂ ಉಚ್ಚಾಟಿತ ಅಧ್ಯಕ್ಷರು ಈ ಕುರಿತು ಅನಗತ್ಯ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆಂದು ಅಧ್ಯಕ್ಷ ಕೆ.ಎಸ್.ಮಾಲೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಅಧ್ಯಕ್ಷರು ಸಂಘದ ಹಣ ದುರುಪಯೋಗಪಡಿಸಿಕೊಂಡಿದ್ದಾರೆ. ಕನಕ ಭವನವನ್ನು ಬಾಡಿಗೆಗೆ ನೀಡಿರುವ ಹಣ ಹಾಗೂ ಶಾಸಕರು, ವಿಧಾನಪರಿಷತ್ ಸದಸ್ಯರು ನೀಡಿರುವ ದೇಣಿಗೆ ಹಣ ಸಂಘದ ಖಾತೆಗೆ ಜಮಾ ಮಾಡಿಲ್ಲ ಎಂಬ ಆರೋಪಗಳಿವೆ. ಈ ಕುರಿತು ಸಹಕಾರ ಇಲಾಖೆಗೆ ದೂರು ಸಹ ನೀಡಿದ್ದು, ನ್ಯಾಯಾಲಯದಲ್ಲಿಯೂ ಪ್ರಕರಣ ಬಾಕಿ ಇದೆ. ಹೀಗಿದ್ದರೂ ಅವರು ಗೊಂದಲ ಸೃಷ್ಟಿಸುವ ಹೇಳಿಕೆ ನೀಡುತ್ತಿದ್ದಾರೆಂದು ಆರೋಪಿಸಿದರು.

ನ್ಯಾಯಾಲಯದ ಆದೇಶ ನಿರೀಕ್ಷಿಸಿದ್ದು, ಈ ಬಾರಿಯ ಕನಕ ಜಯಂತಿ ತಾಲೂಕು ಆಡಳಿತ ಸರಳವಾಗಿ ಆಚರಿಸಲು ಹಾಗೂ ಆದೇಶ ಬಂದ ನಂತರ ಸಂಘದ ವತಿಯಿಂದ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಯತೀಶ್‌ಕುಮಾರ್, ಕರಿಯಪ್ಪಗೌಡ, ಶಿರಮಳ್ಳಿ ಚಿಕ್ಕಣ್ಣ, ಕೆ.ಸಿ.ಮಹದೇವ, ರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಜೋಶಿ ಅವಧಿಯಲ್ಲಿ ಹಣ ದುರ್ಬಳಕೆ ಆರೋಪ

ಕಸಾಪ ಆಡಳಿತಾಧಿಕಾರಿ ಕೆ.ಎಂ.ಗಾಯಿತ್ರಿ ಅಧಿಕಾರ ಸ್ವೀಕಾರ

ಬೆಂಗಳೂರು: ಡಾ. ಮಹೇಶ್ ಜೋಶಿ ಅಧ್ಯಕ್ಷರಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣ ಹಾಗೂ ಅಧಿಕಾರ ದುರ್ಬಳಕೆ ಆರೋಪದ ಹಿನ್ನೆಲೆಯಲ್ಲಿ ಸರ್ಕಾರ ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರನ್ನು ನೇಮಿಸಿದ್ದು, ಅವರಿಂದು ಕಸಾಪ ಕೇಂದ್ರ ಕಚೇರಿಗೆ ತೆರಳಿ ಅಧಿಕಾರ ಸ್ವೀಕರಿಸಿದರು.



ಕೆ.ಎಂ.ಗಾಯಿತ್ರಿ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣಕಾಸಿನ ಅವ್ಯವಹಾರ ಹಾಗೂ ಅಧಿಕಾರ ದುರ್ಬಳಕೆ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಸಹಕಾರ ಇಲಾಖೆ ಕಳೆದ ಜುಲೈನಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಿತ್ತು. ವಿಚಾರಣೆಗೆ ಸಂಬಂಧಿಸಿದಂತೆ ಕಸಾಪದವರು ನಿಗದಿತ ಕಾಲಾವಧಿಯಲ್ಲಿ ಹಾಜರಾಗದಿರುವುದು, ಅಗತ್ಯ ದಾಖಲಾತಿಗಳನ್ನು ಒದಗಿಸದಿರುವ ಕಾರಣ ನೀಡಿ, ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಇಲಾಖೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ಈ ಶಿಫಾರಸ್ಸಿನ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇಂದು ಆಡಳಿತಾಧಿಕಾರಿ ನೇಮಕ ಮಾಡಿದೆ. ಮುಂದಿನ 3 ತಿಂಗಳು ಅಥವಾ ಕಸಾಪದ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿದ ವಿಚಾರಣೆ ಮುಗಿಯುವವರೆಗೂ ಆಡಳಿತಾಧಿಕಾರಿಯಾಗಿ ಕೆ.ಎಂ.ಗಾಯಿತ್ರಿ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಎರಡು ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಹೆಸರು

ಪ್ರಶಾಂತ್ ಕಿಶೋರ್‌ಗೆ ನೋಟಿಸ್

ಪಾಟ್ನಾ,ಅ.28–ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಅವರು ಎರಡು ರಾಜ್ಯಗಳ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ ಎಂದು ಹಲವು ಮಾಧ್ಯಮ ವರದಿಗಳು ವರದಿ ಮಾಡಿದ ನಂತರ ಬಿಹಾರದ ರೋಹ್ತಾಸ್‌ನಲ್ಲಿರುವ ಜಿಲ್ಲಾ ಚುನಾವಣಾ ಕಚೇರಿ ಮಂಗಳವಾರ ಅವರಿಗೆ ನೋಟಿಸ್ ನೀಡಿದೆ.

ಪ್ರಶಾಂತ್ ಕಿಶೋರ್ ಅವರು ಬಿಹಾರ ಮತ್ತು ಪಕ್ಕದ ಪಶ್ಚಿಮ ಬಂಗಾಳದಲ್ಲಿ ಮತದಾರರಾಗಿ ನೋಂದಾಯಿಸಿಕೊಂಡಿದ್ದಾರೆ ಎಂದು ಟಿಎನ್‌ಐಇ ಮೊದಲು ವರದಿ ಮಾಡಿತ್ತು. ವರದಿ ಬೆನ್ನಲ್ಲೇ ಎಚ್ಚೆತ್ತ ಚುನಾವಣಾ ಆಯೋಗ, ಪ್ರಶಾಂತ್ ಕಿಶೋರ್‌ಗೆ ನೋಟಿಸ್ ನೀಡಿದ್ದು, ಮೂರು ದಿನಗಳಲ್ಲಿ ಪ್ರತಿಕ್ರಿಯಿಸುವಂತೆ ಸೂಚಿಸಲಾಗಿದೆ.

ಪ್ರಶಾಂತ್ ಕಿಶೋರ್ ಅವರು ರೋಹ್ತಾಸ್ ಜಿಲ್ಲೆಯ ಸಸಾರಾಮ್ ಲೋಕಸಭಾ ಕ್ಷೇತ್ರದ ಕಾರ್ಗಹರ್ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಾಗಿ ನೋಂದಾಯಿಸಿಕೊಂಡಿದ್ದಾರೆ. ಅವರ ಪೂರ್ವಜರ ಗ್ರಾಮ ಕೋನಾರ್‌ನಲ್ಲಿರುವ ಸೆಂಟ್ರಲ್ ವಿದ್ಯಾಲಯ ಅವರ ಮತದಾನ ಕೇಂದ್ರವಾಗಿದೆ.

ಮತ್ತೊಂದೆಡೆ ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿಧಾನಸಭಾ ಕ್ಷೇತ್ರವಾದ ಭಬಾನಿಪುರದಲ್ಲಿ 121 ಕಾಲಿಘಾಟ್ ರಸ್ತೆ ಎಂದು ಪ್ರಶಾಂತ್ ಕಿಶೋರ್ ಅವರ ವಿಳಾಸವಿದೆ. ತಮ್ಮ ಮತಕೇಂದ್ರವನ್ನು ಬಿ ರಾಣಿಶಂಕರಿ ಲೇನ್‌ನಲ್ಲಿರುವ ಸೇಂಟ್ ಹೆಲೆನ್ ಶಾಲೆ ಎಂದು ಹೆಸರಿಸಲಾಗಿದೆ. ಕಿಶೋರ್ ಅವರು 2021ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಸಲಹೆಗಾರರಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಜೊತೆ ಕೆಲಸ ಮಾಡಿದ್ದರು.



ಚುನಾವಣಾ ಆಯೋಗ ತನ್ನ ನೋಟಿಸ್‌ನಲ್ಲಿ ಪ್ರಶಾಂತ್ ಕಿಶೋರ್ ಅವರು 2 ರಾಜ್ಯಗಳಲ್ಲಿ ಮತದಾರರಾಗಿರುವುದನ್ನು ಎತ್ತಿ ತೋರಿಸಿದ ಮಾಧ್ಯಮ ವರದಿಯನ್ನು ಉಲ್ಲೇಖಿಸಲಾಗಿದೆ.

ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 31 ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ತನ್ನ ಹೆಸರನ್ನು ಮತದಾರರಾಗಿ ನೋಂದಾಯಿಸಿಕೊಳ್ಳುವುದನ್ನು ನಿಷೇಧಿಸುತ್ತದೆ ಮತ್ತು ಈ ನಿಬಂಧನೆಯ ಉಲ್ಲಂಘನೆಯು ಒಂದು ವರ್ಷ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ದೇಶ - ವಿದೇಶ

ವಾಯುಮಾಲಿನ್ಯ ತಗ್ಗಿಸಲು ದೆಹಲಿ ಸುತ್ತಮುತ್ತ ಮೋಡಬಿತ್ತನೆ



ನವದೆಹಲಿ: ಚಳಿಗಾಲದಲ್ಲಿ ದೆಹಲಿಯಲ್ಲಿ ಉಂಟಾಗುವ ವಾಯುಮಾಲಿನ್ಯ ತಡೆಗಟ್ಟುವುದಕ್ಕಾಗಿ ಐಐಟಿ ಕಾನ್ಪುರದ ಸಹಯೋಗದಲ್ಲಿ ದೆಹಲಿ ಸರ್ಕಾರ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಮೋಡಬಿತ್ತನೆ ಕಾರ್ಯ ಕೈಗೊಂಡಿದೆ.

ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರದೇಶದಲ್ಲಿ ಈ ಪ್ರಯೋಗವನ್ನು ವಿಸ್ತರಿಸಲಾಗುವುದು ಎಂದು ಪರಿಸರ ಇಲಾಖೆ ಸಚಿವ ಮಜಿಂದರ್‌ಸಿಂಗ್ ಸಿರ್ಸಾ ಹೇಳಿದ್ದಾರೆ. ಮೋಡಬಿತ್ತನೆ ಮಾಡುವ ವಿಮಾನವು ಕಾನ್ಪುರದಿಂದ ಹಾರಾಟ ಆರಂಭಿಸಿ, ದೆಹಲಿ ಸುತ್ತಮುತ್ತಲಿನ ಪ್ರದೇಶಗಳಾದ ಬುರಾರಿ, ಉತ್ತರ ಕರೋಲ್ ಬಾಘ್ ಮತ್ತು ಮಯೂರ್ ವಿಹಾರ ಪ್ರದೇಶಗಳಲ್ಲಿ ಕಾರ್ಯಾಚರಣೆ ಪೂರ್ಣಗೊಳಿಸಿ, ಮೀರತ್ ವಾಯು ನೆಲೆಯಲ್ಲಿ ಇಳಿಯಿತು. ಎಂಟು ಗನ್‌ಗಳ ಮೂಲಕ ಅರ್ಧ ಗಂಟೆಗಳ ಕಾಲ ರಾಸಾಯನಿಕವನ್ನು ವಾತಾವರಣಕ್ಕೆ ಬಿಡುಗಡೆ ಮಾಡಿತು ಎಂದು ಸಿರ್ಸಾ ವಿಡಿಯೊ ಮೂಲಕ ಮಾಹಿತಿ ನೀಡಿದ್ದಾರೆ. ಮೋಡಬಿತ್ತನೆ ಪ್ರಕ್ರಿಯೆ ನಡೆದ 15 ನಿಮಿಷದಿಂದ 4 ಗಂಟೆಗಳ ಒಳಗೆ ಮಳೆ ಮೋಡಗಳು ಸೃಷ್ಟಿಯಾಗುತ್ತವೆ ಎಂದು ಐಐಟಿ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ ಎಂದು ಸಿರ್ಸಾ ತಿಳಿಸಿದರು.


ವಿಕಿಪೀಡಿಯಾ ಪ್ರತಿಯಾಗಿ ಗ್ರೋಕಿಪಿಡಿಯಾ ಬಿಡುಗಡೆ

ವಾಷಿಂಗ್ಟನ್: ಟೆಕ್ ಬಿಲಿಯನೇರ್ ಎಲೋನ್ ಮಸ್ಕ್ ಗ್ರೋಕಿಪೀಡಿಯಾ ಎಂಬ ಆನ್‌ಲೈನ್ ವಿಶ್ವ ಕೋಶವನ್ನು ಬಿಡುಗಡೆ ಮಾಡಿದ್ದಾರೆ. ಇದು ಕೃತಕ ಬುದ್ಧಿಮತ್ತೆಯಿಂದ(AI) ಉತ್ತೇಜಿಸಲ್ಪಟ್ಟಿದೆ ಮತ್ತು ಪ್ರಮುಖ ಪರ್ಯಾಯವಾದ ವಿಕಿಪೀಡಿಯಾಕ್ಕಿಂತ ತನ್ನ ಸಂಪ್ರದಾಯವಾದಿ ರಾಜಕೀಯ ದೃಷ್ಟಿಕೋನಗಳಿಗೆ ಹತ್ತಿರವಾಗುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಎಲೋನ್ ಮಸ್ಕ್ ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಟ್ರಂಪ್ ಆಡಳಿತದ AI ಮತ್ತು ಕ್ರಿಪ್ಟೋ ದೊರೆ ಆಗಿರುವ ಸ್ನೇಹಿತ ಮತ್ತು ಸಹ ತಂತ್ರಜ್ಞಾನ ಹೂಡಿಕೆದಾರ ಡೇವಿಡ್ ಸ್ಯಾಕ್ಸ್ ಸಲಹೆ ನಂತರ ಮಸ್ಕ್ ಕಳೆದ ತಿಂಗಳು ವಿಕಿಪೀಡಿಯಾ ಪ್ರತಿಸ್ಪರ್ಧಿಯ ಮೇಲೆ ಕೆಲಸ ಮಾಡುತ್ತಿರುವುದಾಗಿ ಘೋಷಿಸಿದ್ದರು. ಮಸ್ಕ್ ಈ ಯೋಜನೆಯನ್ನು ರಾಜಕೀಯ ಪರಿಭಾಷೆಯಲ್ಲಿ ವಿವರಿಸಿದ್ದಾರೆ. ವಿಕಿಪೀಡಿಯಾ ಎಚ್ಚರಗೊಂಡಿದೆ ಎಂದು ಟೀಕಿಸಿದ್ದಾರೆ. ದಿ ನ್ಯೂಯಾರ್ಕ್ ಟೈಮ್ಸ್ ಮತ್ತು ಎನ್‌ಪಿಆರ್‌ನಂತಹ ಸುದ್ದಿ ಮಾಧ್ಯಮಗಳನ್ನು ಅದರ ಅನೇಕ ಲೇಖನಗಳಲ್ಲಿ ಮೂಲಗಳಾಗಿ ಉಲ್ಲೇಖಿಸಿದ್ದಕ್ಕಾಗಿ ಟೀಕಿಸಿದ್ದಾರೆ. AI–ರಚಿತ ವಿಶ್ವಕೋಶವು ನಾಗರಿಕತೆಗೆ ಅತ್ಯಂತ ಮುಖ್ಯ ಮತ್ತು ವಿಶ್ವವನ್ನು ಅರ್ಥಮಾಡಿಕೊಳ್ಳುವ ಕಡೆಗೆ ಅಗತ್ಯವಾದ ಹೆಜ್ಜೆಯಾಗಿದೆ ಎಂದು ಮಸ್ಕ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಖಾಸಗಿ ಬಸ್‌ಗೆ ಬೆಂಕಿ: 2 ಸಾವು

ಜೈಪುರ: ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಖಾಸಗಿ ಬಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, 10 ಮಂದಿ ಗಾಯಗೊಂಡಿರುವ ಘಟನೆ ಜೈಪುರದ ಮನೋಹರಪುರ ಪ್ರದೇಶದಲ್ಲಿ ನಡೆದಿದೆ. ಉತ್ತರ ಪ್ರದೇಶದ ಪಿಲಿಭಿತ್‌ನಿಂದ ಮನೋಹರಪುರದ ಇಟ್ಟಿಗೆ ಭಟ್ಟಿಗೆ ಕಾರ್ಮಿಕರನ್ನು ಹೊತ್ತೊಯ್ಯುತ್ತಿತ್ತು.



ಮನೋಹರಪುರದ ಹಳ್ಳಿಯೊಂದರ ಬಳಿಯ ರಸ್ತೆಯಿಂದ ಬಸ್ ಹಾದು ಹೋಗುವಾಗ ಬಸ್‌ನ ಮೇಲ್ಭಾಗದಲ್ಲಿ ಇರಿಸಲಾಗಿದ್ದ ಗ್ಯಾಸ್ ಸಿಲಿಂಡರ್‌ಗಳು ಮತ್ತು ಇತರ ಗೃಹೋಪಯೋಗಿ ವಸ್ತುಗಳು 11,000–ವೋಲ್ಟ್ ಸಾಮರ್ಥ್ಯದ ವಿದ್ಯುತ್ ತಂತಿ ಬಸ್‌ಗೆ ತಗುಲಿ ಭಾರಿ ಬೆಂಕಿ ಹೊತ್ತುಕೊಂಡಿದ್ದು, ನೋಡನೋಡುತ್ತಿದ್ದಂತೆಯೇ ಸುಟ್ಟುಹೋಗಿದೆ. ನಂತರ ಬೆಂಕಿ ನಂದಿಸಲಾಯಿತು. ಗಾಯಾಳುಗಳನ್ನು ಶಹಪುರದ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಗಾಯಾಳುಗಳಲ್ಲಿ 6 ಮಂದಿಯನ್ನು ಸುಟ್ಟ ಗಾಯಗಳೊಂದಿಗೆ ಜೈಪುರದ ಎಸ್‌ಎಂಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಕೆಲವರಿಗೆ ಶಹಪುರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ತೇಜ್‌ಪಾಲ್ ಸಿಂಗ್ ತಿಳಿಸಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿಗೆ ಟ್ರಂಪ್ ಹೆಸರು ನಾಮನಿರ್ದೇಶನ

ವಾಷಿಂಗ್ಟನ್: ಜಪಾನ್‌ನ ನೂತನ ಪ್ರಧಾನಿ ಸನೆ ತಕೈಚಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡುತ್ತಿರುವುದಾಗಿ ತಿಳಿಸಿದ್ದಾರೆ ಎಂದು ಶ್ವೇತಭವನ ತಿಳಿಸಿದೆ.



ಟ್ರಂಪ್ ಅವರನ್ನು ಮೆಚ್ಚಿಸಲು ಬಯಸುವ ವಿದೇಶಿ ನಾಯಕರು ಹೀಗೆ ಮಾಡುವುದು ಸಾಮಾನ್ಯ ಸಂಗತಿಯಾಗಿದೆ. ಇತ್ತೀಚಿನ ತಿಂಗಳುಗಳಲ್ಲಿ ಹಲವರು ಟ್ರಂಪ್ ಅವರ ನಾಮನಿರ್ದೇಶನವನ್ನು ಬೆಂಬಲಿಸಿದ್ದಾರೆ ಮತ್ತು ನಾಮನಿರ್ದೇಶನ ಮಾಡುವುದಾಗಿ ಭರವಸೆ ನೀಡಿದ್ದಾರೆ. ಕಾಂಬೋಡಿಯಾದ ಪ್ರಧಾನಿ ಹನ್ ಮಾನೆಟ್ ಅವರು ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದರು.

ಈ ವರ್ಷ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೊಬೆಲ್ ಶಾಂತಿ ಪ್ರಶಸ್ತಿ ಗೆಲ್ಲಲಿಲ್ಲ. ಆದರೆ, ಗಾಜಾದಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧವನ್ನು ನಿಲ್ಲಿಸಿದ ಕದನ ವಿರಾಮಕ್ಕೆ ಸಹಾಯ ಮಾಡುವ ಮೊದಲೇ ಪ್ರಶಸ್ತಿಯನ್ನು ಯಾರಿಗೆ ನೀಡಬೇಕು ಎಂಬುದರ ಕುರಿತು ಸಮಿತಿಯು ತನ್ನ ನಿರ್ಧಾರವನ್ನು ತೆಗೆದುಕೊಂಡಿತು ಎಂದು ಹೇಳಲಾಗಿದೆ.

ವಿಮಾನದ ಸ್ವಲ್ಪ ದೂರದಲ್ಲೇ ಧಗಧಗನೆ ಉರಿದ ಬಸ್!

ನವದೆಹಲಿ: ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್ 3ರಲ್ಲಿ ಭಾರಿ ಅಗ್ನಿ ಅವಘಡವೊಂದು ನಡೆದಿದೆ. ಏರ್ ಇಂಡಿಯಾ ವಿಮಾನದಿಂದ ಕೆಲವೇ ಮೀಟರ್ ದೂರದಲ್ಲಿ ನಿಂತಿದ್ದ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಧಗ ಧಗನೆ ಉರಿದಿದೆ. SATS ಏರ್‌ಪೋರ್ಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನಿಂದ ನಿರ್ವಹಿಸಲ್ಪಡುವ ಬಸ್ ಬೇ 32ರ ಬಳಿ ನಿಂತಿದ್ದಾಗ ಬೆಂಕಿ ಹೊತ್ತಿಕೊಂಡಿದೆ. ಬೆಂಕಿಯ ಕೆನ್ನಾಲಿಗೆ ವಿಮಾನಕ್ಕೆ ತಾಗಿದ್ದರೆ ದೊಡ್ಡ ಗಂಡಾಂತರ ಎದುರಾಗುತ್ತಿತ್ತು. ಆದರೆ, ಅದೃಷ್ಟವಶಾತ್ ಬೆಂಕಿಯ ಕಿಡಿ ವಿಮಾನಕ್ಕೆ ತಾಗಿಲ್ಲ. ಇದೊಂದು ಕಣ್ತಪ್ಪಿನಿಂದ ಆದ ಘಟನೆಯಾಗಿದ್ದು, ಬಸ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಕೂಡಲೇ ಕಾರ್ಯಪ್ರವೃತ್ತರಾದ ಎಆರ್‌ಎಫ್‌ಎಫ್ ತಂಡ ಕೆಲವೇ ನಿಮಿಷಗಳಲ್ಲಿ ಬೆಂಕಿ ನಂದಿಸಿದೆ. ಘಟನೆಯಲ್ಲಿ ಯಾವುದೇ ಅನಾಹುತ ಆಗಿಲ್ಲ, ಯಾರಿಗೂ ಗಾಯಗಳಾಗಿಲ್ಲ ಎಂದು ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯನ್ನು ನಿರ್ವಹಿಸುವ ದೆಹಲಿ ಇಂಟರ್ನ್ಯಾಷನಲ್ ಏರ್‌ಪೋರ್ಟ್ ಲಿ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.



ಮೈಸೂರು ಮಿತ್ರ ಬುಧವಾರ 29 ಅಕ್ಟೋಬರ್ 2025

ಗುತ್ತಿಗೆದಾರನ ವಿರುದ್ಧ ಕ್ರಮಕ್ಕೆ ಸಂಸದ ಯದುವೀರ್ ಸೂಚನೆ

ಗೋಣಿಕೊಪ್ಪ, ಅ.28–ಪೊನ್ನಂಪೇಟೆ ತಾಲೂಕಿನ ಹೈಸೊಡ್ಲೂರು ಹಾಗೂ ಬೇಗೂರು ಗ್ರಾಮಗಳಲ್ಲಿ ನಡೆಯುತ್ತಿರುವ ಜಲ್ ಜೀವನ್ ಕಾಮಗಾರಿ ಕಳಪೆಯಿಂದ ಕೂಡಿದೆ ಎಂಬ ಗ್ರಾಮಸ್ಥರ ದೂರಿನ ಮೇರೆಗೆ ಸಂಸದ ಯದುವೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂಸದ ಯದುವೀರ್ ಒಡೆಯರ್ ಜಿಲ್ಲಾ ಪಂಚಾಯತ್ ಸಿಇಓ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಹೈಸೊಡ್ಲೂರು ಗ್ರಾಮದಲ್ಲಿ 123 ಮನೆಗಳನ್ನು ಯೋಜನೆ ಅಡಿಯಲ್ಲಿ ಗುರುತಿಸಿ ಕೇವಲ 83 ಮನೆಗಳಿಗೆ ಮಾತ್ರ ಸಂಪರ್ಕಿಸುವ ಕೆಲಸ ಆಗಿದೆ. ಕಳಪೆ ಕಾಮಗಾರಿ ಹಾಗೂ ನಿಧಾನಗತಿಯಲ್ಲಿ ಕಾಮಗಾರಿ ನಡೆಸುತ್ತಿರುವ ಗುತ್ತಿದಾರನ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಈ ಭಾಗದ ಪಂಚಾಯಿತಿ ಆಡಳಿತ ಮಂಡಳಿಯೊಂದಿಗೆ ಅಧಿಕಾರಿಗಳು ಕೈಜೋಡಿಸಿ ಕೆಲಸ ಮಾಡಬೇಕು ಹತ್ತು ದಿನಗಳ ಕಾಲಾವಕಾಶದಲ್ಲಿ ಈಗ ಆಗಿರುವ ಲೋಪಗಳನ್ನು ಸರಿಪಡಿಸಬೇಕು ಎಂದು ನಿರ್ದೇಶನ ನೀಡಿದರು.



ಹೈಸೊಡ್ಲುರು ಹಾಗೂ ಬೇಗೂರು ಗ್ರಾಮಗಳಲ್ಲಿ ನಡೆಯುತ್ತಿರುವ ಜಲ್ ಜೀವನ್ ಕಾಮಗಾರಿಯನ್ನು ಸಂಸದ ಯದುವೀರ್ ಪರಿಶೀಲಿಸಿದರು.

ಜಲ್ ಜೀವನ್ ಕಾಮಗಾರಿ ಪ್ರಗತಿ ಪರಿಶೀಲನೆ ಸಂದರ್ಭ ಜಲ್–ಜೀವನ್ ಮಿಷನ್ ಎಇ ಭಾಸ್ಕರ್ ಹಾಗೂ ಗುತ್ತಿಗೆದಾರನ ಗೈರು ವಿಚಾರವನ್ನು ದಿಶಾ ಸಮಿತಿ ಸದಸ್ಯ ಚೆಪ್ಪುಡೀರ ರಾಕೇಶ್ ತೀವ್ರವಾಗಿ ಖಂಡಿಸಿದರು. ಹಿರಿಯ ಅಧಿಕಾರಿಗಳು ಭೇಟಿ ನೀಡದೆ ಕಿರಿಯ ಅಧಿಕಾರಿಗಳನ್ನು ಸಂಸದರ ಪರಿಶೀಲನೆ ಸಂದರ್ಭ ಕಳುಹಿಸಿ ಸರಿಯಾದ ಮಾಹಿತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ. ದಿಶಾ ಸಭೆಯಲ್ಲಿ ಸಮರ್ಪಕ ಮಾಹಿತಿ ನೀಡುವುದಿಲ್ಲ, ಸ್ಥಳ ಪರಿಶೀಲನೆಗೂ ಅಧಿಕಾರಿಗಳು ಬರುತ್ತಿಲ್ಲ, ಯೋಜನೆಯ ಡಿಪಿಆರ್ ತಯಾರಿಕೆಯಲ್ಲಿ ಲೋಪಗಳು ನಡೆದಿದೆ ಅದನ್ನು ಮುಚ್ಚಿಹಾಕುವ ಪ್ರಯತ್ನದಲ್ಲಿ ಅಧಿಕಾರಿಗಳು ತೊಡಗಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಸಿಎನ್‌ಸಿಯಿಂದ ಕೊಡವ ಜನಜಾಗೃತಿ ಮಾನವ ಸರಪಳಿ



ಸಿಎನ್‌ಸಿ ತೋಡನಾಡ್‌ನ ಶ್ರೀಮಂಗಲದಲ್ಲಿ ನಡೆದ 17ನೇ ಕೊಡವ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾನವ ಸರಪಳಿ ರಚಿಸಲಾಯಿತು.

ಮಡಿಕೇರಿ, ಅ.28– ಕೊಡವರ ಸರ್ವಾಂಗೀಣ ವಿಕಾಸ, ಸಬಲೀಕರಣ ಮತ್ತು ರಕ್ಷಣೆ ದೇಶದ ಪವಿತ್ರ ಸಂವಿಧಾನದಿಂದ ಮಾತ್ರ ಸಾಧ್ಯವೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದಿಸಿದ್ದಾರೆ.

ಸಿಎನ್‌ಸಿ ವತಿಯಿಂದ ಕುರ್ಚಿ ತೋಡನಾಡ್‌ನ ಶ್ರೀಮಂಗಲದಲ್ಲಿ ನಡೆದ 17ನೇ ಕೊಡವ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೇಷ್ಠ ಸಂವಿಧಾನದ ಆಶಯಕ್ಕೆ ಬದ್ಧರಾಗಿ ಕೊಡವರ ಪರವಾಗಿ ನಿರಂತರ ಶಾಂತಿಯುತ ಹೋರಾಟಗಳನ್ನು ರೂಪಿಸುತ್ತಿರುವ ಸಿಎನ್‌ಸಿಯ ಗುರಿ ಮತ್ತು ಹೋರಾಟದ ಬಗ್ಗೆ ವಿಶ್ವಾಸವಿಡುವಂತೆ ಕರೆ ನೀಡಿದರು.

ಜನಜಾಗೃತಿ: ಇಂದಿನವರೆಗೆ ಬಿರುನಾಣಿ, ಟಿ.ಶೆಟ್ಟಿಗೇರಿ, ಕಡಂಗ, ಕಕ್ಕಬ್ಬೆ ಬಾಳೆಲೆ, ಪೊನ್ನಂಪೇಟೆ, ಮಾದಾಪುರ, ಸುಂಟಿಕೊಪ್ಪ, ಸಿದ್ದಾಪುರ, ನಾಪೋಕ್ಲು, ಗೋಣಿಕೊಪ್ಪ, ವಿರಾಜಪೇಟೆ, ಮೂರ್ನಾಡ್, ಚೇರಂಬಾಣೆ, ಚೆಟ್ಟಳ್ಳಿ ಹಾಗೂ ಅಮ್ಮತ್ತಿಯಲ್ಲಿ ಕೊಡವ ಮಾನವ ಸರಪಳಿ ಯಶಸ್ವಿಯಾಗಿ ನಡೆದಿದೆ. 18ನೇ ಕೊಡವ ಜನಜಾಗೃತಿ ಮಾನವ ಸರಪಳಿ ನ.5ರಂದು ಬಿಟ್ಟಂಗಾಲದಲ್ಲಿ ಮತ್ತು 19ನೇ ಮಾನವ ಸರಪಳಿ ನ.10ರ ಬೆಳಗ್ಗೆ 10.30 ಗಂಟೆಗೆ ಅಂಜಿಗೇರಿ ನಾಡ್‌ನ ಹುದಿಕೇರಿಯಲ್ಲಿ ನಡೆಯಲಿದೆ ಎಂದು ಎನ್.ಯು.ನಾಚಪ್ಪ ತಿಳಿಸಿದರು.

ಅಜ್ಜಮಾಡ ಸಾವಿತ್ರಿ, ಅಜ್ಜಮಾಡ ಅಕ್ಕಮ್ಮ, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಮಾಡ ಮೋಹನ್, ಚೊಟ್ಟೆಯಂಡಮಾಡ ಉದಯ, ಅಜ್ಜಿಕುಟ್ಟೀರ ಲೋಕೇಶ್, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶೆರಿನ್, ಇಟ್ಟೀರ ರಾಜು, ಅಪ್ಪೆಂಗಡ ಮಾಲೆ ಪೂಣಚ್ಚ, ಬೊಳ್ಳಜಿರ ಅಶೋಕ್, ಮಾಣಿರ ಸಂಪತ್, ಅಯ್ಯಮಾಡ ಚಿಟ್ಟಿ, ಬೊಳಿಯಂಗಡ ನಿಶಾಂತ್, ಮದ್ರೀರ ವಿಷ್ಣು, ಚಂಗುಲಂಡ ರಾಜಪ್ಪ ಮತ್ತಿತರರು ಪಾಲ್ಗೊಂಡು ಪ್ರತಿಜ್ಞಾವಿಧಿಯೊಂದಿಗೆ ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಯೋಗದಲ್ಲಿ ವಿಶ್ವ ದಾಖಲೆ ಮಾಡಿದ ಮದೆನಾಡಿನ ವಿದ್ಯಾರ್ಥಿನಿ

ಮಡಿಕೇರಿ, ಅ.28– ಮದೆನಾಡಿನ ಬಿಜಿಎಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ, ಯೋಗಪಟು ಕು.ಸಿಂಚನ 'ಗೋಲ್ಡನ್ ಬುಕ್ ಆಫ್ ರೆಕಾರ್ಡ್'ನಲ್ಲಿ 3 ಯೋಗಾಸನಗಳ ಪ್ರದರ್ಶನ ನೀಡಿ ವಿಶ್ವ ದಾಖಲೆ ಬರೆದಿದ್ದಾಳೆ. ಖಂಡಪೀಡಾಸನ, ಧನುರಾಸನ ಹಾಗೂ ಡಿಂಬಾಸನದಲ್ಲಿ ದಾಖಲೆ ನಿರ್ಮಿಸಿದಳು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.



ಯೋಗಪಟು ಸಿಂಚನ ಮಂಗಳವಾರ ಸ್ವಾಮೀಜಿಗಳ ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಖಂಡಪೀಡಾಸನ, ಧನುರಾಸನ ಹಾಗೂ ಡಿಂಬಾಸನ ಯೋಗ ಪ್ರದರ್ಶಿಸುತ್ತಿರುವುದನ್ನು ತದೇಕಚಿತ್ತದಿಂದ ಗಣ್ಯರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು

ಕು. ಸಿಂಚನಾಗೆ ಡಿಂಬಾಸನ ಭಂಗಿಯಲ್ಲಿ 1 ನಿಮಿಷಕ್ಕೆ 10 ಸುತ್ತು ಬರುವಂತೆ ಗುರಿ ನಿಗಧಿ ಮಾಡಲಾಗಿತ್ತು ಆದರೆ, ಸಿಂಚನಾ ನಿಮಿಷಕ್ಕೆ 15 ಸುತ್ತು ಬಂದರೆ, ಖಂಡ ಪೀಡಾಸನ ಭಂಗಿಯಲ್ಲಿ 1 ನಿಮಿಷ ಸಮಸ್ಥಿತಿಯಲ್ಲಿರುವ ಗುರಿ ನಿಗಧಿ ಮಾಡಲಾಗಿತ್ತಾದರೂ, 1.44 ನಿಮಿಷ ಸಮಸ್ಥಿತಿಯಲ್ಲಿರುವ ಮೂಲಕ ಎಲ್ಲರ ಗಮನ ಸೆಳೆದಳು. ಧನುರಾಸನ ಭಂಗಿಯಲ್ಲಿ 1 ನಿಮಿಷಕ್ಕೆ 15 ಸುತ್ತು ನಿಗಧಿ ಮಾಡಿದ್ದರೆ, ಈಕೆ 18 ಬಾರಿ ಸುತ್ತುವ ಮೂಲಕ ಅಂತರ ರಾಷ್ಟ್ರೀಯ ದಾಖಲೆ ನಿರ್ಮಿಸಿದಳು.

ಮುಖ್ಯ ತೀರ್ಪುಗಾರ ಡಾ.ಮನಿಶ್ ವೈಷ್ಣೋಯಿ ಅವರು ಕು. ಸಿಂಚನ ಅವರಿಗೆ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ದಾಖಲೆ ನೀಡಿ ಕಠಿಣ ಪರಿಸ್ಥಿತಿಯಲ್ಲಿ ಯೋಗ ಮಾಡಿ ದಾಖಲೆ ನಿರ್ಮಿಸಿದ್ದಾರೆ ಎಂದು ಪ್ರಶಂಸಿಸಿದರು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಮಾತನಾಡಿ, ಕ್ಲಿಷ್ಟಕರ ಯೋಗಾಸನವನ್ನು ಸಿಂಚನ ಮಾಡಿದ್ದಾರೆ. ಇಂತಹ ಯೋಗಾಸನಕ್ಕೆ ದೀರ್ಘ ಕಾಲದ ಅಭ್ಯಾಸವಿರಬೇಕು. ಗೌರವದಿಂದ ಅಭ್ಯಾಸ ಮಾಡಿದಾಗ ಸಿದ್ದಿ ದೊರೆಯುತ್ತದೆ ಎಂದು ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ ಮಕ್ಕಳ ಕ್ರಿಯಾಶೀಲ ಹಾಗೂ ಸೃಜನಶೀಲ ಚಟುವಟಿಕೆಗೆ ವಿದ್ಯಾರ್ಥಿಗಳ ಶ್ರಮ ಜೊತೆಗೆ, ಪೋಷಕರು ಹಾಗೂ ಗುರುಗಳ ಮಾರ್ಗದರ್ಶನ ಅಗತ್ಯ ಎಂದು ಹೇಳಿದರಲ್ಲದೆ, ವಿದ್ಯಾರ್ಥಿನಿ ಸಿಂಚನ ಅವರ ಯೋಗ ಸಾಧನೆ ಮೆಚ್ಚುವಂತದ್ದು. ಶಿಕ್ಷಣ ಕ್ಷೇತ್ರದಲ್ಲಿ ಬಿಜಿಎಸ್ ಸಂಸ್ಥೆ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ಬಾಲ್ಯದಿಂದಲೇ ಸರಿಯಾದ ಮಾರ್ಗದರ್ಶನ ಮಾಡಿದ್ದಲ್ಲಿ ಭವಿಷ್ಯದಲ್ಲಿ ಉತ್ತಮ ವ್ಯಕ್ತಿಗಳಾಗಿ ಗುರುತಿಸಿಕೊಳ್ಳಲಿದ್ದಾರೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡುವಂತಾಗಬೇಕು ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಸವರಾಜು, ಯೋಗ ಶಿಕ್ಷಕ ಮಹೇಶ್ ಕುಮಾರ್ ಅವರುಗಳು ಮಾತನಾಡಿ, ಸಿಂಚನ ಯೋಗ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡುವಂತಾಗಬೇಕು ಎಂದು ಆಶಿಸಿದರು. ಇದೇ ಸಂದರ್ಭ ಯೋಗಪಟು ಕು.ಸಿಂಚಳ ಅವಳನ್ನು ಗಣ್ಯರು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಯೋಗಪಟು ಸಿಂಚನಳ ತಾಯಿ ರೇಣುಕಾ, ತಂದೆ ಕೀರ್ತಿ ಕುಮಾರ್, ಬಿಜಿಎಸ್ ಶಾಲೆಯ ಆಡಳಿತಾಧಿಕಾರಿ ಸುಧಾಕರ್, ಶಾಲಾ ಶಿಕ್ಷಕ ವೃಂದ, ಮಕ್ಕಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಅಧಿಕಾರ ಮುಂದುವರಿಕೆಗೆ ಕೋರ್ಟ್ ಮೊರೆಹೊಕ್ಕಿರುವುದು ಜನವಿರೋಧಿ ಕ್ರಮ

ವಿರಾಜಪೇಟೆ, ಅ.28–ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೆ ಏರಿಸಿ ಪುರಸಭೆಯಾಗಿ ಎರಡು ವರ್ಷಗಳು ಕಳೆದು ಈಗ ಒಟ್ಟು ಏಳುವರೆ ವರ್ಷಗಳ ನಂತರ ಅವಧಿ ಮುಗಿದಿದ್ದು, ಮುಂದೆ ನೂತನ ಸದಸ್ಯರಿಗೆ ಚುನಾವಣೆ ಆಗಬೇಕಾಗಿದೆ. ಆದರು ತಾವೆ ಮುಂದುವರೆಯ ಬೇಕೆಂದು ನ್ಯಾಯಾಲಯದ ಮೆಟ್ಟಿಲೇರಿರುವುದು ಪ್ರಜಾಪ್ರಭುತ್ವದ ಜನವಿರೋಧಿ ಕ್ರಮ ನಾಗರಿಕ ಸಮಿತಿ ಸಂಚಾಲಕ ಡಾ,ದುರ್ಗಾ ಪ್ರಸಾದ್ ಕಟಕಿಯಾಡಿದ್ದಾರೆ.

ನಿಯಮ ಪ್ರಕಾರ ಪುರಸಭೆಗೆ ಆಯ್ಕೆಯಾದ ಸದಸ್ಯರ ಅವಧಿ ಐದು ವರ್ಷಗಳು ಪ್ರಜಾಪ್ರಭುತ್ವದ ಮೌಲ್ಯಗಳ ಪ್ರಕಾರ ಮತ್ತೆ ಸದಸ್ಯರಾಗಿ ಮುಂದುವರೆಯಲು ಚುನಾವಣೆ ನಡೆಯಬೇಕು ಆದರೆ ಈಗ ಏಳು ವರ್ಷಗಳು ಅಧಿಕಾರದ ಸವಿಯನ್ನು ಅನುಭವಿಸಿ ಯಾವುದೇ ಜನಪರ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಸಾಕಷ್ಟು ಅನುದಾನ ಬಂದಿದೆ ಎಂದು ಹೇಳುತ್ತಾ ಪುರಸಭೆ ಕಛೇರಿಯನ್ನು ವ್ಯಾಪಾರದ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ ಎಂದು ದೂರಿದರು.

ವಕೀಲ ಕೆ.ವಿ.ಸುನೀಲ್ ಮಾತನಾಡಿ, ಪಟ್ಟಣ ಪಂಚಾಯಿತಿಯಾಗಿದ್ದಾಗ ಸದಸ್ಯರು ಚುನಾವಣೆಯಲ್ಲಿ ಆಯ್ಕೆಗೊಂಡಿದ್ದರು ಆದರೆ ನಂತರ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಿ ಪುರಸಭೆಯಾದ ನಂತರ ಮತ್ತೆ ಚುನಾವಣೆ ನಡೆದು ಸದಸ್ಯರ ಆಯ್ಕೆ ಆಗಬೇಕಾಗಿತ್ತು ಈಗಾಗಲೇ ಏಳು ವರ್ಷ ಕಳೆದು ಸದಸ್ಯರ ಅವಧಿ ಮುಗಿದಿರುವುದರಿಂದ ಸರಕಾರ ಇತ್ತ ಗಮನ ಹರಿಸಿ ಪುರಸಭೆಯ ಚುನಾವಣೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ನಾಗರಿಕ ಸಮಿತಿಯ ಸಹ ಸಂಚಾಲಕರಾದ ಮಳೇಟಿರ ಕಾಳಯ್ಯ ಮಾತನಾಡಿ, ಶಾಸಕರು ಈ ಕ್ಷೇತ್ರಕ್ಕೆ ಸಾಕಷ್ಟು ಅನುದಾನವನ್ನು ತಂದಿದ್ದಾರೆ ಎಂದು ಹೇಳುವ ಸದಸ್ಯರು ಈ ಅನುದಾನ ಎಲ್ಲಿ ಹೋಗಿದೆ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆಗಳನ್ನು ನೋಡಿದರೆ ವಾಹನ ಚಾಲಕರು ಹರಸಾಹಸ ಪಡುವಂತಾಗಿದೆ. ಎಂದು ದೂರಿದರು. ಅಬ್ದುಲ್ ರೆಹಮನ್ ಮಾತನಾಡಿದರು, ಸಮಿತಿಯ ಎನ್.ಕೆ.ಶರೀಫ್, ಟಿ.ದೇವಯ್ಯ ಉಪಸ್ಥಿತರಿದ್ದರು.

ಎಎಸ್ಐ ಉದಯ ಕುಮಾರ್ ಹನಿಯಡ್ಕ ನಿಧನ



ನಾಪೋಕ್ಲು, ಅ.28– ಬೆಂಗಳೂರಿನಲ್ಲಿ ಸಹಾಯಕ ಸಬ್ ಇನ್ಸ್‌ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂಪಾಜೆಯ ಉದಯ ಕುಮಾರ್ ಹನಿಯಡ್ಕ (56) ನಿಧನ ಹೊಂದಿದ್ದಾರೆ.

ಬೆಂಗಳೂರಿನ ಟ್ರಾಫಿಕ್ ವಿಭಾಗದಲ್ಲಿ ಸಹಾಯಕ ಇನ್ಸ್‌ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಉದಯ ಹನಿಯಡ್ಕ ಅಲ್ಪಕಾಲದ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ ನಿಧನರಾಗಿದ್ದಾರೆ. ಮೃತರು ಹನಿಯಡ್ಕ ಕುಟುಂಬದ ದಿವಂಗತ ಆನಂದ ಗೌಡ ಹಾಗೂ ರುಕ್ಕಿಣಿ ದಂಪತಿಗಳ ಪುತ್ರರಾಗಿದ್ದು, 30 ವರ್ಷದಿಂದ ಬೆಂಗಳೂರಿನಲ್ಲಿ ಸಹಾಯಕ ಸಬ್ ಇನ್ಸ್‌ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮೃತರು ಪತ್ನಿ, ರುಕ್ಮಿಣಿ ಮಕ್ಕಳಾದ ಡಿಂಪಲ್, ದರ್ಶನ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಸಂಪಾಜೆ ಗ್ರಾಮದ ಕೈಪಡ್ಕದಲ್ಲಿ ಮಂಗಳವಾರ ನೆರವೇರಿಸಲಾಯಿತು.

ರಾಷ್ಟ್ರಮಟ್ಟದ ಕೊಡವ ನಮ್ಮೆಯ ಸಾಂಸ್ಕೃತಿಕ ಸ್ಪರ್ಧೆ

ವಿರಾಜಪೇಟೆ, ಅ.28– ರಾಷ್ಟ್ರಮಟ್ಟದ ಕೊಡವ ನಮ್ಮೆಯ ಸಾಂಸ್ಕೃತಿಕ ಸ್ಪರ್ಧೆಯನ್ನು ನ. 9ರ ಭಾನುವಾರ 9.30 ಗಂಟೆಗೆ ನಡೆಸಲಾಗುವುದು ಎಂದು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಾಳಿಮಾಡ ಮೋಟಯ್ಯ ಹೇಳಿದ್ದಾರೆ. ಸ್ಪರ್ಧೆಗಳು ಕೊಡವ ಸಮಾಜಗಳ ನಡುವೆ ನಡೆಯಲಿರುವುದರಿಂದ ಪ್ರತಿ ಸ್ಪರ್ಧೆಗೆ ಪ್ರತಿ ಕೊಡವ ಸಮಾಜದಿಂದ ಒಂದೊಂದು ತಂಡ ಮಾತ್ರ ಭಾಗವಹಿ ಸಬಹುದಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಮಾಜಗಳು ತಮ್ಮ ತಂಡದ ವಿವರಗಳನ್ನು ಅ.30ರ ಒಳಗೆ ಪೊನ್ನಂಪೇಟೆ ಕೊಡವ ಸಮಾಜದ ಕಚೇರಿಗೆ ಕಳುಹಿಸಬೇಕು ತಪ್ಪಿದಲ್ಲಿ ಅವರಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

ಹೆಚ್ಚಿನ ವಿವರಗಳಿಗೆ 9845308228/ 9483836115 ಈ ದೂರವಾಣಿ ಸಂಖ್ಯೆ ಯನ್ನು ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕ ಹಂಚೇಟ್ಟಿರ ಮನು ಮುದ್ದಪ್ಪ, ನಿರ್ದೇಶಕ ಬಾಚಿರ ಜಗದೀಶ್ ಉಪಸ್ಥಿತರಿದ್ದರು.

ಮಕ್ಕಳಿಗೆ ಶಿಕ್ಷಣ ಕಲ್ಪಿಸಿಕೊಟ್ಟವರು ರಾಜೇಂದ್ರ ಸ್ವಾಮೀಜಿ: ಜಗದೀಶ ಶೆಟ್ಟರ್

ಚಾಮರಾಜನಗರ, ಅ.28–ಸುತ್ತೂರು ಮಠಾಧೀಶರಾಗಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಮಕ್ಕಳಿಗೆ ಶಿಕ್ಷಣ ಮುಖ್ಯ ಎಂದು ಅರಿತು, ಶಿಕ್ಷಣ ಸಂಸ್ಥೆಗಳನ್ನು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆಸಿದರು ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಸ್ಮರಿಸಿದರು.

ನಗರದ ಜೆಎಸ್‌ಎಸ್ ಶಿಕ್ಷಣಸಂಸ್ಥೆ ಸಮುಚ್ಚಯದ ಮೈದಾನದಲ್ಲಿ ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳ ಸಮೂಹ, ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮಂಗಳವಾರ ನಡೆದ ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಾವಿರಾರು ವರ್ಷಗಳ ಇತಿಹಾಸವಿರುವ ಸುತ್ತೂರು ಮಠ ಕೇವಲ ಧಾರ್ಮಿಕವಾಗಿ ಅಲ್ಲ. ಶೈಕ್ಷಣಿಕವಾಗಿ ದೊಡ್ಡಕ್ರಾಂತಿ ಮಾಡಿದೆ. ಎಂದರು.

ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಲಕ್ಷಾಂತರ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಸಂಸ್ಥೆ ವಿದ್ಯಾದಾನ ಮಾಡಿದೆ ಎಂದು ಹೇಳಿದರು.

ಹಿರಿಯ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ನುಡಿನಮನ ಸಲ್ಲಿಸಿ ಸ್ವಾತಂತ್ರ್ಯೋತ್ಸವದಲ್ಲಿ 100ಕ್ಕೆ ಶೇ10ರಷ್ಟು ವಿದ್ಯಾವಂತರಿರಲಿಲ್ಲ. ಒಂದು ವೇಳೆ ಸ್ವಾತಂತ್ರ್ಯ ಬಂದರೂ ದೇಶವನ್ನು ಮುನ್ನಡೆಸಲು ಅಕ್ಷರಸ್ಥರು ಬೇಕು ಎಂದು ಮನಗಂಡ ಲಿಂಗಾಯತ ವೀರಶೈವ ಮಠಗಳು ನೇರವಾಗಿ ತಮ್ಮ ಪೀಠಗಳಿಂದ ಇಳಿದು ಬಂದು ಶಿಕ್ಷಣ ಸಂಸ್ಥೆಗಳನ್ನು ತೆರೆದರು ಎಂದರು. ಇಂದು ತಮ್ಮದಲ್ಲದ ಬೇರೆ ಯಾವುದೋ ಕಾರಣಕ್ಕೆ ಜನರು ಕೆರಳುತ್ತಿದ್ದಾರೆ. ಯಾರೋ ಗೆದ್ದರೆ ನಾವು ಎದೆತಟ್ಟಿ ಕೊಳ್ಳುತ್ತೇವೆ. ಇಂಥ ಸಂದರ್ಭದಲ್ಲಿ ಪೂಜ್ಯರು ಮಹಾತ್ಮರ ಸಂದೇಶಗಳು ಮಾರ್ಗ ದರ್ಶಕವಾಗಿದೆ.



ಚಾಮರಾಜನಗರದಲ್ಲಿ ನಡೆದ ಸುತ್ತೂರು ಶ್ರೀ ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಉದ್ಘಾಟಿಸಿದರು. ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಪುಟ್ಟರಂಗಶೆಟ್ಟಿ ಇದ್ದರು.

ಲೌಕಿಕದಲ್ಲಿ ಏನೇ ನಡೆದರೂ ಯಾರು ವಿಚಲಿತರಾಗುವುದಿಲ್ಲವೋ ಅವರೇ ಸಂತರು ಎಂದು ಕೃಷ್ಣೇಗೌಡ ಹೇಳಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ರಾಜೇಂದ್ರ ಶ್ರೀಗಳ ದೂರದೃಷ್ಟಿಯಿಂದ 1954ರಲ್ಲಿ ಆರಂಭವಾದ ಜೆಎಸ್‌ಎಸ್ ಶಿಕ್ಷಣಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು, ಬಡವರು ಶಿಕ್ಷಣ ಪಡೆಯಲು ವರದಾನವಾಗಿದೆ. ನಗರದಲ್ಲಿ ಮೊಟ್ಟ ಮೊದಲು ವಿದ್ಯಾರ್ಥಿ ನಿಲಯ ಪ್ರಾರಂಭಿಸಿದ ಕೀರ್ತಿ ರಾಜೇಂದ್ರ ಶ್ರೀಗಳಿಗೆ ಸಲ್ಲುತ್ತದೆ. ಈ ಭಾಗದ ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಸಂಬಂಧ ಸರ್ಕಾರದ ಗಮನಸೆಳೆದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಕೊಡುಗೆ ಅಪಾರ ಎಂದರು. ಸಂಸದ ಸುನಿಲ್ ಬೋಸ್, ಶಾಸಕ ಎಚ್.ಎಂ.ಗಣೇಶಪ್ರಸಾದ್ ಮಾತನಾಡಿದರು. ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

> ನಾನು ಮುಖ್ಯಮಂತ್ರಿಯಾಗಿದ್ದಾಗ, ಚಾಮರಾಜನಗರಕ್ಕೆ ಹೋದರೆ ಅಧಿಕಾರ ಹೋಗುತ್ತದೆ. ಅಲ್ಲಿಗೆ ಹೋಗ ಬ್ಯಾಡ್ರಿ ಎಂದು ಕೆಲವರು ಹೇಳಿದರು. ನಾನು ಬಸವಣ್ಣನವರ ಅನುಯಾಯಿ. ಮೂಢನಂಬಿಕೆ ನಂಬಬಾರದು ಎಂದು ಅವರು ಹೇಳಿದ್ದಾರೆ. ಅದು ನಿಜ. ಸಿಎಂ ಆಗಿದ್ದಾಗ ಮೂರು ಬಾರಿ ಚಾ.ನಗರಕ್ಕೆ ಬಂದು ಹೋದೆ. ನನಗೆ 10 ತಿಂಗಳ ಅಧಿಕಾರಾವಧಿ ಇತ್ತು. ಅದನ್ನು ಪೂರ್ತಿ ಮಾಡಿದ್ದಲ್ಲದೆ ನಾನು ಮುಖ್ಯಮಂತ್ರಿಯಾಗಿ ದ್ದಾಗ ಇದೇ ಸ್ಥಳದಲ್ಲಿ ಜೆಎಸ್‌ಎಸ್ ಸಂಸ್ಥೆಯ ಆಸ್ಪತ್ರೆಯನ್ನು ಉದ್ಘಾಟಿಸಿದ್ದೆ ಎಂದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್. ವಿ. ಚಂದ್ರು, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಸದಸ್ಯೆ ಕುಮುದಾ, ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ. ಸ್ವಾಮಿ, ಮಹಿಳಾ ಕಾಲೇಜು ಪ್ರಾಂಶುಪಾಲ ಡಾ. ಎನ್. ಮಹದೇವಸ್ವಾಮಿ, ಬಿಎಡ್ ಕಾಲೇಜು ಪ್ರಾಂಶುಪಾಲ ಬಸವಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಯಳಂದೂರು: ರಕ್ಷಣಾ ವೇದಿಕೆ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ



ಯಳಂದೂರಿನಲ್ಲಿ ಪ್ರವೀಣ್ ಶೆಟ್ಟಿ ಬಣದ ಕರವೇ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ನಡೆಯಿತು.

ಚಾಮರಾಜನಗರ, ಅ.28– ಡಾ.ಬಿ ಆರ್ ಅಂಬೇಡ್ಕರ್ ಭವನದಲ್ಲಿ ಪ್ರವೀಣ್ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಯಳಂದೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ನೂತನ ಕರವೇ ಜಿಲ್ಲಾ ಉಪಾಧ್ಯಕ್ಷರಾಗಿ ವೈ ಕೆ ಮೋಳೆ ವಿ ನಾಗರಾಜುರವರನ್ನು, ದೃಶ್ಯ ಮಾಧ್ಯಮ ಉಪಾಧ್ಯಕ್ಷರಾಗಿ ಗುಂಬಳ್ಳಿ ಲೋಕೇಶ್‌ರವರನ್ನು ನೇಮಕ ಮಾಡಿದ್ದಾರೆ.

ಮೈಸೂರು ಹಾಗೂ ಚಾಮರಾಜನಗರ ಕರವೇ ಜಿಲ್ಲಾ ಅಧ್ಯಕ್ಷ ಆರ್. ಮೋಹನ್ ರವರು ನೇಮಕಾತಿ ಪ್ರತಿಯನ್ನು ವಿತರಣೆ ಮಾಡಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದವರು ನೂತನ ನೇಮಕವಾದ ವಿ ನಾಗರಾಜು ಹಾಗೂ ಲೋಕೇಶ್‌ರವರ ಹಲವು ವರ್ಷಗಳ ನಿಷ್ಕಲ್ಮಶ ನಾಡಪ್ರೇಮ ನಡೆನುಡಿ ಹಾಗೂ ಕೆಚ್ಚೆದೆಯ ಯಶಸ್ವಿ ಹೋರಾಟಗಳು ಮತ್ತು ಜಿಲ್ಲೆಯ ಕಾರ್ಯಕರ್ತರ ಒತ್ತಾಯದ ಮೇರೆಗೆ ಪ್ರಾಮಾಣಿಕ ಹೋರಾಟ ನಾಡಪ್ರೇಮ ಹಾಗೂ ಕನ್ನಡದ ಪರ ಕಾಳಜಿಯನ್ನು ಗೌರವಿಸಿ ಜಿಲ್ಲಾ ಉಪಾಧ್ಯಕ್ಷರನ್ನಾಗಿ ಹಾಗೂ ಜಿಲ್ಲೆಯ ಪತ್ರಿಕೆ ಹಾಗೂ ದೃಶ್ಯ ಮಾಧ್ಯಮಕ್ಕೆ ನೇಮಿಸಲಾಗಿದೆ ಎಂದು ತಿಳಿಸಿದರು.

ನಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ ಮಾತನಾಡಿ ನೂತನ ಪದಾಧಿಕಾರಿಗಳು ಪ್ರಾಮಾಣಿಕ ಹೋರಾಟ ಹಾಗೂ ನಾಡ ಅಭಿಮಾನ ಎತ್ತಿ ಹಿಡಿಯುವುದರೊಂದಿಗೆ ರೈತರ ಕಾರ್ಮಿಕರ ಮಹಿಳೆಯರ ವಿದ್ಯಾರ್ಥಿಗಳ ಹಾಗೂ ನೊಂದವರ ಸಮಸ್ಯೆಗಳಿಗೆ ಸ್ಪಂದಿಸುತ್ತ ಅವರ ಸೇವೆಯನ್ನು ಮುಂದುವರೆಸಿ ತಾಯಿ ಭುವನೇಶ್ವರಿ ಸಕಲ ಶಕ್ತಿಯನ್ನು ನೀಡಲಿ ಎಂದು ಶುಭ ಹಾರೈಸಿದರು.

ತಾಲೂಕು ಅಧ್ಯಕ್ಷ ಕೆಂಪರಾಜು, ಗೌರವ ಅಧ್ಯಕ್ಷ ವೈ ಬಿ ಮಹೇಶ್, ಪದಾಧಿಕಾರಿಗಳಾದ ಬುದುಂಬಳ್ಳಿ ಗಿರೀಶ್, ಬಳೇಪೇಟೆ ಸ್ವಾಮಿ, ಗೂಳಿಪುರ ಮಣಿ, ಬಳೇಪೇಟೆ ವರದರಾಜು, ದೊರೆ ಸ್ವಾಮಿ, ಮದ್ದೂರು ರಂಗಸ್ವಾಮಿ, ಪಿ ಮಾದೇಶ್, ದೊಡ್ಡರಾಜು, ಮನು ನಿಂಗರಾಜು, ವಿ ರಾಜು ಹಾಗೂ ಸಂಘಟಕರು ಹಾಜರಿದ್ದರು

ಅ.31ಕ್ಕೆ ಎಪಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಚಾಮರಾಜನಗರ, ಅ. 28–ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸುವ ಸಂಬಂಧ ಅ. 31 ರ ಬೆಳಿಗ್ಗೆ 10 ಗಂಟೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಭಾಂಗಣದಲ್ಲಿ ಸದಸ್ಯರ ಸಭೆ ಕರೆಯಲಾಗಿದೆ.

ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಬಹುದು. ಮಧ್ಯಾಹ್ನ 1.30 ಗಂಟೆಗೆ ನಾಮಪತ್ರಗಳ ಪರಿಶೀಲನೆ ಕಾರ್ಯ ನಡೆಯಲಿದೆ. ಮಧ್ಯಾಹ್ನ 1.30 ರಿಂದ 2 ಗಂಟೆಯವರೆಗೆ ನಾಮಪತ್ರ ವಾಪಸ್ಸು ಪಡೆಯಬಹುದಾಗಿದೆ. ಅವಶ್ಯವಿದ್ದಲ್ಲಿ ಮಧ್ಯಾಹ್ನ 2.15 ಗಂಟೆಗೆ ಚುನಾವಣೆ ನಡೆಯಲಿದೆ ಎಂದು ತಹಶೀಲ್ದಾರ್ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಚುನಾವಣಾ ಅಧಿಕಾರಿ ಗಿರಿಜಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಎಸ್‌ಟಿ ಕಡಿತ ಲಾಭದ ಬಗ್ಗೆ ಜನತೆಗೆ ಮನವರಿಕೆ ಮಾಡಿ

ಗುಂಡ್ಲುಪೇಟೆ, ಅ.28 (ಸೋಮ್.ಜಿ)– ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನತೆಯ ಅನುಕೂಲಕ್ಕೆ ಕೇಂದ್ರ ಸರ್ಕಾರ ಜಿಎಸ್‌ಟಿ ಕಡಿತ ಮಾಡಿದ್ದ ರಿಂದ ಆಗುತ್ತಿರುವ ಲಾಭದ ಬಗ್ಗೆ ಜನತೆಗೆ ಮನವರಿಕೆ ಮಾಡಿಕೊಡಬೇಕಾಗಿದೆ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ವಿಶ್ವನಾಥ ಭಟ್ ಹೇಳಿದರು.



ಜಿಎಸ್‌ಟಿ ಕಾರ್ಯಾಗಾರದಲ್ಲಿ ವಿಶ್ವನಾಥ ಭಟ್ ಮಾತನಾಡುತ್ತಿರುವುದು.

ಬಿಜೆಪಿ ವತಿಯಿಂದ ಮಂಗಳವಾರ ಆಯೋಜಿಸಿದ್ದ ಜಿಎಸ್‌ಟಿ ಕಾರ್ಯಾಗಾರದಲ್ಲಿ ಮಾತನಾಡಿ, ಶೇ 18 ಇದ್ದ ಜಿಎಸ್‌ಟಿ ಯನ್ನು 12ಕ್ಕೆ ಇಳಿಸಿದೆ. ಇದು ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯವಾಗಿದ್ದು ಕಾಂಗ್ರೆಸ್ ಅವಧಿಯಲ್ಲಿ ನಿರೀಕ್ಷೆಯನ್ನು ಮಾಡುವಂತಿರಲಿಲ್ಲ. ಜಿಎಸ್‌ಟಿ ಕಡಿತದ ನೇರ ಪರಿಣಾಮ ಗ್ರಾಹಕರು ಮತ್ತು ರೈತರಿಗೆ ದೊರಕಿದೆ. ಜನತೆಯ ದಿನಬಳಕೆ ವಸ್ತುಗಳು, ಬೈಕ್ ಕಾರು, ಗೃಹಬಳಕೆಯ ವಸ್ತುಗಳ ಬೆಲೆ ತುಂಬಾ ಕಡಿಮೆ ಯಾಗಿದೆ. ಈ ಬಗ್ಗೆ ಬಿಜೆಪಿ ಕಾರ್ಯಕರ್ತರು ಮನೆ ಮನೆಗಳಿಗೆ ಹೋಗಿ ತಿಳಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರಮೋದಿಯವರ ಕೊಡುಗೆಗಳ ಬಗ್ಗೆ ಮನವರಿಕೆ ಮಾಡಬೇಕು ಎಂದು ಹೇಳಿದರು.

ಮಾಜಿ ಶಾಸಕ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್, ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಾಜಿ ಅಧ್ಯಕ್ಷ ಎನ್.ಮಲ್ಲೇಶ್, ಪ್ರಧಾನ ಕಾರ್ಯದರ್ಶಿ ಸುನಿಲ್ ಮೂಡ್ನಾಕ್ಲು, ಪುರಸಭೆ ಸದಸ್ಯ ನಾಗೇಶ್, ಮುಖಂಡರಾದ ನವೀನ್ ಮೌರ್ಯ, ಬಾಲರಾಜು ಮತ್ತು ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇದ್ದರು. ಪಟ್ಟಣದ ಸಿಎಂಎಸ್ ಕಲಾ ಮಂದಿರದಲ್ಲಿ ಆಯೋಜಿಸಿದ್ದ ಜಿಎಸ್‌ಟಿ ಕಾರ್ಯಾಗಾರದಲ್ಲಿ ವಿಶ್ವನಾಥ ಭಟ್ ಮಾತನಾಡಿದರು. ಸಿ.ಎಸ್. ನಿರಂಜನ ಕುಮಾರ್, ಸಿ.ಮಹದೇವ ಪ್ರಸಾದ್, ಎನ್.ಮಲ್ಲೇಶ್ ಇದ್ದರು.

ಅ.31, ಯಳಂದೂರಿನಲ್ಲಿ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮ

ಚಾಮರಾಜನಗರ, ಅ.28– ದೇಶದಲ್ಲಿ ಸಾಂವಿಧಾನಿಕ ಮೌಲ್ಯ ಬಲಪಡಿಸುವ ನಿಟ್ಟಿನಲ್ಲಿ ಕೆಪಿಸಿಸಿ ಓಬಿಸಿ ವಿಭಾಗದ ವತಿಯಿಂದ ಅ.31 ರಂದು ಯಳಂದೂರಿನಲ್ಲಿ ವಾಯ್ಸ್ ಆಫ್ ಒಬಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಆರ್.ಚೇತನ್ ಕುಮಾರ್ ಹೇಳಿದರು.

ಅಂದು ಬೆಳಗ್ಗೆ 11 ಗಂಟೆಗೆ ಯಳಂದೂರು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ರಾಜ್ಯ ಕಾರ್ಯದರ್ಶಿ ನಿಶ್ಚಿತ್, ರಾಜ್ಯ ಉಪಾಧ್ಯಕ್ಷ ವಿನೋದ್ ರಾಜ್ ಸೇರಿದಂತೆ ಇತರೆ ಪ್ರಮುಖ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪಕ್ಷದ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಜಿ.ಪಂ. ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ ಮಾತನಾಡಿ, ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮವು ಹಿಂದುಳಿದ ವರ್ಗಗಳ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸ್ಥಾನಮಾನಗಳನ್ನು ಗುರುಸುವ ನಿಟ್ಟಿನಲ್ಲಿ ಅನುಕೂಲವಾಗಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಓಬಿಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯ ದರ್ಶಿ ನಾಗರಾಜು ಉಪ್ಪಾರ್, ತಾಲೂಕು ಅಧ್ಯಕ್ಷ ರಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಮಾರ ಸ್ವಾಮಿ ಹಾಜರಿದ್ದರು.

ಅದ್ದೂರಿಯಾಗಿ ಕನಕದಾಸರ ಜಯಂತಿ ಆಚರಿಸಲು ನಿರ್ಧಾರ

ಚಾಮರಾಜನಗರ, ಅ. 28– ಭಕ್ತ ಶ್ರೀ ಕನಕದಾಸರ ಜಯಂತಿ ಆಚರಣೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ನ. 8ರಂದು ನಗರದಲ್ಲಿ ನಡೆಸಲು ತೀರ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಎಡಿಸಿ ಟಿ. ಜವರೇಗೌಡ ಅಧ್ಯಕ್ಷತೆಯಲ್ಲಿ ವಿವಿಧ ಸಮಾಜ, ಸಂಘಟನೆಗಳ ಮುಖಂಡರು, ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಕನಕದಾಸರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಎಡಿಸಿ ಟಿ. ಜವರೇಗೌಡ ಮಾತನಾಡಿ, ಕನಕದಾಸರ ಜಯಂತಿ ಆಚರಣೆ ಅಂಗವಾಗಿ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ. ಶಿಷ್ಟಾಚಾರ ಅನುಸಾರ ಆಹ್ವಾನ ಪತ್ರಿಕೆಯನ್ನು ಮುದ್ರಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಕನಕದಾಸರ ಬದುಕು, ಸಾಧನೆ ವಿಚಾರಧಾರೆಗಳ ಕುರಿತು ಮಾತನಾಡಲು ಮುಖ್ಯ ಭಾಷಣಕಾರರನ್ನು ಆಹ್ವಾನಿಸಬೇಕಿದ್ದು, ಈ ಸಂಬಂಧ ಮುಖಂಡರು ನೀಡುವ ಸಲಹೆಗಳನ್ನು ಪರಿಗಣಿಸಲಾಗುತ್ತದೆ ಎಂದರು. ಮುಖಂಡರಾದ ಆರ್. ಉಮೇಶ್, ಸಿ.ಎನ್. ಬಾಲರಾಜು, ಬಿ. ಶಿವಲಿಂಗೇಗೌಡ, ಬಿ. ಮಹದೇವಸ್ವಾಮಿ, ಬೀರೇಗೌಡ, ಗೋವಿಂದ, ಬ್ಯಾಡಮೂಡ್ಲು ಬಸವಣ್ಣ, ಎಂ.ಸಿ. ರಾಜು, ಕೆ.ಎಸ್. ರೇವಣ್ಣ, ಡಿ. ಮಂಜು, ಆರ್. ಶಿವಣ್ಣ, ಮಹದೇವಸ್ವಾಮಿ, ಮಾದಾಪುರ ರವಿಕುಮಾರ್, ಕೆ.ಆರ್. ನಾರಾಯಣ ಇತರರಿದ್ದರು.

ಇಂದು ರಫೇಲ್‌ನಲ್ಲಿ ಹಾರಲಿದ್ದಾರೆ ರಾಷ್ಟ್ರಪತಿ ದ್ರೌಪದಿ ಮುರ್ಮು

ರಫೇಲ್ ಏರಲಿರುವ ಮೊದಲ ರಾಷ್ಟ್ರಪತಿ


ಸಂಗ್ರಹ ಚಿತ್ರ

ಚಂಡೀಗಢ: ಭಾರತೀಯ ಸಶಸ್ತ್ರ ಪಡೆಗಳ ಸುಪ್ರೀಂ ಕಮಾಂಡರ್ ಆಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ (ಅ.29) ರಫೇಲ್ ಫೈಟರ್ ಜೆಟ್‌ನಲ್ಲಿ ಹಾರಾಟ ನಡೆಸಲಿದ್ದಾರೆ.

67 ವರ್ಷದ ದ್ರೌಪದಿ ಮುರ್ಮು ಬುಧವಾರ (ಅ.29) ಹರಿಯಾಣದ ಅಂಬಾಲಾ ಏರ್‌ಬೇಸ್‌ಗೆ ತೆರಳಿ ಅಲ್ಲಿ ರಫೇಲ್ ಫೈಟರ್ ಜೆಟ್‌ನಲ್ಲಿ ಹಾರಾಟ ನಡೆಸಲಿದ್ದಾರೆ. ಈ ಮೂಲಕ ಮೊದಲ ಬಾರಿಗೆ ರಫೇಲ್ ಏರಿದ ರಾಷ್ಟ್ರಪತಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಈ ಮೊದಲು 2023ರ ಏಪ್ರಿಲ್ 8ರಂದು ಅಸ್ಸಾಂನ ತೇಜ್‌ಪುರ ಏರ್‌ಬೇಸ್‌ನಲ್ಲಿ ಸುಖೋಯ್ –30 ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದರು. ಇದಕ್ಕೂ ಮುನ್ನ ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀಮತಿ ಪ್ರತಿಭಾ ಪಾಟೀಲ್ ಮತ್ತು ಅಬ್ದುಲ್ ಕಲಾಂ ಅಬ್ದುಲ್ ಅವರು ಸುಖೋಯ್–30 ಫೈಟರ್ ಜೆಟ್‌ಗಳಲ್ಲಿ ಹಾರಾಟ ನಡೆಸಿದ್ದರು.

ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿವಿಯಲ್ಲಿ ವಿವಿಧ ಪಂದ್ಯಾವಳಿ



ಮೈಸೂರು, ಅ.28(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮೈಸೂರು ನಗರ ಅಂತರ ಕಾಲೇಜು ವೇಟ್‌ಲಿಫ್ಟಿಂಗ್, ಟೆನಿಸ್ ಮತ್ತು ಬಾಡಿಬಿಲ್ಡಿಂಗ್ ಪಂದ್ಯಾವಳಿ ನಡೆಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಇಂಜಿನಿಯರಿಂಗ್ ವಿಭಾಗದ ನಿರ್ದೇಶಕ ಬಿ.ಕೆ.ಸುರೇಶ್ ಬಾಬು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕಾಲೇಜು ವಿದ್ಯಾರ್ಥಿಗಳಲ್ಲಿ ಆರೋಗ್ಯ ಕಾಳಜಿ, ಫಿಟ್‌ನೆಸ್ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಉತ್ತೇಜಿಸಲು ಅಂತರ ಕಾಲೇಜು ಕ್ರೀಡಾಕೂಟ ಆಯೋಜನೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ದೈಹಿಕ ಸದೃಢತೆ ಮತ್ತು ಮಾನಸಿಕ ಆರೋಗ್ಯ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಪ್ರಾಂಶುಪಾಲ ಡಾ.ಸಿ.ನಟರಾಜು, ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಪ್ರೊ.ಎಂ.ಎಸ್.ಸುನೀಲ್ ಕುಮಾರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ರೇವಣ್ಣ, ಸಂಚಾಲಕರಾದ ಆಂಟನಿ ಮೋಸೆಸ್, ಕೃತ್ತಿಕಾ ಭಟ್ ಮತ್ತಿತರರಿದ್ದರು.

ನಕಲಿ ದಾಖಲೆ ಸೃಷ್ಟಿಸಿ 19.73 ಲಕ್ಷ ವಂಚನೆ: ಫೈನಾನ್ಸ್ ಮಾಜಿ ಉದ್ಯೋಗಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ.28– ನಕಲಿ ದಾಖಲೆ ಸೃಷ್ಟಿಸಿಕೊಂಡು ಲಕ್ಷಾಂತರ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪದಡಿ ಖಾಸಗಿ ಮೈಕ್ರೋ ಫೈನಾನ್ಸ್‌ನ ಮಾಜಿ ಉದ್ಯೋಗಿಯೊಬ್ಬರ ವಿರುದ್ಧ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರ 2ನೇ ಹಂತದ ಅಭಿಷೇಕ್ ವೃತ್ತದ ಬಳಿ ಇರುವ ಮೆ/ /ಸ್ಯಾನಿಟಿ ಕ್ರೆಡಿಟ್ ಕೇರ್ ನೆಟ್‌ವರ್ಕ್ ಲಿಮಿಟೆಡ್ ಸಂಸ್ಥೆಯು ವಿಜಯಶ್ರೀಪುರ ಬಡಾವಣೆಯಲ್ಲಿದ್ದ ಸಂದರ್ಭದಲ್ಲಿ ಅಲ್ಲಿನ ಶಾಖೆ ವ್ಯವಸ್ಥಾಪಕರಾಗಿದ್ದ ಪುಟ್ಟರಾಜು ವಿರುದ್ಧ ನ್ಯಾಯಾಲಯದ ಸೂಚನೆ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಪ್ರಾದೇಶಿಕ ಡೆಪ್ಯುಟಿ ಮ್ಯಾನೇಜರ್ ಸತೀಶ್ ಕುಮಾರ್ ದೂರು ನೀಡಿದ್ದು, ಸಂಸ್ಥೆಯ ಶಾಖೆಯು ವಿಜಯಶ್ರೀಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆಗಿನ ಬ್ರ್ಯಾಂಚ್ ಮ್ಯಾನೇಜರ್ ಆಗಿದ್ದ ಪುಟ್ಟರಾಜು, ಗ್ರಾಹಕರಿಗೆ ಸಾಲ ಮಂಜೂರು ಮಾಡುವಂತೆ ನಕಲು ಕೆವೈಸಿ ದಾಖಲೆಗಳನ್ನು ಸೃಷ್ಟಿಸಿಕೊಂಡು, ಗ್ರಾಹಕರಲ್ಲದವರ ವಿವಿಧ ಖಾತೆಗಳಿಗೆ ಒಟ್ಟು 19,73,853 ಹಣವನ್ನು ಮಂಜೂರು ಮಾಡಿ, ತನ್ನ ಸ್ವಂತಕ್ಕೆ ಬಳಸಿಕೊಂಡು ಸಂಸ್ಥೆಗೆ ನಷ್ಟ ಉಂಟು ಮಾಡಿದ್ದಾರೆ. ಸಂಸ್ಥೆಯ ಆಂತರಿಕ ಆಡಿಟ್ ವೇಳೆ ಹಣ ವಂಚನೆ ಆಗಿರುವುದು ತಿಳಿದುಬಂದಿದೆ ಎಂದು ತಿಳಿಸಿದ್ದಾರೆ.

ಖಾಸಗಿ ವೈದ್ಯರಿಗೆ ವಿಮೆ ಇಲ್ಲ: ಸುಪ್ರೀಂಕೋರ್ಟ್ ಆಕ್ಷೇಪ

ನವದೆಹಲಿ: ನ್ಯಾಯಾಂಗವು ವೈದ್ಯರ ಪರ ನಿಲ್ಲದಿದ್ದರೆ ಈ ಸಮಾಜ ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ. ಕೋವಿಡ್–19 ಸಂದರ್ಭದಲ್ಲಿ ಖಾಸಗಿ ವೈದ್ಯರು ಕೇವಲ ಹಣಕ್ಕಾಗಿಯೇ ಕೆಲಸ ಮಾಡಿದ್ದಾರೆ ಎನ್ನುವ ಟೀಕೆಗಳಿಗೆ ನ್ಯಾಯಾಲಯವು ತೀವ್ರ ಆಕ್ಷೇಪ ವ್ಯಕ್ತಪಡಿಸಿತು.

ಕೋವಿಡ್ ಪಿಡುಗಿನ ವೇಳೆ ಕೆಲಸ ಮಾಡಿ, ಕೊನೆಗೆ ಕೋವಿಡ್‌ನಿಂದಲೇ ಮೃತಪಟ್ಟ ಖಾಸಗಿ ವೈದ್ಯರನ್ನು ವಿಮೆ ಪಾಲಿಸಿಗಳಲ್ಲಿ ಒಳಗೊಳ್ಳದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಆರ್. ಮಹದೇವನ್ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿ, ತೀರ್ಪನ್ನು ಕಾಯ್ದಿರಿಸಿತು.

ಪ್ರಧಾನ ಮಂತ್ರಿ ವಿಮೆ ಯೋಜನೆ ಜೊತೆಗೆ ಇಂಥ ಬೇರೆ ಯಾವ ಯಾವ ಯೋಜನೆಗಳಿವೆ ಎಂಬ ಬಗ್ಗೆ ಮಾಹಿತಿ ನೀಡಿ ಎಂದು ಕೇಂದ್ರ ಸರ್ಕಾರಕ್ಕೆ ಪೀಠ ಸೂಚನೆ ನೀಡಿತು. ನಾವು ಕೆಲವು ಮಾರ್ಗಸೂಚಿಗಳನ್ನು ನೀಡುತ್ತೇವೆ. ಇದರ ಆಧಾರದಲ್ಲಿ ವಿಮೆ ಹಣಕ್ಕಾಗಿ ಕ್ಲೇಮ್ ಮಾಡಿಕೊಳ್ಳಬಹುದು. ನಮ್ಮ ತೀರ್ಪಿನ ಆಧಾರದಲ್ಲಿ ಆದೇಶಗಳನ್ನು ರೂಪಿಸಿಕೊಳ್ಳುವುದು ವಿಮಾ ಕಂಪನಿಗಳಿಗೆ ಬಿಟ್ಟಿದ್ದು ಎಂದು ಪೀಠ ಹೇಳಿತು.

ಸಿದ್ಧ ಸಮಾಧಿ ಯೋಗ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ

ಮೈಸೂರು, ಅ. 28– ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ನ. 1 ರಂದು ಸಂಜೆ 6ಕ್ಕೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನ. 3, ಸೋಮವಾರದಿಂದ 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿತ್ವ ವಿಕಾಸದ ಬಗ್ಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9448458050, 8618762110 ಸಂಪರ್ಕಿಸಬಹುದು.

ಹೊಸಬೆಳಕು ಗಾಯನ ತಂಡದ ಸಂಭ್ರಮ


ಮೈಸೂರಿನ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಭಾನುವಾರ ಹೊಸಬೆಳಕು ಗಾಯನ ತಂಡವು, ಸಂಸ್ಥಾಪನಾ ಅಧ್ಯಕ್ಷೆ ಶ್ರೀಮತಿ ಉಷಾ ಸುಧಾಕರ್ ಸಾರಥ್ಯದಲ್ಲಿ ಚಲನಚಿತ್ರ ಗೀತೆಗಳ ಗಾಯನ ಪ್ರಸ್ತುತಪಡಿಸಿ, ಮೆಚ್ಚುಗೆಗೆ ಪಾತ್ರವಾಯಿತು.

ಸರ್ಕಾರದ ನಿಯಮಕ್ಕೆ ಹೈಕೋರ್ಟ್ ತಡೆ ವಿಚಾರ

ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸಲು ಮುಂದಾಗಿದ್ದ ಸರ್ಕಾರಕ್ಕೆ ಹಿನ್ನಡೆ

ಕೆಆರ್ ಕ್ಷೇತ್ರದ ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ಹರ್ಷ


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು.

ಮೈಸೂರು,ಅ.28(ಪಿಎಂ)– ಖಾಸಗಿ ಸಂಘಟನೆಗಳು ಸರ್ಕಾರಿ ಸ್ಥಳಗಳಲ್ಲಿ ಚಟುವಟಿಕೆ ನಡೆಸಲು ಅನುಮತಿ ಪಡೆಯಬೇಕೆಂಬ ಕರ್ನಾಟಕ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿರುವುದನ್ನು ಸ್ವಾಗತಿಸಿದ ಕೆಆರ್ ಕ್ಷೇತ್ರದ ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ, ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸಲು ಮುಂದಾಗಿದ್ದ ಸರ್ಕಾರಕ್ಕೆ ಇದು ಹಿನ್ನಡೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ತುರ್ತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಇಷ್ಟೆಲ್ಲಾ ಆದ ಮೇಲೂ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧಿಸುವ ಸರ್ಕಾರದ ನಿಲುವು ಸರಿಯಲ್ಲ. ಇನ್ನಾದರೂ ರಾಜ್ಯ ಸರ್ಕಾರ ತನ್ನ ಈ ನಿರ್ಧಾರ ಕೈಬಿಡಬೇಕು ಎಂದು ಆಗ್ರಹಿಸಿದರು.

ಆರ್‌ಎಸ್‌ಎಸ್ ಸರಸಂಘಚಾಲಕ ಗುರೂಜಿ ಅವರು ನಿಧನ ಹೊಂದಿದಾಗ, ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು, ಸಂಸತ್ತಿನಲ್ಲೇ ಶ್ರದ್ಧಾಂಜಲಿಗೆ ವ್ಯವಸ್ಥೆ ಮಾಡಿದ್ದರು. ಆದರೆ ಇಂದು ರಾಜ್ಯ ಕಾಂಗ್ರೆಸ್ ಸರ್ಕಾರ, ಆರ್‌ಎಸ್‌ಎಸ್ ವಿರುದ್ಧ ಷಡ್ಯಂತ್ರಕ್ಕೆ ಮುಂದಾಗಿದೆ ಎಂದು ಆರೋಪಿಸಿದರು.

ಯತೀಂದ್ರ ವಿರುದ್ಧ ಆರೋಪ: ಚುನಾವಣಾ ಆಯೋಗವನ್ನು ರಾಜಕೀಯ ಪಕ್ಷವೊಂದರ ಕೈಗೊಂಬೆ ಎಂದೆಲ್ಲಾ ಎಂಎಲ್‌ಸಿ ಡಾ.ಯತೀಂದ್ರ ಟೀಕೆ ಮಾಡಿದ್ದಾರೆ. ಚುನಾವಣಾ ಆಯೋಗದ ಮುಖ್ಯ ಆಯುಕ್ತರನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡಿರುವ ಡಾ.ಯತೀಂದ್ರ ಹೇಳಿಕೆಯನ್ನು ಖಂಡಿಸುತ್ತೇನೆ. ಇವರಿಗೆ ಚುನಾವಣೆಯಲ್ಲಿ ಗೆದ್ದಾಗ ಇವಿಎಂ ಸರಿ ಇರುತ್ತದೆ. ಇಂದಿರಾಗಾಂಧಿ ಅಂದು ತುರ್ತು ಪರಿಸ್ಥಿತಿ ಜಾರಿ ಮಾಡಿದ್ದರಿಂದ ಹಿಡಿದು ಯಾವ್ಯಾವ ರೀತಿಯಲ್ಲಿ ಸಂವಿಧಾನ ದುರುಪಯೋಗ ಆಗಿದೆ ಎನ್ನುವುದನ್ನು ನಾನು ವಿವರಿಸುವ ಅಗತ್ಯವಿಲ್ಲ. ಯತೀಂದ್ರರವರು ಒಮ್ಮೆ ಇತಿಹಾಸ ನೋಡಿದರೆ ತಿಳಿಯುತ್ತದೆ ಎಂದು ವಾಗ್ದಾಳಿ ನಡೆಸಿದರು.

ಹಾಗೆಯೇ ಜಿಲ್ಲೆಯಲ್ಲಿ ಹುಲಿ ದಾಳಿ ಮುಂದುವರೆದಿದ್ದು, ಅರಣ್ಯ ಇಲಾಖೆ ಬಿಗಿ ಕ್ರಮ ಕೈಗೊಳ್ಳಬೇಕು. ಅರಣ್ಯ ಪ್ರದೇಶದಲ್ಲಿ ಅಕ್ರಮ ಕಟ್ಟಡಗಳ ವಿರುದ್ಧ ಕ್ರಮ ಕೈಗೊಂಡಿದ್ದರೆ ವನ್ಯಜೀವಿಗಳು ನಾಡಿನತ್ತ ಬರುವುದು ತಪ್ಪುತ್ತಿತ್ತು. ಆದರೆ ಅರಣ್ಯ ಇಲಾಖೆ ಕಣ್ಮುಚ್ಚಿ ಕುಳಿತಿದೆ. ಜನಾಕ್ರೋಶ ವ್ಯಕ್ತವಾಗುವುದಕ್ಕೆ ಅವಕಾಶ ನೀಡದೇ ವನ್ಯಜೀವಿಗಳು ಜನವಸತಿ ಪ್ರದೇಶಕ್ಕೆ ಬಾರದಂತೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು.

ಅಧಿಕಾರಿಗಳ ವಿರುದ್ಧ ಕ್ರಮ ವಹಿಸಬೇಕು: ನಿನ್ನೆ ನಡೆದಂತಹ ಹುಲಿ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಮೃತದೇಹವನ್ನು ನಾನು ನೋಡಲೆಂದು ಮೈಸೂರಿಗೆ ತಂದಿದ್ದರೆ ಅದು ಅಕ್ಷಮ್ಯ ಅಪರಾಧವೆಂದು ಸಚಿವ ಈಶ್ವರ ಖಂಡ್ರೆ ಅವರೇ ಹೇಳಿದ್ದಾರೆ. ಅಂತಹ ಕೆಲಸ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸಹ ಹೇಳಿದ್ದಾರೆ. ಅವರು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನಡೆಯುತ್ತಿರುವ ರೆಸಾರ್ಟ್‌ಗಳ ಆವರಣದಲ್ಲಿ ಕ್ಯಾಂಪ್ ಫೈರ್ ಹಾಕುತ್ತಿದ್ದು, ಈ ಫೈರ್ ನೋಡಿಯೇ ಪ್ರಾಣಿಗಳು ನಾಡಿನತ್ತ ಬರುತ್ತಿವೆ ಎನ್ನಲಾಗುತ್ತಿದೆ ಎಂದರು.

ಸ್ಪಷ್ಟನೆ ನೀಡಲಿ: ನಿಕಟಪೂರ್ವ ವಿಧಾನಸಭಾಧ್ಯಕ್ಷರೂ ಆದ ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹಾಲಿ ವಿಧಾನಸಭಾಧ್ಯಕ್ಷರ ವಿರುದ್ಧ ಕೆಲ ಗಂಭೀರ ಆರೋಪ ಮಾಡಿದ್ದಾರೆ. ಈ ಸಂಬಂಧ ಹಾಲಿ ವಿಧಾನಸಭಾಧ್ಯಕ್ಷರು ಕೂಡಲೇ ಸ್ಪಷ್ಟನೆ ಕೊಡಬೇಕು ಎಂದು ಒತ್ತಾಯಿಸಿದರು. ಬಿಜೆಪಿ ನಗರ ವಕ್ತಾರ ಮೋಹನ್, ಮುಖಂಡರಾದ ಕೇಬಲ್ ಮಹೇಶ್, ಮಹೇಶ್‌ರಾಜೇ ಅರಸ್, ಗೋಪಾಲ್ ರಾಜಅರಸ್, ಗೋಕುಲ್ ಗೋವರ್ಧನ್, ಜಯರಾಮ್ ಮತ್ತಿತರರು ಹಾಜರಿದ್ದರು.

ಮಲ್ಲಿಕಾರ್ಜುನ ಖರ್ಗೆಯವರೇ ವ್ಯವಸ್ಥೆ ಮಾಡಿಕೊಟ್ಟಿದ್ದರು


ಮೈಸೂರು,ಅ.28(ಪಿಎಂ)– ಮಲ್ಲಿಕಾರ್ಜುನ ಖರ್ಗೆ ಅವರಂತಹವರೇ ರಾಜ್ಯದಲ್ಲಿ ಮಂತ್ರಿಗಳಾದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆದ ಆರ್‌ಎಸ್‌ಎಸ್‌ನ ಸಮರಸತಾ ಕಾರ್ಯಕ್ರಮಕ್ಕೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿಕೊಟ್ಟಿದ್ದರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆಯವರು ತಂದೆ ಮಲ್ಲಿಕಾರ್ಜುನ ಖರ್ಗೆಯವರ ನೆರಳಲ್ಲಿ ಹೋಗುವುದನ್ನು ಬಿಟ್ಟು ಇಂದು ರಾಜ್ಯದಲ್ಲಿ ತನ್ನಿಂದಲೇ ಎಲ್ಲವೂ ಆಗುತ್ತಿದೆ ಎಂದುಕೊಂಡಂತಿದೆ. ಅವರು ಐಟಿ ಬಿಟಿ ಸಚಿವರಾಗಿ ಐಟಿ ಕಂಪನಿ ಪರ ರಾಜ್ಯಕ್ಕೆ ಹೋಗುತ್ತಿರುವ ಈ ಸಂದರ್ಭದಲ್ಲಿ ಅದನ್ನು ತಡೆಯಲು ಪ್ರಯತ್ನ ಮಾಡದೇ ಈ ರೀತಿಯಲ್ಲಿ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ವಿಷಯದಲ್ಲಿ ರಾಜ್ಯ ಸರ್ಕಾರದ ನಡೆ, ಪ್ರಿಯಾಂಕ್ ಖರ್ಗೆ ಹೇಳಿಕೆಗಳಿಗೆ ಎಲ್ಲೂ ಮಲ್ಲಿಕಾರ್ಜುನ ಖರ್ಗೆಯವರು ಈವರೆಗೆ ಪ್ರತಿಕ್ರಿಯೆ ನೀಡಿಲ್ಲ. ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ರಾಜಕಾರಣಿಯಾಗಿದ್ದು, ಆರ್‌ಎಸ್‌ಎಸ್ ವಿಚಾರದಲ್ಲಿ ದ್ವೇಷ ಸಾಧನೆ ಒಳ್ಳೆಯದಲ್ಲವೆಂದು ಮುಖ್ಯಮಂತ್ರಿಗಳಿಗೆ, ಅವರ ಪುತ್ರರಿಗೆ ಹೇಳುತ್ತಿಲ್ಲವೋ ಏನೋ ನನಗೆ ಗೊತ್ತಿಲ್ಲ. ನನಗೆ ತಿಳಿದಂತೆ ಒಂದು ಸರ್ಕಾರದ ಮೂರ್‍ನಾಲ್ಕು ಶಾಸಕರು ಜೈಲಿಗೆ ಹೋಗಿದ್ದು ಈ ಸರ್ಕಾರದ ಅವಧಿಯಲ್ಲಿ ಮಾತ್ರ. ಈ ಬಗ್ಗೆ ಚರ್ಚೆಯಾಗುವುದನ್ನು ತಡೆಯಲು ರಾಜ್ಯದಲ್ಲಿ ಹೀಗೆಲ್ಲಾ ಮಾಡುತ್ತಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದರು.

ನವೆಂಬರ್ ಕ್ರಾಂತಿ: ನವೆಂಬರ್ ಕ್ರಾಂತಿಯ ಭವಿಷ್ಯ ಎಲ್ಲಿಗೆ ಬಂದಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ದಿನಕ್ಕೊಂದು ಹೇಳಿಕೆ ಬರುತ್ತಿವೆ. ಹೈಕಮಾಂಡ್ ಒಪ್ಪಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿರುವ ಹಿನ್ನೆಲೆಯಲ್ಲಿ ದಿನಕ್ಕೊಂದು ಬೆಳವಣಿಗೆ ಆಗುತ್ತಿದೆ. ನವೆಂಬರ್ ಡಿಸೆಂಬರ್‌ನಲ್ಲಿ ಮೇಜರ್ ಬದಲಾವಣೆ ರಾಜ್ಯದಲ್ಲಿ ಆಗಲಿದೆ ಎನ್ನಿಸುತ್ತಿದೆ. ನಮ್ಮ ಜಿಲ್ಲೆಯ ಒಬ್ಬ ಹಿರಿಯ ರಾಜಕಾರಣಿ ಸಿಎಂ ಸ್ಥಾನದಿಂದ ಇಳಿಯುತ್ತಾರೆ ಎಂದು ಗೋಚರಿಸುತ್ತಿದೆ ಎಂದರು.

ಕಂಡಕಂಡಲ್ಲಿ ಮದ್ಯಸೇವನೆ; ಧೂಮಪಾನಕ್ಕೆ ಪೊಲೀಸರ ಬ್ರೇಕ್


ಸಾರ್ವಜನಿಕ ಸ್ಥಳದಲ್ಲಿ ಮದ್ಯಸೇವನೆ ಮಾಡುತ್ತಿದ್ದವರನ್ನು ಠಾಣೆಗೆ ಕರೆತಂದು ವಿಜಯನಗರ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಮೈಸೂರು, ಅ.28(ಎಸ್‌ಪಿಎನ್)– ಹುಣಸೂರು ರಸ್ತೆಯ ವಿವಿಧೆಡೆ ವಾಹನ, ಖಾಲಿ ಸ್ಥಳಗಳಲ್ಲಿ ಕುಳಿತು ಮದ್ಯಸೇವನೆ ಮಾಡಿ, ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ 25 ಮಂದಿ ವಿರುದ್ಧ ವಿಜಯನಗರ ಪೊಲೀಸರು ಪೆಟಿ ಕೇಸ್ ದಾಖಲಿಸಿದ್ದಾರೆ.

ವಿಜಯನಗರ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್ ನೇತೃತ್ವದಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಜಯಕೀರ್ತಿ, ಆನಂದ, ಕೃಷ್ಣ, ಕಮಾಂಡೋ ಪಡೆ ಸಿಬ್ಬಂದಿ ಹಾಗೂ ವಿಜಯನಗರ ಠಾಣಾ ಸಿಬ್ಬಂದಿ ಸೋಮವಾರ ರಾತ್ರಿ ವಿಶೇಷ ಗಸ್ತು ತಿರುಗುವ ವೇಳೆ ಠಾಣೆಗೆ ಕರೆತಂದು ಕೇಸು ದಾಖಲಿಸಿ, ಬಿಡುಗಡೆಗೊಳಿಸಿದ್ದಾರೆ.

ಅಲ್ಲದೆ ಸಾರ್ವಜನಿಕ ರಸ್ತೆಗಳಲ್ಲಿ ಧೂಮಪಾನ ಮಾಡುತ್ತಿದ್ದ 19 ಮಂದಿ ವಿರುದ್ಧ ಕೋಪ್ಟಾ ಕಾಯ್ದೆಯಡಿ ದೂರು ದಾಖಲಿಸಿದ್ದು, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಬಿಡುಗಡೆಗೊಳಿಸಿದ್ದಾರೆ.


ಕೆ.ಆರ್. ಠಾಣೆ ಪೊಲೀಸರು ವಿಶೇಷ ಗಸ್ತು: ಭಾನುವಾರ ರಾತ್ರಿ ಕೆ.ಆರ್.ಠಾಣೆ ಪೊಲೀಸರು ಅಗ್ರಹಾರ ಸುತ್ತಮುತ್ತಲಿನ ರಸ್ತೆಗಳಲ್ಲಿ ವಿಶೇಷ ಗಸ್ತು ತಿರುಗಿ ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ ಮಾಡುತ್ತಿದ್ದ ಹಲವರ ವಿರುದ್ಧ ಪೆಟಿ ಕೇಸ್ ದಾಖಲಿಸಿದ್ದು, ಧೂಮಪಾನ ಸೇವನೆ ಮಾಡುವವರ ವಿರುದ್ಧ ಕೋಪ್ಟಾ ಕಾಯ್ದೆಯಡಿ ದಂಡ ವಿಧಿಸಿದ್ದಾರೆ. ಅಲ್ಲಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ, ಸಾರ್ವಜನಿಕ ಸ್ಥಳದಲ್ಲಿ ಗುಂಪುಕಟ್ಟಿಕೊಂಡು ಹರಟೆ ಹೊಡೆಯುತ್ತಿದ್ದವರ ವಿರುದ್ಧವೂ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ವಿಶೇಷ ರೈಲು ಸೇವೆಗಳ ಪುನರಾರಂಭ

ಮೈಸೂರು, ಅ.28– ಪ್ರಯಾಣಿಕರ ಕೊರತೆಯಿಂದ ರದ್ದುಗೊಳಿಸಲಾಗಿದ್ದ ಎರಡು ವಿಶೇಷ ರೈಲುಗಳ ಸಂಚಾರವನ್ನು ಪುನರಾರಂಭಿಸಲಾಗಿದೆ.

ಮೈಸೂರು–ಕರೈಕುಡಿ ವಿಶೇಷ ಎಕ್ಸ್‌ಪ್ರೆಸ್ ರೈಲು(ಸಂಖ್ಯೆ 06243) ನ.8ರಿಂದ ಹಾಗೂ ಕರೈಕುಡಿ–ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲು(ಸಂಖ್ಯೆ 06244) ನ.9ರಿಂದ ಮೂಲ ವೇಳಾಪಟ್ಟಿಯ ಪ್ರಕಾರವೇ ಸಂಚಾರ ಆರಂಭಿಸಲಿವೆ. ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಈ ರೈಲು ಸಂಚಾರವನ್ನು ಪುನಾರಂಭಿಸಲು ನಿರ್ಧರಿಸಿದ್ದು, ಈ ಸೇವೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಶಶಿಶೇಖರ ದೀಕ್ಷಿತರಿಗೆ ಅಭಿನಂದನೆ


ಮೈಸೂರಿನ ಚಾಮುಂಡಿಬೆಟ್ಟ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಶಶಿ ಶೇಖರ್ ದೀಕ್ಷಿತ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಕೆಜಿ ಕೊಪ್ಪಲಿನ ಯುವ ಮಿತ್ರರು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಭೈರವ ಗ್ರೂಪ್ಸ್ ಮಾಲೀಕ ಬಿ.ಮಹದೇವ್, ಕನ್ನಡ ಸಂಘದ ಅಧ್ಯಕ್ಷ ಬಿ.ಬಂದಿಗೌಡ, ಪಾಪಣ್ಣ, ಕೃಷ್ಣಪ್ಪ ಕೆಜಿ ಕೊಪ್ಪಲು ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಗಿರೀಶ್ ಡಿ.ಗೌಡ, ಶ್ರೀಧರ್ ದೀಕ್ಷಿತ್, ಅಭಿಲಾಶ್, ಸೋಮಣ್ಣ, ಪೈಲ್ವಾನ್ ಮಂಜು, ವಿಕ್ರಾಂತ ರಾಮಚಂದ್ರ ಕೊಪ್ಪಲ್ ಶಿವರಾಜು, ದೇವು(ಪ್ರದೀಪ್), ರಾಜಕುಮಾರ್, ಕಲಾಮಂದಿರ ರಮೇಶ್, ಬಾಲು ಮತ್ತಿತರರು ಉಪಸ್ಥಿತರಿದ್ದರು.

ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷರಾಗಿ ಜಯಪ್ಪ ಹೊನ್ನಾಳಿ ಅಧಿಕಾರ ಸ್ವೀಕಾರ

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾಗಿ ಶೋಭಾ ಜಯಪ್ರಕಾಶ್


ಶರಣ ಸಾಹಿತ್ಯ ಪರಿಷತ್ ಮೈಸೂರು ನಗರದ ಘಟಕ ಹಾಗೂ ಕದಳಿ ಮಹಿಳಾ ವೇದಿಕೆಯ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಅ.28(ಎಸ್‌ಪಿಎನ್)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ನೂತನ ಅಧ್ಯಕ್ಷರಾಗಿ ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ ಹಾಗೂ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾಗಿ ಶೋಭಾ ಜಯಪ್ರಕಾಶ್ ಅವರು, ನಿಕಟ ಪೂರ್ವ ಅಧ್ಯಕ್ಷರಾದ ಮ.ಗು. ಸದಾನಂದಯ್ಯ, ಶಾರದ ಶಿವಲಿಂಗ ಸ್ವಾಮಿ ಅವರಿಂದ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಮಾಜಿ ಅಧ್ಯಕ್ಷರಾದ ಮ.ಗು.ಸದಾನಂದಯ್ಯ, ಶಾರದ ಶಿವಲಿಂಗ ಸ್ವಾಮಿ, ಉಪಾಧ್ಯಕ್ಷರಾಗಿದ್ದ ಜಯಗೌಡ ಹಾಗೂ ಎಂ.ಚಿನ್ನಸ್ವಾಮಿ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು. ಬಳಿಕ ನೂತನ ಅಧ್ಯಕ್ಷ ಜಯಪ್ಪ ಹೊನ್ನಾಳಿ ಮಾತನಾಡಿ, ಶರಣರ ಆಶಯದಂತೆ ಶರಣ ಸಾಹಿತ್ಯ ಪರಿಷತ್ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಲಾಗುವುದು. ಇದಕ್ಕೆ ದತ್ತಿ ದಾಸೋಹಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಬಸವ ಅಭಿಮಾನಿಗಳು ಸಹಕಾರ ನೀಡುವಂತೆ ಮನವಿ ಮಾಡಿದರು.

ಕೇಂದ್ರ ಚುನಾವಣಾ ಆಯುಕ್ತರು ರಾಜಕೀಯ ಪುಢಾರಿ!

ನಾಲಿಗೆ ಹರಿಬಿಟ್ಟ ಯತೀಂದ್ರ ಸಿದ್ದರಾಮಯ್ಯ



ಬೆಂಗಳೂರು: ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ವೋಟ್ ಚೋರಿ ಆರೋಪ ಕೇಂದ್ರ ಚುನಾವಣಾ ಆಯೋಗದ ಮೇಲೆ ಅನುಮಾನ ಮೂಡುವಂತೆ ಮಾಡಿತ್ತು. ಅಲ್ಲದೆ ಮಹದೇವಪುರದಲ್ಲಿ ವೋಟ್ ಚೋರಿ ಆಗಿದೆ ಎಂದು ಆರೋಪ ಮಾಡಲಾಗಿದ್ದು ಆಳಂದ ಕ್ಷೇತ್ರದ ವೋಟ್ ಚೋರಿ ಕುರಿತಂತೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ಇದರ ಮಧ್ಯೆ ರಾಜ್ಯದಲ್ಲಿ ಕಾಂಗ್ರೆಸ್ 'ವೋಟ್ ಚೋರ್ ಗದ್ದಿ ಛೋಡೋ' ಅಭಿಯಾನದ ಸಹಿ ಸಂಗ್ರಹ ಸಹ ನಡೆಸುತ್ತಿದೆ.

ಬೆಂಗಳೂರಿನಲ್ಲಿ ನಡೆದ ಸಹಿ ಸಂಗ್ರಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಕೇಂದ್ರ ಚುನಾವಣಾ ಆಯುಕ್ತರನ್ನು ರಾಜಕೀಯ ಪುಢಾರಿ ಎಂದು ಜರಿದಿದ್ದಾರೆ. ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಒಬ್ಬ ರಾಜಕೀಯ ಪುಢಾರಿ ಎಂದು ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ರಾಹುಲ್ ಗಾಂಧಿ ಮತಗಳ್ಳತನವನ್ನು ಸಾಕ್ಷಿ ಸಮೇತ ಬಹಿರಂಗಪಡಿಸಿದ್ದರೂ ಚುನಾವಣಾ ಆಯುಕ್ತರು ಮಾತ್ರ ರಾಹುಲ್ ಗಾಂಧಿಯ ತೇಜೋವಧೆ ಮಾಡುತ್ತಿದ್ದಾರೆ. ಅವರು ರಾಜಕೀಯ ಪುಢಾರಿ ರೀತಿ ಮಾತನಾಡುತ್ತಿದ್ದಾರೆ ಎಂದು ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಆಹಾರ ಪದ್ಧತಿ, ವ್ಯಾಯಾಮದಿಂದ ಮಧುಮೇಹಕ್ಕೆ ಕಡಿವಾಣ ಹಾಕಬಹುದು

ಖ್ಯಾತ ವೈದ್ಯ ಲಕ್ಷ್ಮೀನಾರಾಯಣ ಅಭಿಮತ


'ಮಧುಮೇಹ ಉಪಶಮನ ಮತ್ತು ಮಧುಮೇಹ ಹಿಮ್ಮೆಟ್ಟಿಸುವುದು' ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ವೈದ್ಯ ಡಾ.ವಿ.ಲಕ್ಷ್ಮೀನಾರಾಯಣ, ಎಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಕೆ.ಎ.ಅನಿತಾ ವೆಂಕಟೇಶ್ ಉಪಸ್ಥಿತರಿದ್ದರು.

ಮೈಸೂರು, ಅ.28(ಎಸ್‌ಪಿಎನ್)–2030ರ ವೇಳೆಗೆ ಭಾರತದಲ್ಲಿ 100 ಮಿಲಿಯನ್‌ಗೆ ಮಧುಮೇಹಿ ರೋಗಿಗಳ ಸಂಖ್ಯೆ ಹೆಚ್ಚಾಗಬಹುದು ಎಂದು ಖ್ಯಾತ ವೈದ್ಯ ಡಾ.ವಿ.ಲಕ್ಷ್ಮೀನಾರಾಯಣ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ 'ಮಧುಮೇಹ ಉಪಶಮನ ಮತ್ತು ಮಧುಮೇಹ ಹಿಮ್ಮೆಟ್ಟಿಸುವುದು' ವಿಷಯ ಕುರಿತು ಮಾತನಾಡಿದರು.

ಭಾರತ ಮಧುಮೇಹದ ರಾಜಧಾನಿಯಾಗಿದೆ. ಪ್ರತಿಶತ 50ರಷ್ಟು ಮಧುಮೇಹಿ ರೋಗಿಗಳು ವ್ಯಾಧಿ ಬಂದ ಹತ್ತು ವರ್ಷದಲ್ಲಿ ರೋಗ ನಿಯಂತ್ರಣಕ್ಕಾಗಿ ಇನ್ಸುಲಿನ್ ತೆಗೆದುಕೊಳ್ಳುವ ಪರಿಸ್ಥಿತಿಯಿದೆ. ನಾವು ಅವಶ್ಯಕತೆಗಳಿಗಿಂತಲೂ ಹೆಚ್ಚಿಗೆ ತಿನ್ನುತ್ತಿದ್ದೇವೆ. ಇಲ್ಲವೆ ಕಡಿಮೆ ಪೌಷ್ಠಿಕಾಂಶದ 'ಜಂಕ್ ಫುಡ್' ಅನ್ನು ಸೇವಿಸುತ್ತಿದ್ದೇವೆ. ನಮ್ಮ ಸ್ವಭಾವಗಳಿಂದಲೋ ಅಥವಾ ನಗರ ಜೀವನದ ಅನಿವಾರ್ಯತೆಗಳಿಂದಲೂ ಜನತೆ ಈಗ ಮಾನಸಿಕ ಒತ್ತಡಗಳಿಗೆ ಗುರಿಯಾಗುತ್ತಿದ್ದಾರೆ. ಇದರಿಂದ ಮಧುಮೇಹಿ ರೋಗಿಗಳ ಸಂಖ್ಯೆ ವೇಗವಾಗಿ ಬೆಳೆಯುತ್ತಿದೆ ಎಂದರು.

ಆರೋಗ್ಯಯುತ ಆಹಾರ ಪದ್ಧತಿಯೊಂದಿಗೆ ವೈದ್ಯರ ಸಲಹೆ ಪಾಲಿಸಿ ಉತ್ತಮ ಜೀವನ ಶೈಲಿ ಅಳವಡಿಸಿಕೊಂಡರೆ ಮಧುಮೇಹ ಕಾಯಿಲೆ ನಿಯಂತ್ರಿಸಬಹುದು. ಮಧುಮೇಹದ ಹೆಚ್‌ಬಿಎಸಿ 6.6ಕ್ಕಿಂತ ಹೆಚ್ಚು ಹೊಂದಿರುವ ಯಾವುದೇ ವ್ಯಕ್ತಿಯನ್ನು ಮಧುಮೇಹಿ ಎಂದು ಪರಿಗಣಿಸಲಾಗುತ್ತಿದೆ. ಸರಿಯಾದ ಆಹಾರದೊಂದಿಗೆ, ಉಪಶಮನ ಸಾಧಿಸಬಹುದು. ಮಧುಮೇಹ ಉಪಶಮನದಲ್ಲಿ ಭಾಗಶ ಉಪಶಮನ, ಸಂಪೂರ್ಣ ಉಪಶಮನ, ಸುದೀರ್ಘ ಉಪಶಮನ ಕ್ರಿಯೆಗಳಿಗೆ ಚಿಕಿತ್ಸೆ ಪಡೆಯಬಹುದು ಎಂದು ಅಭಿಪ್ರಾಯಪಟ್ಟರು.

ಮಧುಮೇಹದ ಆಹಾರದಲ್ಲಿ ಮಂದಗತಿಯಲ್ಲಿ ಜೀರ್ಣವಾಗುವ ಅಂಶವಿರುವ ಪಿಷ್ಟ ಪದಾರ್ಥಗಳು ಸೇವನೆಯಿಂದ ಮಂದಗತಿಯಲ್ಲಿ ಜೀರ್ಣವಾಗುತ್ತದೆ. ಸಸ್ಯಜನ್ಯ ಪ್ರೋಟೀನ್‌ನಿಂದ ಉದಾ: ಬೇಳೆ ಕಾಳು ಇತ್ಯಾದಿಗಳಿಂದ –ಹಸಿವು ಕಡಿಮೆಯಾಗಿ ಆಹಾರ ಸೇವನೆ ಕಡಿಮೆ ಆಗುತ್ತದೆ ಮತ್ತು ಸಕ್ಕರೆ ಅಂಶ ಕಡಿಮೆ ಆಗುವುದರಿಂದ ಮಧುಮೇಹ ಕಡಿಮೆ ಆಗುತ್ತಿದೆ ಎಂಬ ವಿಚಾರ ಎಲ್ಲರಿಗೂ ತಿಳಿದಿರಬೇಕು ಎಂದು ಸಲಹೆ ನೀಡಿದರು.

ಅಡುಗೆಗೆ ಆರೋಗ್ಯಕರವಾದ ಎಣ್ಣೆಗಳನ್ನು ಬಳಸಬೇಕು. ಸಾಂಬಾರು ಪದಾರ್ಥಗಳಾದ ಜೀರಿಗೆ, ಮೆಂತ್ಯ ಸೇರಿದಂತೆ ಇತರೆ ಪದಾರ್ಥಗಳ ಬಳಕೆಯಿಂದ ಸಕ್ಕರೆ ಅಂಶ ಕಡಿಮೆಯಾಗುತ್ತದೆ. ಹಾಗೂ ವ್ಯಾಯಾಮ ಮಾಡುವುದರಿಂದ ಮಧುಮೇಹ ಬರುವುದನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ ಎಂದರು.

ಚಿಕಿತ್ಸೆಯ ವಿಚಾರದಲ್ಲಿ ವಾಸ್ತವಾಂಶ ಏನೆಂದರೆ ಎಷ್ಟೇ ಅವಿಷ್ಕಾರಗಳು ತಂತ್ರಜ್ಞಾನಗಳೂ ನಡೆದಿದ್ದರೂ ಮಧುಮೇಹ ವಿಚಾರದಲ್ಲಿ ನಿರ್ದಿಷ್ಟವಾದ ಮಾರ್ಗಸೂಚಿ ಇದುವರೆಗೂ ಕಂಡುಬಂದಿಲ್ಲ. ಮಧುಮೇಹಕ್ಕೆ ಚಿಕಿತ್ಸೆ ಪಡೆದು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ಆದರೆ, ವಾಸಿಮಾಡಲು ಅಥವಾ ಹಿಮ್ಮೆಟ್ಟಿಸಲಾಗದು ಎಂದು ಹೇಳಿದರು.

ಸಮೋಸ, ಜಾಮೂನು ಹಾಗೂ ಸಿಹಿ ತಿಂಡಿಗಳನ್ನು ಕಡಿಮೆ ಸೇವಿಸಬೇಕು. ಜೊತೆಗೆ ಟಿವಿ, ಕಂಪ್ಯೂಟರ್, ಲ್ಯಾಪ್‌ಟ್ಯಾಪ್, ಐ–ಪೋನ್‌ಗಳ ಬಳಕೆ ಕಡಿಮೆ ಮಾಡಬೇಕು. ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿಡಲು ತಮ್ಮ ಜೀವನಶೈಲಿಯನ್ನು ಸಂಪೂರ್ಣ ಬದಲಾಯಿಸಿಕೊಂಡಾಗ ಮಾತ್ರ ಸಾಧ್ಯ ಎಂದು ಸಲಹೆ ನೀಡಿದರು. ವೇದಿಕೆಯಲ್ಲಿ ದಿ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಕೆ.ಎ.ಅನಿತಾ ವೆಂಕಟೇಶ್, ಡಾ.ಎಂಜಿಆರ್ ಅರಸ್ ಉಪಸ್ಥಿತರಿದ್ದರು.

ಕಂಪಲಾಪುರ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಅವ್ಯವಹಾರ ಆರೋಪ

ರೈತ ಸಂಘ, ಹಸಿರು ಸೇನೆಯಿಂದ ಪ್ರತಿಭಟನೆ



ಅವ್ಯವಹಾರವನ್ನು ತನಿಖೆ ನಡೆಸುವಂತೆ ಆಗ್ರಹಿಸಿ ರೈತರು ಕಂಪಲಾಪುರದಲ್ಲಿ ಪ್ರತಿಭಟನೆ ನಡೆಸಿದರು.

ಕಂಪಲಾಪುರ: ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರವನ್ನು ತನಿಖೆಗೆ ಒಳಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಸಹಕಾರ ಸಂಘದ ಮುಂಭಾಗ ಮಂಗಳವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದರು.

ನೂರಾರು ವರ್ಷಗಳ ಇತಿಹಾಸವಿರುವ ಈ ಸಹಕಾರ ಸಂಘದಲ್ಲಿ ಸಾವಿರಾರು ರೈತರು ಕೋಟಿಗಟ್ಟಲೆ ಸಾಲ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ, ಜೊತೆಗೆ ಬಿತ್ತನೆ ಬೀಜ, ಗೊಬ್ಬರಗಳನ್ನು ಪಡೆದುಕೊಳ್ಳುತ್ತಿದ್ದಾರೆ ಆದರೆ ಸೀಮೆಎಣ್ಣೆ ಹಾಗೂ ಗೊಬ್ಬರ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರಿಂದ ಸುಮಾರು 12 ಲಕ್ಷದಷ್ಟು ಅವ್ಯವಹಾರ ನಡೆದಿದೆ. ಈ ಬಗ್ಗೆ ತನಿಖೆ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಗೊಬ್ಬರ ವಿತರಣೆಯಲ್ಲಿ ಕೆಲ ದಿನಗಳ ಹಿಂದೆ ಅವ್ಯವಹಾರ ನಡೆದಿದ್ದು ಈ ಬಗ್ಗೆ ಗೊಬ್ಬರ ವಿತರಣೆ ಮಾಡುವ ನೌಕರನಿಗೆ ನೋಟಿಸ್ ಜಾರಿ ಮಾಡಿದ್ದು ಆತನಿಂದ 8 ಲಕ್ಷ ವಸೂಲಿ ಮಾಡಲಾಗಿದೆ. ಇಷ್ಟಾದರೂ ಆತನನ್ನು ಮತ್ತೆ ಏಕೆ ಕೆಲಸಕ್ಕೆ ತೆಗೆದುಕೊಂಡಿದ್ದೀರಿ. ಜೊತೆಗೆ ಪ್ರತಿದಿನ ನೀವು ಏಕೆ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡುತ್ತಿಲ್ಲ ಎಂದು ಕಾರ್ಯದರ್ಶಿ ವಿರುದ್ಧ ಕೆಲ ಕಾರ್ಯಕರ್ತರು ಪ್ರಶ್ನೆಗಳ ಸುರಿಮಳೆಗೈದರು. ನಂತರ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ಪ್ರತಿಭಟನೆ ಸ್ಥಳಕ್ಕೆ ಬರಬೇಕೆಂದು ಆಗ್ರಹಿಸಿದಾಗ ಸ್ಥಳಕ್ಕೆ ಅಧ್ಯಕ್ಷ ಮಹದೇವ್ ಹಾಗೂ ಕಾರ್ಯದರ್ಶಿ ಹರ್ಷ ಸಿಡಿಓ ಜಿತೇಂದ್ರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದರು.

ನಂತರ ಉತ್ತರಿಸಿದ ಅಧ್ಯಕ್ಷ ಮಹದೇವ್ ನಾವು ಈಗಾಗಲೇ ಈ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚೆ ಮಾಡಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದು ಕ್ರಮ ಕೈಗೊಳ್ಳಲು ತೀರ್ಮಾನಿಸಿದ್ದೇವೆ ಜೊತೆಗೆ ತಪ್ಪು ನಡೆದಿದ್ದರೆ ಹಿರಿಯ ಅಧಿಕಾರಿಗಳಿಗೆ ತನಿಖೆಗೆ ಒತ್ತಾಯಿಸುತ್ತೇವೆ ಎಂದರು.

ಸಂಘದ ನೌಕರ ನಾಗರಾಜನನ್ನು ಸ್ಥಳಕ್ಕೆ ಕರೆಯಿಸಿ ಎಂದು ಪಟ್ಟು ಹಿಡಿದರು. ಆತ ಆಗಮಿಸಿ ಇದರಲ್ಲಿ ನಾನೇನು ತಪ್ಪು ಮಾಡಿಲ್ಲ ನನ್ನಿಂದ ಬಲವಂತವಾಗಿ 8 ಲಕ್ಷ ರೂ. ಹಣವನ್ನು ಕಟ್ಟಿಸಿಕೊಂಡರು ಎಂದಾಗ, ಕೆಲ ಕಾರ್ಯಕರ್ತರು ನೀನು ತಪ್ಪು ಮಾಡಿಲ್ಲ. ಅಂದ ಮೇಲೆ ಸುಮ್ಮನೆ ಏಕೆ 8 ಲಕ್ಷ ರೂಪಾಯಿಯನ್ನು ಸಂಘಕ್ಕೆ ಕಟ್ಟಿದೆ ಎಂದು ಪ್ರಶ್ನಿಸಿದರು, ಆಗ ಆತ ನಾನು ಬಲವಂತ ವಾಗಿ ಹಣವನ್ನು ಕಟ್ಟಿದೆ ಎಂದು ತಿಳಿಸಿದ.

ಸಹಕಾರ ಇಲಾಖೆಯ ತಾಲೂಕು ಅಧಿಕಾರಿ ಹಿತೇಂದ್ರ ಮಾತನಾಡಿ ಈ ಸಂಘದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಮಗೂ ಮಾಹಿತಿ ಬಂದಿದೆ, ಜೊತೆಗೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘದವರು ಸಹ ನಮಗೆ ಲಿಖಿತ ಮೂಲಕ ಅರ್ಜಿ ಕೊಟ್ಟಿದ್ದಾರೆ, ಈ ಬಗ್ಗೆ ನಾವು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ತನಿಖೆ ಮಾಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದಾಗ ರೈತರು ಪ್ರತಿಭಟನೆ ಕೈ ಬಿಟ್ಟರು.

ಸಿಇಓ ಹರ್ಷ ಮಾತನಾಡಿ ಗೊಬ್ಬರ ವಿತರಣೆ ಮಾಡುವ ನೌಕರನಿಗೆ ನಾವು ಈಗಾಗಲೇ ನೋಟಿಸ್ ನೀಡಿದ್ದು ಆತ ನಿಂದ ನಡೆದಿರುವ ಅವ್ಯವಹಾರದ ಬಗ್ಗೆ ತಿಳಿ ಹೇಳಿ ಆತನಿಂದ 8 ಲಕ್ಷ ವಸೂಲಿ ಮಾಡಲಾಗಿದೆ ಈ ಬಗ್ಗೆ ಸಹಕಾರ ಇಲಾಖೆ ಹಿರಿಯ ಅಧಿಕಾರಿಗಳ ಗಮನಕ್ಕೂ ತಂದಿದ್ದೇವೆ ಎಂದರು.

ಇದೇ ಸಂದರ್ಭ ಸಹಕಾರ ಸಂಘದ ಉಪಾಧ್ಯಕ್ಷ ತಮ್ಮಯ್ಯ, ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಪ್ರಕಾಶ್ ರಾಜ ಅರಸ್, ತಾಲೂಕು ಕಾರ್ಯಾಧ್ಯಕ್ಷ ಕೆ.ಜಿ.ರಘುಪತಿ, ಮಹಿಳಾ ಅಧ್ಯಕ್ಷ ಅನುಸೂಯ, ಗ್ರಾಪಂ ಅಧ್ಯಕ್ಷ ಸಣ್ಣ ತಮ್ಮಯ್ಯ, ಸದಸ್ಯ ಚಂದ್ರು, ಶ್ರೀಪತಿ, ಬೆಟ್ಟದಪುರ ದೇವರಾಜ್, ಪಾಪಣ್ಣ, ಗುರುಸಿದ್ದಪ್ಪ, ಬೀರೇಶ್ ಸೇರಿದಂತೆ ರೈತ ಸಂಘದ ಕಾರ್ಯಕರ್ತರು ಹಾಜರಿದ್ದರು.

ಅರ್ಜುನಹಳ್ಳಿ ಗ್ರಾಪಂಗೆ ಕೃಷ್ಣಮೂರ್ತಿ ಅಧ್ಯಕ್ಷ



ಅರ್ಜುನಹಳ್ಳಿ ಗ್ರಾಪಂ ಅಧ್ಯಕ್ಷ ಕೃಷ್ಣಮೂರ್ತಿ ಅವರನ್ನು ಅಭಿನಂದಿಸಲಾಯಿತು.

ಭೇರ್ಯ: ಕೆ.ಆರ್.ನಗರ ತಾಲೂಕಿನ ಅರ್ಜುನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಬಾಲೂರು ಹೊಸಕೊಪ್ಪಲು ಗ್ರಾಮದ ಕೃಷ್ಣಮೂರ್ತಿ ಅವಿರೋಧವಾಗಿ ಆಯ್ಕೆಯಾದರು.

ಈವರೆಗೆ ಅಧ್ಯಕ್ಷರಾಗಿದ್ದ ಎ.ಆರ್.ಮಹದೇವಪ್ಪ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಾಲೂರು ಹೊಸಕೊಪ್ಪಲು ಗ್ರಾಮದ ಸದಸ್ಯ ಕೃಷ್ಣಮೂರ್ತಿ ಮತ್ತು ಕಂಚಿನಕೆರೆ ಗ್ರಾಮದ ಸದಸ್ಯ ಬಸವರಾಜು ನಾಮಪತ್ರ ಸಲ್ಲಿಸಿದ್ದರು. ಕೊನೆಗಳಿಗೆಯಲ್ಲಿ ಕೆಂಚಿನಕೆರೆ ಗ್ರಾಮದ ಸದಸ್ಯ ಬಸವರಾಜು ನಾಮಪತ್ರ ವಾಪಸ್ ಪಡೆದ ಹಿನ್ನೆಲೆಯಲ್ಲಿ ಕೃಷ್ಣಮೂರ್ತಿ ಅವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಸಿಡಿಪಿಓ ಅಣ್ಣಯ್ಯ ಪ್ರಕಟಿಸಿದರು. ಪಿಡಿಓ ಜಿ.ಬಿ.ಸಂತೋಷ್ ಸಹಕಾರ ನೀಡಿದರು.

ಚುನಾವಣೆ ಸಭೆಯಲ್ಲಿ ಉಪಾಧ್ಯಕ್ಷೆ ಕಾಳಮ್ಮ, ಆರ್.ಚಂದ್ರಕಲಾ, ರತ್ನ, ಹೇಮಾವತಿ, ಶಿರಿ, ಅನಿತಾ, ಆಶಾದೇವು, ದಿಲೀಪ್ ಕುಮಾರ್, ಶಿವಣ್ಣ, ಬಸವರಾಜು, ವಜ್ರಕುಮಾರ್, ಕೆ.ಎಂ.ಮಂಜು, ಎ.ಆರ್.ಮಹದೇವಪ್ಪ ಭಾಗವಹಿಸಿದ್ದರು.

ಕೃಷ್ಣಮೂರ್ತಿ ಅವರನ್ನು ತಾ.ಯುವ ಜೆಡಿಎಸ್ ಅಧ್ಯಕ್ಷ ಡಿ.ಎಸ್.ಯೋಗೇಶ್, ಕಾಂಗ್ರೆಸ್ ಹಿರಿಯ ಮುಖಂಡ ಸಿ.ಪಿ.ರಮೇಶ್, ಕೆಪಿ.ಯೋಗೇಶ್, ಮಧುಕಿರಣ್, ಸಿ.ವಿ.ಗುಡಿ ಪ್ರಸನ್ನ, ಧನಪಾಲ್, ಸಿ.ವಿ.ಗುಡಿ ಶಂಭು, ಬಾಲೂರು ಕೃಷ್ಣೇಗೌಡ, ನಾಗೇಂದ್ರ, ಕೀರ್ತಿ ಸೇರಿದಂತೆ ಅನೇಕರು ಪಕ್ಷಾತೀತವಾಗಿ ಅಭಿನಂದಿಸಿದರು.

ಹಳ್ಳಿಗಾಡಿನಿಂದ ಹಿಮಾಲಯದವರೆಗೂ ಧಾರ್ಮಿಕ, ದಾಸೋಹ ಸೇವೆ ಸಲ್ಲಿಸುತ್ತಿರುವ ಮಠಗಳು

ಲಿಂಗೈಕ್ಯ ಶ್ರೀಶ್ರೀ ಸಿದ್ಧ ಮಲ್ಲಿಕಾರ್ಜುನ ಸ್ವಾಮಿಗಳ ಗಣಾರಾಧನ, ಧಾರ್ಮಿಕ ಸಭೆ



ಲಿಂಗೈಕ್ಯ ಶ್ರೀಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ ಗಣಾರಾಧನೆ ಹಾಗೂ ಧಾರ್ಮಿಕ ಸಭೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಟಿ.ಜಿ.ಶಿವಶಂಕರಗೌಡ ಮಾತನಾಡಿದರು.

ತಲಕಾಡು, ಅ.28– ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕೆ ಮಠ ಮಾನ್ಯಗಳ ಪಾತ್ರ ಬಹು ದೊಡ್ಡದಿದ್ದು, ಎಲ್ಲಾ ಮಠಗಳು ಹಳ್ಳಿಗಾಡಿನಿಂದ ಹಿಮಾಲಯದವರೆಗೂ ತಮ್ಮದೇ ಆದ ಧಾರ್ಮಿಕ ಮತ್ತು ದಾಸೋಹ ಸೇವೆಯನ್ನು ಸಲ್ಲಿಸುತ್ತಿವೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಗ್ರಾಹಕ ಪರಿಷತ್ತಿನ ಅಧ್ಯಕ್ಷರೂ ಆದ ಗೌರವಾನ್ವಿತ ಟಿ.ಜಿ.ಶಿವಶಂಕರಗೌಡ ತಿಳಿಸಿದರು.

ತಾಲೂಕಿನ ತಲಕಾಡು ಹಸ್ತಿಕೇರಿ ಮಠದಲ್ಲಿ ಲಿಂಗೈಕ್ಯ ಶ್ರೀ ಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ 107ನೇ ಗಣಾರಾಧನೆ ಹಾಗೂ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಉತ್ತರ ಕಾಶಿಗಿಂತಲೂ ಮಿಗಿಲಾದ ದಕ್ಷಿಣ ಕಾಶಿ ತಲಕಾಡು ಮಹಾಮಹಿಮೆಯಿಂದ ಕೂಡಿದ್ದು ಸ್ಕಂಧ ಪುರಾಣದಲ್ಲಿ ವರ್ಣಿತವಾಗಿದೆ ಎಂದು ಬಣ್ಣಿಸಿದರು.

ಚಾರಿತ್ರಿಕ ನಾಡು ತಲಕಾಡು ಗ್ರಾಮದಲ್ಲಿರುವ ಹಸ್ತೀಕೇರಿ ಮಠವೂ ಕೂಡಾ ಪುರಾತನವಾಗಿದ್ದು, ಧಾರ್ಮಿಕ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟವಾದ ಸೇವೆಯನ್ನು ಮಾಡುತ್ತಿದೆ. ನಾನು ಕೂಡ ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ ಭಕ್ತನಾಗಿದ್ದು, ಗ್ರಾಮದವನಾಗಿದ್ದೇನೆ. ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ಮಾಡಿಕೊಟ್ಟ ಸ್ವಾಮಿಗಳಿಗ ಧನ್ಯವಾದಗಳು ಅರ್ಪಿಸುತ್ತೇನೆ ಎಂದು ಅವರು ತಿಳಿಸಿದರು.

ದಕ್ಷಿಣ ಕಾಶಿ ಗಜಾರಣ್ಯ ಕ್ಷೇತ್ರವಾದ ತಲಕಾಡು ಗ್ರಾಮದ ಹಸ್ತಿಕೇರಿ ಮಠದಲ್ಲಿ ಲಿಂಗೈಕ್ಯ ಶ್ರೀ ಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ 107ನೇ ಗಣಾರಾಧನೆಯನ್ನು ಧಾರ್ಮಿಕ ವಿಧಿ ವಿಧಾನದಂತೆ ನೆರವೇರಿಸಲಾಯಿತು. ಮುಖ್ಯ ಅತಿಥಿಗಳಾಗಿ ಪತಂಜಲಿ ಯೋಗಾಶ್ರಮದ ಟ್ರಸ್ಟಿನ ಅಧ್ಯಕ್ಷ ಪ್ರಕಾಶ್ ಯೋಗಿಗಳು ಮಾತನಾಡಿದರು. ಹಸ್ತಿಕೇರಿ ಮಠದ ಸಂಕ್ಷಿಪ್ತ ಪರಿಚಯವನ್ನು ನಿವೃತ್ತ ಶಿಕ್ಷಕ ಕುಮಾರ, ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ ಸಂಕ್ಷಿಪ್ತ ಪರಿಚಯವನ್ನು ತಲಕಾಡಿನ ವೈದ್ಯನಾಥೇಶ್ವರ ದೇವಸ್ಥಾನದ ಪ್ರಧಾನ ಆಗಮಿಕರಾದ ಆನಂದ ದೀಕ್ಷಿತ್ ನಡೆಸಿಕೊಟ್ಟರು.

ಲಿಂಗೈಕ್ಯ ಮಲ್ಲಿಕಾರ್ಜುನ ಸ್ವಾಮಿಗಳು ಭಾವಚಿತ್ರವನ್ನು ದೇಗುಲ ಮಠದ ಚನ್ನಬಸವ ಸ್ವಾಮಿಗಳು ಲೋಕಾರ್ಪಣೆ ಮಾಡಿದರು. ಶ್ರೀ ರುದ್ರಾಕ್ಷಿ ಪೂಜಾ ಮಂಟಪವನ್ನು ನೆಲಮಂಗಲದ ಪವಾಡ ಬಸವಣ್ಣ ದೇವರು ಮಠದ ಸ್ವಾಮಿಗಳು ಶ್ರೀ ಹಸ್ತಿಕೇರಿ ಮಠಕ್ಕೆ ಹಸ್ತಾಂತರಿಸಿದರು. ದಿವ್ಯ ನೇತೃತ್ವವನ್ನು ಕನಕಪುರದ ದೇಗುಲ ಮಠದ ಚನ್ನಬಸವ ಸ್ವಾಮಿಗಳು ವಹಿಸಿದ್ದರು. ದಿವ್ಯ ಸಾಮ್ಮುಖವನ್ನು ನೆಲಮಂಗಲ ಮಠದ ಪವಾಡ ಸಿದ್ದಲಿಂಗ ಸ್ವಾಮಿಗಳು ವಹಿಸಿದ್ದರು. ದಿವ್ಯ ಉಪಸ್ಥಿತಿಯನ್ನು ದೇವನೂರು ಗುರು ಮಲ್ಲೇಶ್ವರ ಮಠದ ಮಹಾಂತ ಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪರಮಪೂಜ್ಯ ಗುರುಗಳಾದ ಶಂಕರ ಸ್ವಾಮಿಗಳು, ಮೃತ್ಯುಂಜಯ ಸ್ವಾಮಿಗಳು, ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ನಂದಿಕೇಶ್ವರ ಸ್ವಾಮಿಗಳು, ಸಿದ್ದರಬೆಟ್ಟ ಕುಂದೂರು ಸ್ವಾಮಿಗಳು, ಧರ್ಮದರ್ಶಿ ಬಸವಣ್ಣ ಹಾಗೂ ಇನ್ನಿತರ ಹರಗುರು ಚರಮೂರ್ತಿಗಳು ಇದ್ದರು. ಧಾರ್ಮಿಕ ಕಾರ್ಯಕ್ರಮ ಮುಗಿದ ಬಳಿಕ ಸರ್ವರಿಗೂ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಮುಂದುವರೆದ ಹುಲಿ ಆರ್ಭಟ

ಹೊಸ ಹೊಳಲು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿ



ಹುಲಿ ದಾಳಿಗೆ ಬಲಿಯಾಗಿರುವ ಹಸು.

ಹೆಚ್.ಡಿ.ಕೋಟೆ: ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಹುಲಿಯ ಆರ್ಭಟ ಮುಂದುವರಿದಿದ್ದು, ಹಸುವೊಂದನ್ನು ಬಲಿ ತೆಗೆದುಕೊಂಡಿದ್ದು, ಮತ್ತೊಂದು ಹಸುವನ್ನು ಗಾಯಗೊಳಿಸಿದೆ. ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ಈ ಘಟನೆ ಸಂಭವಿಸಿದೆ.

ಹೊಸ ಹೊಳಲು ಗ್ರಾಮದ ರೈತ ಕೃಷ್ಣೇಗೌಡ ಅವರಿಗೆ ಸೇರಿದ ಒಂದು ಹಸು ಹುಲಿ ದಾಳಿಯಿಂದ ಸಾವನ್ನಪ್ಪಿದರೆ, ಮತ್ತೊಂದು ಹಸು ಗಾಯಗೊಂಡಿದೆ. ರೈತ ಕೃಷ್ಣೇಗೌಡರು ತಮ್ಮ ಜಮೀನಿನಲ್ಲಿ ಎರಡು ಹಸುಗಳನ್ನು ಮೇಯಿಸಲು ಬಿಟ್ಟಿದ್ದರು. ಸಂಜೆ ವೇಳೆಗೆ ಒಂದು ಹಸು ಗಾಬರಿಯಿಂದ ಮನೆಗೆ ಬಂದಿದೆ. ಮತ್ತೊಂದು ಹಸು ಮನೆಗೆ ಬಾರದ ಕಾರಣ ಗಾಬರಿಗೊಂಡು ಹಸುವನ್ನು ಗಮನಿಸಿದಾಗ ಹಸುವಿನ ಕಾಲಿಗೆ ಗಾಯವಾಗಿರುವುದನ್ನು ಕಂಡು ಮತ್ತೊಂದು ಹಸುವಿಗೆ ಹುಡುಕಾಡಿದ್ದಾರೆ. ಗ್ರಾಮಸ್ಥರು ಸೇರಿ ಹಸುವನ್ನು ಹುಡುಕಾಟ ನಡೆಸಿದ್ದಾರೆ.

ಆಗ ಹಸುವನ್ನು ಹುಲಿ ತಿಂದು ಹಾಕಿರುವುದನ್ನು ಕಂಡು ಗಾಬರಿಗೊಂಡಿದ್ದಾರೆ. ಈ ಎರಡು ಹಸುಗಳನ್ನು ಕಟ್ಟಿಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದೆವು. ಈಗ ಹುಲಿ ಒಂದು ಹಸುವನ್ನು ಕೊಂದು ಹಾಕಿ ಮತ್ತೊಂದು ಹಸುವಿನ ಕಾಲಿಗೆ ಗಾಯಗೊಳಿಸಿದೆ. ಹೀಗಾದರೆ ಜೀವನ ಸಾಗಿಸುವುದು ಹೇಗೆ ಎಂದು ರೈತ ಕೃಷ್ಣೆಗೌಡರ ಪತ್ನಿ ಅಳಲು ತೋಡಿಕೊಂಡಿದ್ದಾರೆ. ಸರ್ಕಾರ ನಮಗೆ ಪರಿಹಾರ ಕೊಡಿಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಹುಲಿ ಹಾವಳಿ ಜಾಸ್ತಿಯಾಗಿ ರೈತರನ್ನು ಬಲಿ ತೆಗೆದುಕೊಳ್ಳುವುದರ ಜೊತೆಗೆ ರೈತರು ಸಾಲ ಸೋಲ ಮಾಡಿ ಸಾಕಿರುವ ಹಸುಗಳನ್ನು ಬಲಿ ತೆಗೆದುಕೊಳ್ಳುತ್ತಿದೆ. ರೈತರು ಜೀವನ ಸಾಗಿಸಲು ಸಂಕಷ್ಟ ಎದುರಿಸುತ್ತಿದ್ದಾರೆ, ಸರ್ಕಾರ ಈ ನರಭಕ್ಷಕ ಹುಲಿಗಳನ್ನು ಸೆರೆ ಹಿಡಿಯಲು ಹೆಚ್ಚು ಗಮನ ಹರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಎಫ್ಐಆರ್ ದಾಖಲಾದರೂ ಆರೋಪಿಗಳನ್ನು ಬಂಧಿಸದ ಪೊಲೀಸರು: ಆರೋಪ



ತಿ.ನರಸೀಪುರ, ಅ.28– ಇತ್ತೀಚಿಗೆ ನಡೆದ ಗ್ರಾಮಸಭೆಯೊಂದರಲ್ಲಿ ಸಾರ್ವಜನಿಕವಾಗಿ ತಮ್ಮ ಸೀರೆ ಸೆರಗು ಎಳೆದು ದೈಹಿಕವಾಗಿ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸದೇ ತಲಕಾಡು ಪೊಲೀಸರು ಅವರನ್ನು ರಾಜಾರೋಷವಾಗಿ ತಿರುಗಾಡಲು ಬಿಟ್ಟಿದ್ದಾರೆಂದು ಸಾಮಾಜಿಕ ಕಾರ್ಯಕರ್ತೆ ಕೊಳತ್ತೂರು ಜ್ಯೋತಿ ರಮೇಶ್ ಗಂಭೀರ ಆರೋಪ ಮಾಡಿದ್ದಾರೆ.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆನಂದ್ ಕುಮಾರ್ ಮೇಲೆ ಸಾಲು ಸಾಲು ಆರೋಪ ಮಾಡಿದ ಜ್ಯೋತಿಯವರು ಗ್ರಾಮದ ಮುಖಂಡರೆನಿಸಿಕೊಂಡು ತಮ್ಮ ಮೇಲೆ ಸಾರ್ವಜನಿಕ ಹಲ್ಲೆ ಮಾಡಿದ ಆರೋಪಿಗಳ ಮೇಲೆ ಎಫ್ಐಆರ್ ದಾಖಲಾಗಿದ್ದರೂ ಸರ್ಕಲ್ ಇನ್ಸ್‌ಪೆಕ್ಟರ್ ಅವರನ್ನು ಬಂಧಿಸದೇ ಆರೋಪಿಗಳ ರಕ್ಷಣೆಗೆ ನಿಂತಿದ್ದಾರೆ ಎಂದು ಆರೋಪಿಸಿದರು.

ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆ ನಡೆಯುತ್ತಿದ್ದ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ನಾನು ಕೆಲ ಸಮಸ್ಯೆಗಳ ಬಗ್ಗೆ ಅಧ್ಯಕ್ಷರು ಮತ್ತು ಪಿಡಿಓ ಬಳಿ ಪ್ರಶ್ನೆ ಕೇಳಿದ್ದೆ. ಅದಕ್ಕೆ ಅವರು ದಾಖಲೆ ಸಮೇತ ಉತ್ತರ ಕೊಡುತ್ತಿದ್ದ ವೇಳೆ ಗ್ರಾಮದ ಮಹಿಳೆಯೊಬ್ಬರು ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮೊಂದಿಗೆ ವಾಗ್ವಾದಕ್ಕಿಳಿದರು. ಅವರಿಗೆ ಶಾಂತ ರೀತಿಯಲ್ಲಿ ಉತ್ತರ ಕೊಡುತ್ತಿದ್ದ ವೇಳೆ ಏಕಾಏಕಿ ಅಲ್ಲಿಗೆ ಬಂದ ಐವರು ಮುಖಂಡರು ಹಲ್ಲೆ ಮಾಡಿದರು. ನನ್ನ ರಕ್ಷಣೆಗೆ ಬಂದ ನನ್ನ ಪತಿಯ ಮೇಲೂ ಹಲ್ಲೆ ಮಾಡಿ ಪ್ರಾಣಭಯ ಒಡ್ಡಿದರು. ಹಲ್ಲೆಕೋರರಿಂದ ಪಾರಾಗಲು ಪ್ರಯತ್ನ ಮಾಡಿದೆವಾದರೂ ಅದೂ ಸಾದ್ಯವಾಗಲಿಲ್ಲ. ದಾರಿ ಕಾಣದಾದಾಗ ಪಂಚಾಯ್ತಿ ಕಚೇರಿ ಒಳಗೆ ಅವಿತು ಕುಳಿತುಕೊಳ್ಳುವ ಪರಿಸ್ಥಿತಿ ಎದುರಾಯಿತು ಎಂದು ತಮ್ಮ ಅಳಲು ತೋಡಿಕೊಂಡರು. ಈ ಬಗ್ಗೆ ದೂರು ನೀಡಿ ಎಫ್ಐಆರ್ ದಾಖಲಾಗಿದ್ದರೂ ಪೊಲೀಸರು ಕ್ರಮ ಜರುಗಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದರು.

ಜೈ ಕರ್ನಾಟಕ ಕನ್ನಡಾಂಬೆ ಮಹಾಸೇನೆ ತಾಲೂಕು ಅಧ್ಯಕ್ಷ ಎಂ.ಮಾದೇಶ್, ರಾಜ್ಯ ಪದಾಧಿಕಾರಿ ಕಲ್ಲುಣಿ ಸುರೇಶ್, ಮಹಿಳಾ ಘಟಕ ಅಧ್ಯಕ್ಷೆ ಕೆ.ಶೋಭಾ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಣಿಕಂಠ ಇದ್ದರು.

ನಾಟಿ ಕೋಳಿ ಮರಿಗಳ ವಿತರಣೆ



ರೈತ ಮಹಿಳೆಯರಿಗೆ ಶಾಸಕ ದರ್ಶನ್ ನಾಟಿ ಕೋಳಿ ಮರಿಗಳನ್ನು ವಿತರಿಸಿದರು.

ನಂಜನಗೂಡು, ಅ.28– ಗ್ರಾಮೀಣ ಭಾಗದ ರೈತ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ ಹಾಗೂ ನಾಟಿ ಕೋಳಿಯ ತಳಿಯನ್ನು ಪ್ರೋತ್ಸಾಹಿಸಿ ಸಂರಕ್ಷಿಸುವ ಸಲುವಾಗಿ ಪಶು ಇಲಾಖೆಯ ವತಿಯಿಂದ ರೈತ ಮಹಿಳೆಯರಿಗೆ ಉಚಿತವಾಗಿ ನಾಟಿ ಕೋಳಿ ಮರಿಗಳನ್ನು ವಿತರಿಸಲಾಗುತ್ತಿದೆ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕು ಪಂಚಾಯಿತಿ ಆವರಣದಲ್ಲಿ ಉಚಿತವಾಗಿ ನಾಟಿ ಕೋಳಿಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ನಾಟಿ ಕೋಳಿ ವಿತರಿಸಿ ಮಾತನಾಡಿದರು.

ಕೃಷಿ ಕಾಯಕದ ಜೊತೆಗೆ ಹೈನುಗಾರಿಕೆಯನ್ನು ಉಪ ಕಸುಬಾಗಿ ಅನುಸರಿಸುವುದರಿಂದ ರೈತರು ಆರ್ಥಿಕವಾಗಿ ಸದೃಢಗೊಳ್ಳಬಹುದು, ಜೊತೆಗೆ ಇಂದಿನ ಆಧುನಿಕ ಯುಗದಲ್ಲಿ ಫಾರಂ ಕೋಳಿಗಳ ಸೇವನೆಯಿಂದಾಗಿ ಜನರು ಹಲವಾರು ಕಾಯಿಲೆಗೆ ತುತ್ತಾಗುತ್ತಿದ್ದಾರೆ, ನಾಟಿ ಕೋಳಿಯ ತಳಿಯಿಂದ ನಮ್ಮ ಆರೋಗ್ಯ ಸದೃಢಗೊಳ್ಳಲಿದೆ. ಆದ್ದರಿಂದ ನಾಟಿ ಕೋಳಿಯನ್ನು ಉಳಿಸಿ ಬೆಳೆಸಿ ಸಂರಕ್ಷಿಸುವ ಸಲುವಾಗಿ ಅಲ್ಲದೆ ಗ್ರಾಮೀಣ ಭಾಗದ ರೈತ ಮಹಿಳೆಯರ ಆರ್ಥಿಕವಾಗಿ ಸಬಲೀಕರಣ ಗೊಳಿಸುವ ಸಲುವಾಗಿ ಪಶುಪಾಲನ ಇಲಾಖೆ ಹಾಗೂ ಕುಕ್ಕುಟ ಮಹಾಮಂಡಲ ವತಿಯಿಂದ ಉಚಿತವಾಗಿ ಐದು ವಾರಗಳ ನಾಟಿ ಕೋಳಿಗಳ ಮರಿಗಳನ್ನು ವಿತರಿಸಲಾಗುತ್ತಿತ್ತು ರೈತ ಮಹಿಳೆಯರು ಇದರ ಸದುಪಯೋಗವನ್ನು ಪಡೆದುಕೊಂಡು ಹೈನುಗಾರಿಕೆಯಲ್ಲಿ ತೊಡಗಿ ಆರ್ಥಿಕವಾಗಿ ಸದೃಢಗೊಳ್ಳಬೇಕು ಎಂದು ಸಲಹೆ ನೀಡಿದರು. ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮೋಹನ್ ಕುಮಾರ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ತಾಪಂ ಇಓ ಜೆರಾಲ್ಡ್ ರಾಜೇಶ್, ಪಶುಪಾಲನ ಇಲಾಖೆಯ ವೈದ್ಯಾಧಿಕಾರಿಗ ಳಾದ ಶರಣಬಸಪ್ಪ, ವಿವೇಕ್, ಮುಖಂಡರಾದ ತಗುಡೂರುನಾಯಕ, ನಾಗರಾಜು, ಲಕ್ಷ್ಮಣ, ಕಳಲೆ ರಾಜೇಶ್, ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ರೆಸಾರ್ಟ್‌ಗಳ ನಿರ್ಮಾಣದಿಂದ ಕಾಡು ಬಿಟ್ಟು ನಾಡಿಗೆ ಬರುವ ಪ್ರಾಣಿಗಳಿಂದ ಮಾನವ ಹತ್ಯೆ



ಕುರುಬೂರು ಶಾಂತಕುಮಾರ್ ಮೃತನ ಕುಟುಂಬಕ್ಕೆ ಸಾಂತ್ವನ ಹೇಳುತ್ತಿರುವುದು.

ಸರಗೂರು, ಅ.28– ಅರಣ್ಯ ಇಲಾಖೆ ನಿರ್ಲಕ್ಷ್ಯ ಹಾಗೂ ಅರಣ್ಯದೊಳಗೆ ರೆಸಾರ್ಟ್‌ಗಳ ನಿರ್ಮಾಣದಿಂದ ಕಾಡು ಪ್ರಾಣಿಗಳು ಕಾಡಿನಿಂದ ನಾಡಿಗೆ ಬಂದು ಮಾನವ ಹತ್ಯೆ ಮಾಡುತ್ತಿವೆ ಎಂದು ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಪಾದಿಸಿದ್ದಾರೆ.

ಕುರುಬೂರು ಶಾಂತಕುಮಾರ್ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳ ನಿಯೋಗದ ಜೊತೆ ತಾಲೂಕಿನ ಬೆಣ್ಣೆಗೆರೆ ಗ್ರಾಮದ ಮೃತ ರಾಜಶೇಖರ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

ಮೋಜಿಗಾಗಿ ಕಾಡಿನ ಒಳಗೆ ರೆಸಾರ್ಟ್ ನಿರ್ಮಾಣ ಮಾಡಲಾಗಿದೆ. ಇದರಿಂದ ಜನರ ಸಂಚಾರ ಹೆಚ್ಚಾದ ಕಾರಣ ಪ್ರಾಣಿಗಳು ಗಾಬರಿಯಿಂದ ನಾಡಿಗೆ ಬಂದು ಮಾನವ ಹತ್ಯೆ ಮಾಡುತ್ತಿವೆ

ಹುಲಿ ದಾಳಿಗೆ ಪ್ರಾಣ ಕಳೆದುಕೊಂಡ ರಾಜಶೇಖರ ಅವರ ಕುಟುಂಬಕ್ಕೆ ಸರ್ಕಾರ ತಕ್ಷಣ ಐವತ್ತು ಲಕ್ಷ ರೂ. ಪರಿಹಾರ ನೀಡಿ ಅವರ ಕುಟುಂಬಕ್ಕೆ ಸರ್ಕಾರಿ ಹುದ್ದೆ ನೀಡಬೇಕು ಎಂದು ಒತ್ತಾಯಿಸುತ್ತೇನೆ. ಇಂತಹ ಘಟನೆಗಳು ಮರುಕಳಿಸಬಾರದು ಯಾವುದೇ ಜೀವಹಾನಿ ಆಗಬಾರದು, ಅರಣ್ಯ ಇಲಾಖೆ ಸೂಕ್ತ ಕ್ರಮ ವಹಿಸಬೇಕು. ಸರ್ಕಾರ ಹೆಚ್ಚು ಸಾವು ನೋವು ಸಂಭವಿಸುವ ಕಾಡಂಚಿನ ಗ್ರಾಮಗಳಬಗ್ಗೆ ಮಾಹಿತಿ ಕಲೆಹಾಕಿ ರಕ್ಷಣೆಗೆ ಮುಂದಾಗಬೇಕು. ಮತ್ತೆ ನಿರ್ಲಕ್ಷ ತೋರಿದರೆ ಆರಣ್ಯ ಇಲಾಖೆ ಕಚೇರಿಗಳನ್ನೆ ಬಂದುಮಾಡಿಸಲಾಗುವುದು ಎಂದು ತೀಕ್ಷ್ಣವಾಗಿ ಪ್ರತಿಕ್ರಿಯೆ ಕೊಟ್ಟರು

ನಿಯೋಗದಲ್ಲಿ ನಾಗರಾಜ್, ನೀಲಕಂಠಪ್ಪ, ರವಿಕುಮಾರ್, ರಾಜೇಶ್, ಅಜಿತ್ ಕುಮಾರ್, ಸುರೇಶ್, ಶೆಟ್ಟಿ, ಸಿದ್ದೇಶ್, ವಿಜಯೇಂದ್ರ, ಮಹದೇವಸ್ವಾಮಿ, ಪ್ರದೀಪ್, ಅಂಬಳೆ ಮಂಜುನಾಥ್, ಸುನಿಲ್, ನಂಜುಂಡಸ್ವಾಮಿ, ಸಿದ್ದರಾಮ ಸರಗೂರು ಮಂಜು, ಸೋಮ ಮುಂತಾದವರಿದ್ದರು.

ಕೆಪಿಸಿಸಿ ಎಸ್‌ಸಿ ವಿಭಾಗಕ್ಕೆ ನೇಮಕ



ತಿ.ನರಸೀಪುರ, ಅ.28– ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕರಾಗಿ ವ್ಯಾಸರಾಜಪುರ ಗ್ರಾಮದ ಹಿರಿಯ ಮುಖಂಡರಾದ ವಕೀಲ ರಂಗನಾಥ್ ಪ್ರಸಾದ್ ಬಿ.ಎಸ್. ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಸಂಚಾಲಕ ಕೆ.ರಾಜು, ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಅನುಮೋದನೆ ಮೇರೆಗೆ ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್.ಧರ್ಮಸೇನ ತಿಳಿಸಿದ್ದಾರೆ.

ಹಾಡ್ಯ ಪಿಎಸಿಎಸ್: ಬಿಜೆಪಿ ಜಯಭೇರಿ



ವಿಜೇತ ಬಿಜೆಪಿ ಸದಸ್ಯರು ವಿಜಯೋತ್ಸವ ನಡೆಸಿದರು.

ಮಲ್ಕುಂಡಿ: ಸಮೀಪದ ಹಾಡ್ಯ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಜಯ ಗಳಿಸಿದ್ದಾರೆ.

12 ನಿರ್ದೇಶಕರ ಸ್ಥಾನಗಳಿಗೆ ಶನಿವಾರ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರಕ್ಕೆ 22 ನಾಮಪತ್ರ ಸಲ್ಲಿಸಿದ್ದು ಸಾಲಗಾರರಲ್ಲದ ಕ್ಷೇತ್ರಕ್ಕೆ 3 ನಾಮಪತ್ರ ಸಲ್ಲಿಕೆಯಾಗಿತ್ತು.

ಇದರಲ್ಲಿ ಬಿಜೆಪಿ ಬೆಂಬಲಿತ 8 ಮಂದಿ ಜಯಭೇರಿ ಬಾರಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 4 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಹೆಚ್.ಎಂ.ಶಂಕರ್, ಪಿ ಚಿಕ್ಕಣ್ಣ, ಶಶಿಧರ್, ಬಿ.ಬಸವರಾಜ್, ಆಶೋಕ್, ಪದ್ಮ.ಕೆ, ವಿರೂಪಕ್ಷ, ಚಿನ್ನಸ್ವಾಮಿ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಸುಮ ಘೋಷಣೆ ಮಾಡಿದರು.

ನೂತನ ನಿರ್ದೇಶಕ ಹೆಚ್.ಎಂ.ಶಂಕರ್ ಮಾತನಾಡಿ ಹುರ ಜಿಪಂ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪಕ್ಷ ದೂಳಿಪಟವಾಗಿದ್ದು, ಕಾಂಗ್ರೆಸ್ ಸರ್ಕಾರ ಸಹಕಾರ ಸಂಘಕ್ಕೆ ಯಾವುದೇ ಅನುದಾನ ನೀಡದೆ ರೈತ ವಿರೋಧಿ ದೊರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದಾರೆ ಇದು ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ದಿಕ್ಸೂಚಿಯಾಗಿದೆ. ಎಲ್ಲಾ ಸದಸ್ಯರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡ್ಯೊಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೆವೆ ಎಂದು ತಿಳಿಸಿದರು. ಈ ವೇಳೆ ಹುರ ಚಂದ್ರು, ಅಕ್ಷಯ್ ಪಾಟೀಲ್, ಶಿವಕುಮಾರ್, ಸಿಇಓ ಎಂ.ಪಿ.ವೆಂಕಟರಾಜ್ಯ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮತಗಳ್ಳತನ ವಿರೋಧಿಸಿ ಕೋಟೆಯಲ್ಲಿ ಸಹಿ ಸಂಗ್ರಹ ಅಭಿಯಾನ

ಆರ್‌ಎಸ್‌ಎಸ್ ಕಿತ್ತೊಗೆಯಲು ಯುವ ಕಾಂಗ್ರೆಸ್ ಪಣ ತೊಡಬೇಕು



ಮತ ಕಳವು ವಿರುದ್ಧ ಸಹಿ ಸಂಗ್ರಹಣೆ ಕಾರ್ಯಕ್ರಮದಲ್ಲಿ ಯುವ ಕಾಂಗ್ರೆಸ್‌ನ ನೂತನ ಪದಾಧಿಕಾರಿಗಳು ಪದಗ್ರಹಣ ಮಾಡಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ: ದೇಶದಲ್ಲಿ ಹಿಂದುತ್ವದ ಹೆಸರಿನಲ್ಲಿ ಆರ್‌ಎಸ್‌ಎಸ್ ಬಿತ್ತುತ್ತಿರುವ ವಿಷ ಬೀಜವನ್ನು ಕಿತ್ತೊಗೆಯಲು ಯೂತ್ ಕಾಂಗ್ರೆಸ್ ಪಣತೊಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಎಚ್.ಡಿ.ಕೋಟೆ, ಸರಗೂರು ತಾಲೂಕು ಯುವ ಕಾಂಗ್ರೆಸ್ ಘಟಕ ಮತ್ತು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ವತಿಯಿಂದ ನಡೆದ ಯುವ ಸಮ್ಮೇಳನ ಮತ್ತು ಯುವ ಕಾಂಗ್ರೆಸ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಮತ ಕಳವು ವಿರುದ್ಧ ಸಹಿ ಸಂಗ್ರಹ ಚಳುವಳಿ ಉದ್ದೇಶಿಸಿ ಮಾತನಾಡಿದರು.

ಯೂತ್ ಕಾಂಗ್ರೆಸ್‌ಗೆ ಪಕ್ಷದಲ್ಲಿ ವಿಶೇಷ ಸ್ಥಾನಮಾನವಿದೆ ಅವರಿಂದ ವಿಶೇಷ ಸೇವೆ ಅಗತ್ಯವಿದ್ದು ಆರ್‌ಎಸ್‌ಎಸ್ ಅನ್ನು ಬುಡ ಸಮೇತ ಕಿತ್ತೊಗೆಯಲು ಸಂಪೂರ್ಣ ಶ್ರಮಿಸಬೇಕು ಎಂದರು.

ಮತ ಕಳವು ವಿರುದ್ಧ ಹೋರಾಡಲು ಸಹಿ ಸಂಗ್ರಹಣೆ ಮಾಡುವ ಚಳವಳಿಯನ್ನು ಎಲ್ಲಾ ಕಡೆ ನಡೆಸಲಾಗುತ್ತಿದೆ, ಮುಕ್ತಚುನಾವಣೆಯನ್ನು ನಡೆಸುವ ಉದ್ದೇಶದಿಂದ ಮತಗಳ್ಳತನವನ್ನು ತಡೆಯಬಹುದು ಎಂದರು.

ಪ್ರತಿ ತಾಲೂಕಿನಿಂದ 25 ಸಾವಿರ ಸಹಿ ಸಂಗ್ರಹಣೆ ಗುರಿ ಹೊಂದಲಾಗಿದ್ದು ಅದರ ಕಾರ್ಯ ನಿರಂತರವಾಗಿ ಬಿಡುವಿಲ್ಲದೇ ನಡೆಯುತ್ತಿದೆ, ಇದರ ಜೊತೆ ಜೊತೆಗೆ ಮತಕಳ್ಳತನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ ಯುವಕರು ದೇಶದಾದ್ಯಂತ ಕಾಂಗ್ರೆಸ್ ಬೆಂಬಲಿಸುವ ಮೂಲಕ ರಾಹುಲ್ ಗಾಂಧಿಯವರನ್ನು ಪ್ರಧಾನಿ ಮಾಡಬೇಕು ಎಂದರು.

ಶಾಸಕ ದರ್ಶನ್ ದೃವನಾರಾಯಣ್ ಮಾತನಾಡಿ ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಎದುರಾಗಿದ್ದು ಮುಂದಿನ ದಿನಗಳಲ್ಲಿ ಸರ್ಕಾರವು ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಯೋಜನೆ ರೂಪಿಸಲಿದೆ ಎಂದರು.

ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾಗಿ ಕಂದೇಗಾಲ ಶಿವರಾಜು, ಉಪಾಧ್ಯಕ್ಷರಾಗಿ ಶಶಿ ಪಟೇಲ್, ಯಾಸೀನ್, ಎಚ್.ಡಿ.ಕೋಟೆ ಯುತ್ ಅಧ್ಯಕ್ಷರಾಗಿ ಅಜರುದ್ದೀನ್, ಉಪಾಧ್ಯಕ್ಷರಾಗಿ ಎಚ್.ವಿ.ಮನೋಜ್, ಸರಗೂರು ಯೂತ್ ಅಧ್ಯಕ್ಷರಾಗಿ ನವೀನ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಮಹದೇವಸ್ವಾಮಿ ಪದಗ್ರಹಣ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್, ಕೋಟೆ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮನುಗನಹಳ್ಳಿ ಮಾದಪ್ಪ, ಮುಖಂಡರಾದ ನಂದಿನಿ ಚಂದ್ರಶೇಖರ್, ಹಿರೇಹಳ್ಳಿ ಸೋಮೇಶ್, ಆನಂದ್, ಆಸಿಫ್ ಇಕ್ಬಾಲ್, ಎಚ್.ಸಿ.ನರಸಿಂಹಮೂರ್ತಿ, ಶಿವಪ್ಪ ಕೋಟೆ, ಕ್ಯಾತನಹಳ್ಳಿ ನಾಗರಾಜು,ಪ್ರದೀಪ್ ನಾಗನಹಳ್ಳಿ, ಜಿನ್ನಹಳ್ಳಿ ರಾಜನಾಯಕ, ನಾಗರಾಜು, ಚೆಲುವರಾಜು, ಚಾಮರಾಜು, ಶಫಿಕೋಟೆ, ಸ್ಟುಡಿಯೋ ಪ್ರಕಾಶ್, ಅನಿಲ್, ಸುರೇಶ್, ಚಾ.ನಂಜುಂಡಮೂರ್ತಿ, ಬಾಲಯ್ಯ, ರವಿ, ದೀಪಕ್, ಬಸಪ್ಪ ಬಸವರಾಜು, ಮರಿದೇವಯ್ಯ, ಅಶೋಕ್, ಕೆಂಡಗಣ್ಣೇಗೌಡ, ಉಮೇಶ್, ಶಂಕರ್, ಶಶಿಪಟೇಲ್, ವಕೀಲ ಶಿವರಾಜು, ಅಬೀಬ್, ಬಸವರಾಜು, ಮಲ್ಲೇಶ್, ನಾಗರಾಜು, ಗುರುಸ್ವಾಮಿ, ಶಾಂತಮ್ಮ, ಅಮಿರ್ ಸುಹೆಲ್ ಇದ್ದರು.

ಗುರುಮೂರ್ತಿ ನಿಧನ



ಪಿರಿಯಾಪಟ್ಟಣ: ತಾಲೂಕಿನ ಅವರ್ತಿ ಗ್ರಾಮದ ಪಟೇಲ್ ಗುರುಮೂರ್ತಿ(65) ಸೋಮವಾರ ಹೃದಯಘಾತದಿಂದ ನಿಧನ ಹೊಂದಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಪುತ್ರ ಆಸ್ಟ್ರೇಲಿಯಾದಿಂದ ಬರಬೇಕಾಗಿರುವುದರಿಂದ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಮೈಸೂರು ಮಿತ್ರ

ಮಾದರಿ ಗ್ರಾಮ ಕಣ್ಣಿಗೆ ಕಟ್ಟುವ ಅಪೂರ್ವ ಮಳಿಗೆ

ದಸರಾ ವಸ್ತುಪ್ರದರ್ಶನ ವಿಶೇಷ



ಕೂಸಿನ ಮನೆ ಹಾಗೂ ನಮ್ಮೂರ ಮಾದರಿ ಶಾಲೆ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಿರ್ಮಿಸಿರುವ ಮಾದರಿ ಗ್ರಾಮ ಮಳಿಗೆ

ಮೈಸೂರು, ಅ.28(ವಿವಿಹೆಚ್)– ಶಾಲೆ, ಕುಡಿಯುವ ನೀರು, ರಸ್ತೆ, ಬಸ್ ನಿಲ್ದಾಣದಲ್ಲಿ ಗ್ರಂಥಾಲಯ, ಆಧುನಿಕ ಕೃಷಿ ಪದ್ಧತಿ ಸೇರಿದಂತೆ ಸಕಲ ಮೂಲ ಸೌಕರ್ಯಗಳನ್ನೊಳಗೊಂಡ ಮಾದರಿ ಗ್ರಾಮವೊಂದು ಹೇಗಿರಬೇಕು? ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಬಳಸಿಕೊಂಡು ಗ್ರಾಮವನ್ನು ಹೇಗೆಲ್ಲಾ ಅಭಿವೃದ್ಧಿ ಮಾಡಬಹುದು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ನಿರ್ಮಿಸಿರುವುದನ್ನು ನೋಡಿದರೆ ಒಮ್ಮೆಲೆ ಅಚ್ಚರಿಗೊಳಗಾಗುವುದಂತೂ ನಿಜ...

ಇದು ನಗರದ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಿರ್ಮಿಸಿರುವ ಮಾದರಿ ಗ್ರಾಮದ ಮಳಿಗೆಯ ಚಿತ್ರಣ.

ಹಳ್ಳಿಗಳಿಂದ ಯುವಜನರು ವಲಸೆ ಹೋಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಲು ಯೋಜಿಸಿರುವ ಇಲಾಖೆಯ ಯೋಜನೆಗಳನ್ನು ಇಲ್ಲಿ ನೋಡುಗರ ಮನ ಮುಟ್ಟುವಂತಿದೆ.

ಮಳಿಗೆ ಪ್ರವೇಶಕ್ಕೆ ಮುನ್ನವೇ ಅರಳಿದ ಸೂರ್ಯಕಾಂತಿ ಹೂಗಳ ಮಾದರಿಗಳ ಅದ್ದೂರಿ ಸ್ವಾಗತವೇ ಆಕರ್ಷಕವಾಗಿವೆ. ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಗ್ರಾಮೀಣ ಜನರನ್ನೊಳಗೊಂಡ ಕಟೌಟ್ ಮಾದರಿಗಳು ಅವುಗಳ ಮೇಲೆ ಕರ್ನಾಟಕ ನಕ್ಷೆ ಮತ್ತು ಅದರೊಳಗೆ ಮಹಾತ್ಮಗಾಂಧಿ ಕಲಾಕೃತಿಗಳು ಮಳಿಗೆಯೊಳಗೆ ಹೊಕ್ಕಿ ನೋಡುವ ಆಸೆಯನ್ನು ಇಮ್ಮಡಿಗೊಳಿಸುವುದಂತೂ ನಿಜ.

ಇವುಗಳ ಭವ್ಯ ಸ್ವಾಗತದೊಂದಿಗೆ ಮಳಿಗೆಯ ಒಳಹೊಕ್ಕರೆ, ನವ ಗ್ರಾಮವೊಂದಕ್ಕೆ ಪ್ರವೇಶ ಮಾಡಿದಂತೆ ಭಾಸವಾಗುತ್ತದೆ. ಜನವಸತಿ ಪ್ರದೇಶಕ್ಕೆ ಅಗತ್ಯವಾದ ಸರ್ವಸ್ವವೂ ಅಲ್ಲಿ ಕಾಣಸಿಗುತ್ತದೆ. ಎಡಭಾಗದಲ್ಲಿ 'ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ– ನಮ್ಮೂರು' ಹಾಗೂ 'ಕೂಸಿನ ಮನೆ' ಅಂದ ಕಣ್ಮನ ಸೆಳೆಯುತ್ತದೆ. ಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡುತ್ತಿರುವ ದೃಶ್ಯ ಎಲ್ಲರ ಹುಬ್ಬೇರುವಂತೆ ಮಾಡುತ್ತದೆ. 'ಕೂಸಿನ ಮನೆ' ಬಾಗಿಲ ಮೇಲೆ ಕನ್ನಡ ವರ್ಣಮಾಲೆಯ ನಾಲ್ಕಾರು ಅಕ್ಷರಗಳು, ನೆಲದ ಮೇಲೆ ಮಕ್ಕಳ ಆಟಿಕೆಗಳು, ಆಟವಾಡುತ್ತಿರುವ ಮಗುವನ್ನು ಕಣ್ತುಂಬುತ್ತಿರುವ ಮಹಿಳೆ ಚಿತ್ರಣ ಮುದಗೊಳಿಸುವಂತಿವೆ.



ನ್ಯಾಯಬೆಲೆ ಮತ್ತು ಪೆಟ್ಟಿಗೆ ಅಂಗಡಿ

18 ದಿನಗಳ ಪರಿಶ್ರಮದ ಮಳಿಗೆ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಳಿಗೆಯು ಮಂಗಳೂರು ಕಲಾವಿದ ದೇವಿಪ್ರಸಾದ್ ಶೆಟ್ಟಿ ಅವರ ತಂಡದಿಂದ ಮೂಡಿ ಬಂದಿದೆ. ಸುಮಾರು 20 ವರ್ಷಗಳಿಂದ ದಸರಾ ವಸ್ತುಪ್ರದರ್ಶನದಲ್ಲಿ ಮಳಿಗೆಗಳನ್ನು ನಿರ್ಮಿಸುತ್ತಿದ್ದಾರೆ. ತಂಡದಲ್ಲಿ 130 ಮಂದಿ ಇದ್ದಾರೆ. ಅದರಲ್ಲಿ ಸಹಾಯಕರು, ಬಡಗಿಗಳು, ವೆಲ್ಡಿಂಗ್ ಕಾರ್ಮಿಕರು, ಕಲಾವಿದರು, ಬಣ್ಣಬಳಿಯುವವರು ಇದ್ದಾರೆ. ಈ ಮಳಿಗೆಯನ್ನು 18 ದಿನಗಳಲ್ಲಿ ನಿರ್ಮಿಸಲಾಗಿದೆ.



ಮಳಿಗೆ ವೀಕ್ಷಣೆ ಮಾಡುತ್ತಿರುವ ಜನರು

ಹಾಗೆ ಮುಂದೆ ಸಾಗಿದರೆ, ಪಂಚಾಯಿತಿ ಕಟ್ಟೆಯಲ್ಲಿ ಕುಳಿತು ಪತ್ರಿಕೆ ಓದುತ್ತಿರುವುದು, ಅರಿವು ಕೇಂದ್ರ, ಸ್ತ್ರೀ ಶಕ್ತಿ ಭವನ, ನ್ಯಾಯಬೆಲೆ ಅಂಗಡಿ, ಕಿರಾಣಿ, ಕುಂಬಾರಿಕೆ, ಹಾಲು ಉತ್ಪಾದಕರ ಒಕ್ಕೂಟ, ಅಂಚೆ ಕಚೇರಿ, ಆಶ್ರಯ ಮನೆ, ಬಯಲು ರಂಗಮಂದಿರ ಹಾಗೂ ಸಾರ್ವಜನಿಕ ಶೌಚಾಲಯವಿದ್ದರೆ, ಬಲ ಭಾಗದಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣ, ಗ್ರಾಮ ಪಂಚಾಯಿತಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಮಿನಿ ಟ್ಯಾಂಕ್‌ನಲ್ಲಿ ನೀರು ಸದಾ ಸುರಿಯುತ್ತಿರುವುದು, ಮಳೆ ನೀರು ಕೊಯ್ಲು ಮನೆ, ಘನ ತ್ಯಾಜ್ಯ ಸಂಸ್ಕರಣಾ ಘಟಕ, ಸುಂದರ ರಸ್ತೆಗಳು, ಮಹಿಳಾ ಸಂಘದಲ್ಲಿ ಸದಸ್ಯರ ಚರ್ಚೆ, ಸ್ಮಶಾನ ಅಭಿವೃದ್ಧಿ, ಕೆರೆ–ಕಟ್ಟೆಗಳ ನವೀಕರಣ, ಗೋದಾಮು, ಕೃಷಿ ಭೂಮಿ ನೋಡುಗರನ್ನು ತನ್ನತ್ತ ಆಕರ್ಷಿಸುತ್ತದೆ.

ಒಂದು ಅಭಿವೃದ್ಧಿ ಹೊಂದಿದ ಗ್ರಾಮದಲ್ಲಿ ತನ್ನ ಜನರಿಗೆ ಅಗತ್ಯವಾಗಿ ಬೇಕಾದ ಮೂಲ ಸೌಕರ್ಯಗಳನ್ನು, ಗ್ರಾಮಾಭಿವೃದ್ಧಿಯಲ್ಲಿ ಜನರ ಪಾತ್ರ ಹೀಗೆ ಎಲ್ಲವನ್ನು ಕಣ್ಣಿಗೆ ಕಟ್ಟುವಂತೆ ಕಲಾಕೃತಿಗಳನ್ನು ಮಳಿಗೆಯಲ್ಲಿ ಕಾಣಬಹುದಾಗಿದೆ. ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿರುವ ಈ ಮಳಿಗೆ ಗಾಂಧೀಜಿ ಅವರ ಗ್ರಾಮ ಸ್ವರಾಜ್ ಕನಸನ್ನು ಎತ್ತಿಹಿಡಿದಿದೆ.



ಪಂಚಾಯಿತಿ ಕಟ್ಟೆಯಲ್ಲಿ ಕುಳಿತು ಪತ್ರಿಕೆ ಓದುತ್ತಿರುವುದು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡ್ಯೂಡ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಗ್ರೀನ್ (ಕ) + ಗಿಲ್‌ಮಾಲ್ (ಕ)	2+2 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬಿಳಿಚುಕ್ಕಿ ಹಳ್ಳಿಹಕ್ಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎರಡನೇ ಫಿಡೆ ಚೆಸ್ ಒಲಿಂಪಿಯಾಡ್: ಕನ್ನಡಿಗ ಕಿಶನ್ ಗಂಗೊಳ್ಳಿಗೆ ಚಿನ್ನ



ಬೆಂಗಳೂರು, ಅ.28– ಕನ್ನಡಿಗ ಕಿಶನ್ ಗಂಗೊಳ್ಳಿ ಅವರು ಕಝಕಿಸ್ತಾನದ ಅಸ್ತಾನಾದಲ್ಲಿ ನಡೆದ ದೈಹಿಕ ನ್ಯೂನತೆಯುಳ್ಳವರಿಗಾಗಿ ನಡೆದ ಎರಡನೇ ಫಿಡೆ ಚೆಸ್ ಒಲಿಂಪಿಯಾಡ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಮೂರನೇ ಬೋರ್ಡ್‌ನಲ್ಲಿ ನೀಡಿದ ಉತ್ತಮ ಆಟಕ್ಕೆ ಅವರಿಗೆ ಚಿನ್ನದ ಪದಕ ಒಲಿದಿದೆ.

ಈ ತಿಂಗಳ 19 ರಿಂದ 26ರವರೆಗೆ ನಡೆದ ಟೂರ್ನಿಯಲ್ಲಿ ಅಜೇಯರಾಗುಳಿದ ಅವರು ಆರು ಸುತ್ತುಗಳಿಂದ ಐದು ಪಾಯಿಂಟ್ಸ್ (4 ಗೆಲುವು, 2 ಡ್ರಾ) ಕಲೆಹಾಕಿದರು. ಆದರೆ ಭಾರತ ತಂಡ 12ನೇ ಸ್ಥಾನ ಗಳಿಸಲಷ್ಟೇ ಶಕ್ತವಾಯಿತು. 2023ರಲ್ಲಿ ನಡೆದ ಈ ಹಿಂದಿನ ಒಲಿಂಪಿಯಾಡ್‌ನಲ್ಲಿ ಭಾರತ ನಾಲ್ಕನೇ ಸ್ಥಾನ ಪಡೆದಿತ್ತು.

ಈ ಬಾರಿ 34 ತಂಡಗಳು ಕಣದಲ್ಲಿದ್ದವು. ರಷ್ಯಾ ಆಟಗಾರರಿಗೆ ಫಿಡೆ (1) ತಂಡ ಮೊದಲ ಸ್ಥಾನ ಪಡೆದರೆ, ಪೋಲೆಂಡ್ ಎರಡನೇ ಸ್ಥಾನ ಗಳಿಸಿತು.

ತಿಂಗಳ ಹಿಂದೆಷ್ಟೇ ಬೆಂಗಳೂರಿನಲ್ಲಿ ಸಹಕಾರ ಲೆಕ್ಕಪರಿಶೋಧಕ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡ ಕಿಶನ್ ಅವರು ಸರ್ಬಿಯಾದಲ್ಲಿ ನಡೆದಿದ್ದ ಮೊದಲ ಒಲಿಂಪಿಯಾಡ್‌ನಲ್ಲಿ ವೈಯಕ್ತಿಕ ಆಟಕ್ಕೆ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಚಿನ್ನದ ಪದಕ ನಿರೀಕ್ಷಿಸಿರಲಿಲ್ಲ. ಕರ್ತವ್ಯಕ್ಕೆ ಹಾಜರಾದ ಬಳಿಕ ಈ ಟೂರ್ನಿಗೆ ಸಿದ್ಧತೆ ನಡೆಸಲು ನನಗೆ ಎರಡು ವಾರಗಳ ಅವಧಿಯಷ್ಟೇ ಲಭಿಸಿತ್ತು ಎಂದು ಶಿವಮೊಗ್ಗದವರಾದ ಕಿಶನ್ ಮಾಧ್ಯಮಕ್ಕೆ ತಿಳಿಸಿದರು.

ವಿದ್ಯಾರ್ಥಿಗಳ ಸಂಸತ್ ವೀಕ್ಷಣೆ ಪ್ರವಾಸಕ್ಕೆ ಹಸಿರು ನಿಶಾನೆ



'ಯೂತ್ ಫಾರ್ ಗವರ್ನೆನ್ಸ್ ಫೆಲೋಶಿಪ್(ವೈ4ಜಿ)' ಪಡೆದ ಮೈಸೂರಿನ ವಿವಿಧ ಕಾಲೇಜಿನ 26 ವಿದ್ಯಾರ್ಥಿಗಳ ಸಂಸತ್ ವೀಕ್ಷಣೆ ಪ್ರವಾಸಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಮಂಗಳವಾರ ಚಾಲನೆ ನೀಡಿದರು.

ಮೈಸೂರು, ಅ.28(ಎಂಕೆ)– ಜರ್ಮನಿಯ ಹ್ಯಾನ್ಸ್ ಸೀಡೆಲ್ ಫೌಂಡೇಶನ್ (ಹೆಚ್‌ಎಸ್‌ಎಫ್) ಹಾಗೂ ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (ಗ್ರಾಮ್–ಜಿಆರ್‌ಎಎಂ) ಸಹಯೋಗದೊಂದಿಗೆ 'ಯೂತ್ ಫಾರ್ ಗವರ್ನೆನ್ಸ್ ಫೆಲೋಶಿಪ್(ವೈ4ಜಿ)' ಪಡೆದ ಮೈಸೂರಿನ ವಿವಿಧ ಕಾಲೇಜಿನ 26 ವಿದ್ಯಾರ್ಥಿಗಳ ಸಂಸತ್ ವೀಕ್ಷಣೆ ಪ್ರವಾಸಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಮಂಗಳವಾರ ಚಾಲನೆ ನೀಡಿದರು.

ಮೈಸೂರಿನ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಮಂಗಳವಾರ ಮುಂಜಾನೆ ಪ್ರವಾಸಕ್ಕೆ ಸಿದ್ದವಾಗಿದ್ದ ಬಸ್‌ಗಳಿಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಲಾಯಿತು. 'ಪಂಚಾಯತ್‌ನಿಂದ ಸಂಸತ್'ಗೆ ಪರಿಕಲ್ಪನೆಯಲ್ಲಿ ಗ್ರಾಮ ಪಂಚಾಯತ್‌ನಿಂದ ಸಂಸತ್‌ವರೆಗೆ ದೇಶದ ಆಡಳಿತ ವ್ಯವಸ್ಥೆಯನ್ನು ತಿಳಿಸುವ ಉದ್ದೇಶಿತ ಪ್ರವಾಸ ಇದಾಗಿದೆ.

ಭಾರತದ ಸಂಸತ್ ಭವನ ವೀಕ್ಷಣೆ ಮತ್ತು ಅಲ್ಲಿನ ಆಡಳಿತ ವ್ಯವಸ್ಥೆ ತಿಳಿಯುವುದು. ರಾಷ್ಟ್ರಪತಿ ಭವನ, ನೀತಿ ಆಯೋಗ, ಸಾಮರ್ಥ್ಯ ನಿರ್ಮಾಣ ಆಯೋಗ ವೀಕ್ಷಣೆ ಮತ್ತು ಮಾಹಿತಿ ಪಡೆಯುವುದರೊಂದಿಗೆ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದಲ್ಲಿ ಚಿಂತಕರು ಮತ್ತು ಆಡಳಿತ ತಜ್ಞರೊಂದಿಗೆ ಸಂವಾದದಲ್ಲಿ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಹಾಗೆಯೇ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ ಡಾ.ವಿನಯ್ ಸಹಸ್ರಬುದ್ಧೆ ಮತ್ತು ಬಿನಯ್ ಸಿಂಗ್ ಮತ್ತಿತರರೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ಗ್ರಾಮ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಆರ್.ಬಸವರಾಜು ತಿಳಿಸಿದರು. ಗ್ರಾಮ್‌ನ ಭಗವಾನ್ ಬಿದರಕೋಟೆ, ಪವನ್ ಬೊಮ್ಮನಹಳ್ಳಿ, ಫಾತಿಮಾ ಮೇರಿ, ಶಿಲ್ಪ ಮತ್ತಿತರರಿದ್ದರು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಅ. 28– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ. 30 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಬೆಳೆಗೆ ಡ್ರೋಣ್ ಬಳಸಿ ಔಷಧ ಸಿಂಪಡಿಸುವ ಪ್ರಾತ್ಯಕ್ಷಿಕೆ



ಮೈಸೂರು ತಾಲೂಕು ಸಿದ್ದರಾಮನಹುಂಡಿ ಗ್ರಾಮದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಭತ್ತದ ಬೆಳೆಗೆ ಕಾಡುವ ಕೀಟ ಬಾಧೆ ನಿಯಂತ್ರಣಕ್ಕೆ ಡ್ರೋನ್ ಬಳಸಿ ಔಷಧ ಸಿಂಪಡಿಸುವ ಪ್ರಾತ್ಯಕ್ಷಿಕೆ ನಡೆಯಿತು.

ಮೈಸೂರು,ಅ.28(ಎಂಟಿವೈ)– ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಭತ್ತದ ಬೆಳೆಗೆ ಕಾಡುವ ಕೀಟ ಬಾಧೆ ನಿಯಂತ್ರಣಕ್ಕೆ ಡ್ರೋಣ್ ಬಳಸುವಿಕೆ ಪ್ರಾತ್ಯಕ್ಷಿಕೆಯನ್ನು ರೈತರಿಗೆ ನೀಡುವ ಮೂಲಕ ಮಾಹಿತಿ ನೀಡಲಾಯಿತು.

ಮೈಸೂರು ತಾಲೂಕಿನ ಸಿದ್ದರಾಮನಹುಂಡಿ ಗ್ರಾಮದಲ್ಲಿ ಮಂಗಳವಾರ ಮೈಸೂರಿನ ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ 2025–26ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಆಯೋಜಿಸಿದ್ದ 'ಭತ್ತದ ಬೆಳೆಯಲ್ಲಿ ಡ್ರೋನ್ ಬಳಕೆಯ ಮಹತ್ವ ಹಾಗೂ ಸಮಗ್ರ ಪೀಡೆ ನಿರ್ವಹಣೆ ಕುರಿತು' ಒಂದು ದಿನದ ಹೊರಾಂಗಣ ತರಬೇತಿಗೆ ಕಾರ್ಯಕ್ರಮದಲ್ಲಿ ಭತ್ತದ ಗದ್ದೆಗಳಿಗೆ ಸುಧಾರಿತ ತಂತ್ರಜ್ಞಾನವುಳ್ಳ ಡ್ರೋನ್ ಮೂಲಕ ಔಷಧಿ ಸಿಂಪಡಣೆ ಮಾಡುವ ವಿಧಾನ ಹಾಗೂ ಅದರಿಂದ ರೈತರಿಗೆ ಆಗುವ ಪ್ರಯೋಜನಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಲಾಯಿತು.

ತರಬೇತಿ ಕಾರ್ಯಾಗಾರವನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರಾದ ಹೆಚ್.ಬಿ. ಮಧುಲತಾ ಉದ್ಘಾಟಿಸಿ ಮಾತನಾಡಿ, ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನದ ಅಳವಡಿಕೆಯಿಂದ ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ಗುಣಮಟ್ಟದ ಇಳುವರಿ ಪಡೆಯಬಹುದು. ಕಡಿಮೆ ಅವಧಿಯಲ್ಲಿ ಕೀಟನಾಶಕ ಮತ್ತು ರಸಗೊಬ್ಬರ ಮತ್ತು ಪೋಷಕಾಂಶಗಳನ್ನು ಡ್ರೋನ್ ಮೂಲಕ ಬೆಳೆಗಳ ಮೇಲೆ ನಿಖರವಾಗಿ ಸಿಂಪಡಿಸಬಹುದು ಎಂದು ತಿಳಿಸಿದರು.

ಸಸ್ಯರೋಗ ಶಾಸ್ತ್ರಜ್ಞೆ ಡಾ.ಆರ್. ಎನ್. ಪುಷ್ಪಾ ಮಾತನಾಡಿ, ಇತ್ತೀಚಿನ ಹವಾಮಾನ ವೈಪರೀತ್ಯತೆಯಿಂದ ಭತ್ತದ ಬೆಳೆಯಲ್ಲಿ ಕುತ್ತಿಗೆ ಬೆಂಕಿರೋಗ, ತೆನೆಕವಚ ಕೊಳೆ ರೋಗದ ಬಾಧೆ ಹಾಗೂ ಕೀಟಗಳಾದ ತೆನೆ ತಿಗಣೆ ಮತ್ತು ಕಂದು ಜಿಗಿ ಹುಳುವಿನ ಹಾವಳಿಯ ಸಾಧ್ಯತೆ ಇದೆ ಎಂದರಲ್ಲದೆ, ಭತ್ತದ ಬಾಧೆ ನಿರ್ವಹಣಾ ಕ್ರಮ, ಭತ್ತದಲ್ಲಿ ಮೇಲುಗೊಬ್ಬರ ಪೋಷಕಾಂಶಗಳ ನಿರ್ವಹಣೆಯ ಉಪಯೋಗ ಹಾಗೂ ಪೀಡೆನಾಶಕ ಶೇಷಾಂಶಗಳ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ವಿವರಿಸಿದರು.

ವರುಣಾ ಹೋಬಳಿಯ ಕೃಷಿ ಅಧಿಕಾರಿ ಆನಂದ್ ಕುಮಾರ್ ಮಾತನಾಡಿ, ಕೃಷಿ ಇಲಾಖೆಯಲ್ಲಿ ದೊರೆಯುವ ಸಸ್ಯ ಸಂರಕ್ಷಣಾ ಪರಿಕರಗಳ ಮತ್ತು ಕೃಷಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ವೇಳೆ ಈಗಲ್ ಐಡ್ರೋನ್ ಸಂಸ್ಥೆಯ ಪ್ರತಿನಿಧಿಗಳಾದ ಶಶಿಕುಮಾರ್ ಹಾಗೂ ಕಾರ್ತಿಕ್ ನ್ಯಾನೋ ಡಿಎಪಿಯನ್ನು ಡ್ರೋನ್ ಬಳಸಿ ಸಿಂಪಡಣೆ ಮಾಡುವ ಪ್ರಾತ್ಯಕ್ಷಿಕೆ ನೀಡಿದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಯಡಕೊಳ ಗ್ರಾ.ಪಂ. ಅಧ್ಯಕ್ಷೆ ಕುಸುಮಾ ವಹಿಸಿದ್ದರು. ಗ್ರಾಪಂ ಸದಸ್ಯರಾದ ಕುಮಾರ್, ರವಿ, ಕೆಂಪರಾಮು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಶ್ವನಾಥ್ ಮತ್ತು ತಾಪಂ ಮಾಜಿ ಸದಸ್ಯ ಮಹೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಡಿ.ಕೆ.ಶಿವಕುಮಾರ್ ಭೇಟಿಯಾದ ತೇಜಸ್ವಿ ಸೂರ್ಯ

ಬೆಂಗಳೂರು ಸುರಂಗ ಯೋಜನೆ ಕೈಬಿಡುವಂತೆ ಆಗ್ರಹ



ಬೆಂಗಳೂರು, ಅ.28– ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಮಂಗಳವಾರ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ, ನಗರದಲ್ಲಿ ಪ್ರಸ್ತಾವಿತ ಸುರಂಗ ರಸ್ತೆ ಯೋಜನೆಯನ್ನು ಕೈಬಿಡುವಂತೆ ಮನವಿ ಮಾಡಿದರು ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮೆಟ್ರೋ ಮತ್ತು ಉಪನಗರ ರೈಲು ಜಾಲಗಳ ವಿಸ್ತರಣೆ ಮಾಡಬೇಕು ಎಂದು ಪ್ರತಿಪಾದಿಸಿದರು.

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಅವರೊಂದಿಗಿನ ಒಂದು ಗಂಟೆಯ ಸಭೆಯು 'ಬಹಳ ಫಲಪ್ರದ' ಎಂದಿರುವ ಬಿಜೆಪಿ ಸಂಸದ, ಬೆಂಗಳೂರು ಟ್ರಾಫಿಕ್, ಗುಂಡಿ ಸಮಸ್ಯೆ ಬಗ್ಗೆ ವಿಸ್ತೃತವಾದ ಚರ್ಚೆ ಆಯ್ತು. ಬಹಳ ಸೌಹಾರ್ದಯುತವಾಗಿ ಚರ್ಚೆ ನಡೆಯಿತು. ಶಾಂತವಾಗಿ ನಾನು ಕೊಟ್ಟ ಪ್ರೆಸೆಂಟೇಶನ್ ಆಲಿಸಿದರು. ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ ಎಂದು ಹೇಳಿದ್ದಾರೆ.

ನಗರದಲ್ಲಿ ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸುವುದು ಹೆಚ್ಚು ಪರಿಣಾಮಕಾರಿಯಾಗಿದೆ. ಟ್ರಾಫಿಕ್ ಕಡಿಮೆ ಆಗಬೇಕು ಅಂದರೆ ನಮ್ಮ ರಸ್ತೆಗಳಲ್ಲಿರುವ ವೆಹಿಕಲ್‌ಗಳ ಸಂಖ್ಯೆ ಕಡಿಮೆಯಾಗಬೇಕು. ಶೇ.70ರಷ್ಟು ಜನ ಸಾರ್ವಜನಿಕ ಸಾರಿಗೆ ಉಪಯೋಗ ಮಾಡುವಂತೆ ಮಾಡಬೇಕು ಎಂದರು ತೇಜಸ್ವಿ ಸೂರ್ಯ ಹೇಳಿದ್ದಾರೆ.

ಕಾರು ಮಾತ್ರ ಸಂಚರಿಸುವ ಸುರಂಗ ಯೋಜನೆಗೆ ಖರ್ಚು ಮಾಡುವ ಹಣವನ್ನು ಮೆಟ್ರೋದಂತಹ ಸಾಮೂಹಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಗಳಿಗೆ ಖರ್ಚು ಮಾಡಬೇಕು ಎಂದು ನಾನು ವಿನಂತಿಸಿದ್ದೇನೆ. ಕಾರುಗಳಿಗಿಂತ ಹೆಚ್ಚಿನ ಜನರನ್ನು ಸ್ಥಳಾಂತರಿಸುವುದು ನಮ್ಮ ನೀತಿಯಾಗಿರಬೇಕು ಎಂದು ವರದಿಗಾರರಿಗೆ ತಿಳಿಸಿದ್ದಾರೆ.

300 ಕಿ.ಮೀ ಮೆಟ್ರೋ ಸಂಪರ್ಕ ಮಾಡಿಕೊಡಬೇಕು. 3 ನಿಮಿಷಕ್ಕೊಂದು ಮೆಟ್ರೋ ಸಿಗುವಂತೆ ಮಾಡಬೇಕು. ಜನ ಇರುವ ಜಾಗದಿಂದ 5 ನಿಮಿಷ ನಡೆದುಕೊಂಡು ಹೋದರೆ ಮೆಟ್ರೋ ಸ್ಟೇಷನ್ ಸಿಗಬೇಕು. ಮಾಸ್ಟರ್ ಪ್ಲ್ಯಾನ್‌ನಲ್ಲಿರುವಂತೆ 300 ಕಿ.ಮೀ ಸಬ್ ಅರ್ಬನ್ ರೈಲು ಕೂಡ ಬೆಂಗಳೂರಿಗೆ ಅವಶ್ಯಕತೆ ಇದೆ. ಸಬ್ ಅರ್ಬನ್ ರೈಲು ಮತ್ತು ಮೆಟ್ರೋ ಎರಡು ಕಂಪ್ಲೀಟ್ ಆದ್ರೆ 600 ಕಿ.ಮೀ ಸಾರ್ವಜನಿಕ ಸಾರಿಗೆ ಸಿಗುತ್ತೆ ಇದರಿಂದ ಟ್ರಾಫಿಕ್ ಕಡಿಮೆ ಆಗುತ್ತೆ ಅನ್ನೋ ಸಲಹೆ ಕೊಟ್ಟಿದ್ದೇನೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

ಆದಾಗ್ಯೂ, ಪ್ರಸ್ತಾವಿತ ಸುರಂಗ ರಸ್ತೆಯನ್ನು ಸಮರ್ಥಿಸಿಕೊಂಡ ಡಿ.ಕೆ. ಶಿವಕುಮಾರ್ ಅವರು, 'ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳ'ಕ್ಕೆ' ನೇರ ಪ್ರವೇಶವನ್ನು ಒದಗಿಸುತ್ತದೆ ಎಂದು ಹೇಳಿದ್ದಾರೆ.

ಒಟ್ಟು 16.75 ಕಿಮೀ ಸಿಗ್ನಲ್–ಮುಕ್ತ ಸುರಂಗವು ಪ್ರಯಾಣಿಕರಿಗೆ 25ಕ್ಕೂ ಹೆಚ್ಚು ಸಂಚಾರ ಅಡಚಣೆಗಳನ್ನು ದಾಟಲು ಅನುವು ಮಾಡಿಕೊಡುತ್ತದೆ ಮತ್ತು ಇದು ಪ್ರತಿದಿನ 45 ನಿಮಿಷಗಳಿಗಿಂತ ಹೆಚ್ಚು ಪ್ರಯಾಣದ ಸಮಯವನ್ನು ಉಳಿಸುತ್ತದೆ ಎಂದಿದ್ದಾರೆ.

ಬೆಂಗಳೂರನ್ನು ಟೀಕಿಸಿದವರಿಗೆ ಮರ್ಸಿಡಿಸ್ ಬೆಂಜ್ ಸಿಇಒ ಮೆಚ್ಚುಗೆಯ ವಿಡಿಯೋ ಅಪ್ಲೋಡ್ ಮಾಡಿ ತಿವಿದ ಡಿಕೆಶಿ



ಬೆಂಗಳೂರು: ಟ್ರಾಫಿಕ್ ಕಿರಿಕಿರಿ, ರಸ್ತೆ ಗುಂಡಿಗಳ ಬಗ್ಗೆ ನಿರಂತರವಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಮಾಡಿ ಉದ್ಯಮಿಗಳು ಸರ್ಕಾರವನ್ನು ತಿವಿಯುತ್ತಿದ್ದರು. ಈ ಮಧ್ಯೆ ಮರ್ಸಿಡಿಸ್ ಬೆಂಜ್ ಸಿಇಒ ಒಲಾ ಕ್ಯಾಲೆನಿಯಸ್ ಬೆಂಗಳೂರನ್ನು ಹಾಡಿ–ಹೊಗಳಿದ್ದರು. ಒಲಾ ಕ್ಯಾಲೆನಿಯಸ್ ವಿಡಿಯೋ ತುಣುಕನ್ನು ಡಿಸಿಎಂ ಡಿಕೆ ಶಿವಕುಮಾರ್ ಪೋಸ್ಟ್ ಮಾಡಿ ವಿರೋಧಿಗಳಿಗೆ ಟಾಂಗ್ ಕೊಟ್ಟಿದ್ದಾರೆ.

ಒಲಾ ಕ್ಯಾಲೆನಿಯಸ್ ಹೇಳಿದ್ದೇನು: ನೀವು ಜಗತ್ತಿನೆಲ್ಲೆಡೆ ಹೊಸ ಪ್ರತಿಭೆಗಳನ್ನು ಸ್ವಾಗತಿಸಬೇಕು. ನಾನು ಬೆಂಗಳೂರಿಗೆ ಹೋದಾಗಲೆಲ್ಲಾ, ಎರಡು ಪಟ್ಟು ಉತ್ಸಾಹದೊಂದಿಗೆ ಮರಳಿ ಬರುತ್ತೇನೆ. ಈ ನಗರದಲ್ಲಿರುವ ಸಾಫ್ಟ್‌ವೇರ್ ಪ್ರತಿಭಾ ಸಮೂಹವು ಬಹಳ ಅದ್ಭುತವಾಗಿದೆ.

ಬೆಂಗಳೂರಿನಲ್ಲಿ ಬಹಳ ಚೆನ್ನಾಗಿ ಜರ್ಮನ್ ಭಾಷೆ ಮಾತನಾಡುವವರನ್ನು ಕಂಡಿದ್ದೇನೆ. ಅಂಥವರು ಸಿಕ್ಕಾಗ, ತಾವು ಜರ್ಮನಿಯಲ್ಲಿ ಎಲ್ಲಿ ಓದಿದ್ದು ಅಂತ ಕೇಳುತ್ತೇನೆ. ಆದರೆ ಅವರು ತಾನು ಜರ್ಮನಿಗೆ ಯಾವತ್ತೂ ಹೋಗಿಯೇ ಇಲ್ಲ ಎನ್ನುತ್ತಾರೆ. ನನಗೆ ಇಂಥ ಸ್ಫೂರ್ತಿಗಳೇ ಬೇಕು. ಇಂಥ ಪ್ರತಿಭೆಗಳು ಇರುವ ಕಡೆ ನಾವು ಹೋಗುತ್ತೇವೆ ಎಂದು ಒಲಾ ಕ್ಯಾಲೆನಿಯಸ್ ಹೇಳಿದ್ದಾರೆ.

ಡಿಕೆಶಿ ಹೇಳಿದ್ದೇನು: ಬೆಂಗಳೂರಿನ ಅಸಾಧಾರಣ ಪ್ರತಿಭೆಯ ಬಗ್ಗೆ ಮರ್ಸಿಡಿಸ್–ಬೆನ್ಜ್ ಸಿಇಒ ಓಲಾ ಕಾಲೆನಿಯಸ್ ಅವರ ಮಾತುಗಳು ಜಾಗತಿಕ ನಾವೀನ್ಯತೆ ಕೇಂದ್ರವಾಗಿ ನಗರ ಬೆಳೆಯುತ್ತಿರುವ ನಿಲುವನ್ನು ಪ್ರತಿಬಿಂಬಿಸುತ್ತವೆ. ಇಲ್ಲಿಗೆ ಪ್ರತಿ ಭೇಟಿಯು ಅವರ ಶಕ್ತಿಯನ್ನು ದ್ವಿಗುಣಗೊಳಿಸುತ್ತದೆ ಎಂಬ ಅವರ ಮೆಚ್ಚುಗೆಯು ನಮ್ಮ ಜನರ ಪ್ರತಿಭೆಗೆ ಹೆಮ್ಮೆಯ ಮನ್ನಣೆಯಾಗಿದೆ. ಬೆಂಗಳೂರಿನ ಸೃಜನಶೀಲತೆ, ಪ್ರತಿಭೆ ಮತ್ತು ನಾವೀನ್ಯತೆಯ ಮನೋಭಾವವು ವಿಶ್ವದ ಅತ್ಯುತ್ತಮರಿಗೆ ಸ್ಫೂರ್ತಿ ನೀಡುತ್ತಲೇ ಇದೆ. ಜಾಗತಿಕ ವೇದಿಕೆಯಲ್ಲಿ ಬೆಂಗಳೂರು ಇನ್ನಷ್ಟು ಪ್ರಕಾಶಮಾನವಾಗಿ ಹೊಳೆಯುವಂತೆ ಮಾಡಲು ನಾವು ಶ್ರಮಿಸುತ್ತೇವೆ.

5ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜವರಪ್ಪ ನವರು
ಕುರುಬಾರಹಳ್ಳಿ
ನಿಮ್ಮ ನೆನಪಲ್ಲಿರುವ : ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

WANTED
1.DELIVERY BOYS
With or Without Experience but Having Own Vehicle
2.COUNTER BOYS
With Experience in Working in Retail Medical Stores and Having Own Vehicle.
SEND RESUME TO:
The Manager, Raghulal and Company, Sayyaji Rao Road, Mysore 570001

Vidyavardhaka Sangha (Regd), Mysore
VIDYAVARDHAKA COLLEGE OF ENGINEERING
Autonomous Institute, Accredited by NBA, NAAC with "A" Grade
Gokulam 3rd Stage, Mysuru-570 002

STAFF REQUIRED
TEACHING

ENGG. Dept.
- Professor, Associate Professor in CS&E, AI&ML, Civil Engg: PhD is Compulsory.
- Assistant Professor in CS&E : First Class in BE & M.Tech, Preference will be given to PhDs.

MCA Dept.
- Professor, Associate Professor : Ph.D is Compulsory.
- Assistant Professor : First Class in BE / BCA & MCA, Preference will be given to PhDs.

MBA Dept.
- Assistant Professor : First Class in any graduation & MBA, Specialization in Finance & HR, Preference will be given to PhDs.

- Assistant Physical Education Director : First Class in B.PEd & M.PEd. with KSET/NET and Preference will be given to PhDs.

NON TEACHING
- Accounts Officer : Any graduation / Post graduation professional certifications like the ICAI or equivalent with more than 10 years experience in Accounts Department, Preference will be given to candidate having CA.
- Placement Executives : BE / Any post-graduation with relevant experience.
- Resident Warden for Boys Hostel : Any graduation with relevant experience.


Pay Scale For Teaching – AICTE 7th pay scale as per the College Norms
Non Teaching – State Scale
For further details and to apply visit https://vvce.ac.in/careers

7ನೇ ವರ್ಷದ ಸವಿನೆನಪು



ಶ್ರೀ–ಬಿ.ನಾಗಲಿಂಗು
S/o ಬೋರಯ್ಯ
ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು: ಪತ್ನಿ ವೆಂಕಟಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯ ಹಾಗೂ ಕುಟುಂಬವರ್ಗದವರು
ಜಯನಗರ, ಮೈಸೂರು–14

BECOME A TEACHER
DIPLOMA IN MONTESSORI/ PRIMARY TEACHER TRAINING
FOR SSLC, PUC / ANY DEGREE CANDIDATE
ONLINE COURSE AVAILABLE ADMISSION OPEN



IMKTA TEACHER TRAINING COURSES
INDIA MYSORE
ALPHA INTERNATIONAL SCHOOL
WWW.IMKTA.IN
+91 7829937469

25ನೇ ವರ್ಷದ ಸವಿನೆನಪು



ದಿ|| ಶ್ರೀ ಎಂ. ಸಿದ್ದಪ್ಪ
ನಿಧನ: 29–10–2000
ನೀವು ನಮ್ಮನಗಲಿ ಇಂದಿಗೆ 25 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ನಿಮ್ಮ ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು



A. ವಿಶ್ವನಾಥ ಶೆಟ್ಟಿ
ಅಂಗಡಿ ಬೀದಿ, ನಂಜನಗೂಡು.
ಇಂದಿಗೆ ನೀವು ನಮ್ಮನ್ನಗಲಿ 16 ವರ್ಷಗಳಾದರೂ ನಿಮ್ಮ ನೆನಪು ಸದಾ ಹಸಿರಾಗಿದೆ.
ಇಂತಿ: ಕುಟುಂಬ ವರ್ಗ

ಏಳನೇ ವರ್ಷದ ಪುಣ್ಯಸ್ಮರಣೆ



ಜನನ: 02-10-1951 ಸ್ವರ್ಗಸ್ಥ ದಿನ: 29-10-2018
ಶ್ರೀಮತಿ ಕೆ.ಸಿ.ಸುನಂದಮ್ಮ
ಲೇ|| ಕೆ.ಎನ್.ರಾಘವೇಂದ್ರರವರ ಧರ್ಮಪತ್ನಿ
ಸಿದ್ಧಾರ್ಥನಗರ, ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಾ ನೀವು ತೋರಿದ ಮಾರ್ಗದಲ್ಲಿ ನಡೆಯುತ್ತಿರುವ

ದುಃಖತಪ್ತರು
ಮಕ್ಕಳು, ಮೊಮ್ಮಕ್ಕಳು ಮತ್ತು ಸೊಸೆ
ಡಾ. ಆರ್ ನಾಗಶಯನ
ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ
ಶ್ರೀಮತಿ ಡಾ. ಕವಿತ ಬಿ.ಟಿ., ಐ.ಪಿ.ಎಸ್.,
ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ
ಕು. ನಿಖಿಂಪ ಕೆ.ಎನ್.,
ಚಿ. ಕೃಷ್ಣ ಅತ್ರೇಯ ಕೆ.ಎನ್.,
ಶ್ರೀ ಆರ್. ಲಕ್ಷ್ಮೀಶ ಹಾಗೂ
ಶ್ರೀ ಆರ್. ಶ್ರೀಹರ್ಷ

Kumuda Spa
Best price guaranteed in Hair & Salon services.
SPA & Massage Packages available in most reasonable price.
0821-4193567
9632769550

HOUSE FOR SALE
Architect designed
Near St. Joseph School, Mysore
20x40 @ 38 Lakhs
30x50 @ 71 Lakhs
CALL: 8123387555 7259348777

1% ನೆಟ್ ಪ್ರಾಫಿಟ್
1 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
2 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
"ಸೀರೆಗಳ ಸಂಭ್ರಮ"
ವಿಳಾಸ : ಕುವೆಂಪುನಗರ KSRTC ಬಸ್ ಡಿಪೋ ಪಕ್ಕ, ಬಸ್ ನಿಲ್ದಾಣ, ಮೈಸೂರು
ಸಂಪರ್ಕಿಸಿ: 9980620678, 7411749410

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ ಚಿನ್ನಕ್ಕೆ– ₹ 10,800(24CT)
9108146123

ನಗುವನಹಳ್ಳಿ(ಮೈಸೂರು) ಸಮೀಪದಲ್ಲಿರುವ ಪ್ರಸಿದ್ಧ ಆಹಾರ ಉದ್ಯಮಕ್ಕೆ ಲೇಬರ್ ಕನ್ಸಲ್ಟೆಂಟ್ ಮತ್ತು ಸೆಕ್ಯೂರಿಟಿ ಏಜೆನ್ಸಿ ಅಗತ್ಯವಿದೆ. ಆಸಕ್ತ ಸಂಸ್ಥೆಗಳು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಸಂಪರ್ಕ ಸಂಖ್ಯೆ : 9035238711
ಇಮೇಲ್: technoresourceservices@gmail.com

ಹೆಸರು ಬದಲಾವಣೆ ಪ್ರಕಟಣೆ

ನಾನು ಚೇತನ್ ದತ್ತ ಕುಲಕರ್ಣಿ, ವಿಳಾಸ : ಸಿ305, ಮನಸಾ ಕ್ಯಾಸಲ್, ಯೋಗಾಶ್ರಮ ರಸ್ತೆ, ಹಿಂಕಲ್, ಮೈಸೂರು–570017, ಈ ಮೂಲಕ ತಿಳಿಸುತ್ತೇನೆ : ನನ್ನ ಮಗಳ ಹೆಸರು ಇರಾ ಯಿಂದ ಇರಾ ಚೇತನ್ ಕುಲಕರ್ಣಿ ಎಂದು ಬದಲಾಯಿಸಲಾಗಿದೆ. ಈ ಬದಲಾವಣೆ IN-KA70489692177069X ಸಂಖ್ಯೆಯ ಅಫಿಡವಿಟ್ (16.10.2025) ಪ್ರಕಾರ, ಶ್ರೀಮತಿ ಎಸ್.ಎನ್.ಹೇಮಲತಾ, ನೋಟರಿ, ಮೈಸೂರು ಅವರಿಂದ ದೃಢೀಕರಿಸಲಾಗಿದೆ. ಇದರಿಂದ ಮುಂದೆ ಅವಳು ಇರಾ ಚೇತನ್ ಕುಲಕರ್ಣಿ ಎಂದು ಗುರುತಿಸಲ್ಪಡುವಳು.

ಸಹಿ/– ಚೇತನ್ ದತ್ತ ಕುಲಕರ್ಣಿ

PRIME LAND FOR SALE
1 ACRE
on Bannur Main Road, from Devegowda Circle Ring Road 12kms to Mysore.
SUITABLE FOR :
Hotel, Club, Resort, Golf Resort, Villa Residence, Farm House.
Call: 99160 13715 / 95384 68799

HOUSE FOR SALE IN POLICE LAYOUT
As per your requirement Architect designed
20x30 House at 57 lakhs
20x40 House at 76 lakhs
30x40 House at 108 lakhs
Call: 9663906675

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಚೆತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್ 90713 86615 95133 01854
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

WE ARE HIRING!
Near Sadahalli Gate Bangalore
7625081008
JOIN OUR TEAM

Positions Available	Min. Experience
GM / Operations Manager	2+ years
Revenue Manager	2+ years
Food & Beverage Manager	2+ years
Reservation Manager	2+ years
Assistant Front Office Manager	1+ years
Duty Manager	1+ years
South Indian Chef (Commi 2 Level)	1+ years
Bakery Chef (Commi 3 Level)	1+ years
Front Office Associates	1+ years
Store Executive	1-2 years

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ
3 ಸಿಬ್ಬಂದಿ, ಕರ್ತವ್ಯಗಳು : ತರಕಾರಿ ಹೆಚ್ಚುವುದು, ರೊಟ್ಟಿ ಮಾಡುವುದು, ಸ್ವಚ್ಛಗೊಳಿಸುವುದು, ಪಾಳಿಗಳು : ಬೆಳಿಗ್ಗೆ 10 ರಿಂದ ಸಂಜೆ 6/ ಮಧ್ಯಾಹ್ನ 2 ರಿಂದ ರಾತ್ರಿ 10.
9986758555
ನೇರವಾಗಿ ಭೇಟಿ ನೀಡಿ : 524, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು

ಕೆಲಸಕ್ಕೆ ಬೇಕಾಗಿದ್ದಾರೆ
Aee Bee auto LPG gas ಬಂಕ್
ನೂತನವಾಗಿ ಪ್ರಾರಂಭವಾಗಿದೆ
ಸ್ಥಳ : ನಂಜುಮಳಿಗೆ ಸರ್ಕಲ್, ಮೈಸೂರು
ಮಹಿಳೆ : ಕ್ಯಾಷಿಯರ್ (ವಿದ್ಯಾರ್ಹತೆ : ಪಿಯುಸಿ)
ಪುರುಷ : ಅಕೌಂಟೆಂಟ್ಸ್, ಟ್ಯಾಲಿ
ಅನುಭವವುಳ್ಳ ಗ್ಯಾಸ್ ಫಿಲ್ಲಿಂಗ್ ಪುರುಷ ಹಾಗೂ ಮಹಿಳೆಯರು ಕೂಡಲೇ ಬೇಕಾಗಿದ್ದಾರೆ ಸಂಪರ್ಕಿಸಿ
ಮೊಬೈಲ್ : 9035217205

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218
ಇ ಮೇಲ್:–itstaff_ulb_virajpet@yahoo.com
ವೆಬ್ ಸೈಟ್:– www.virajpettown.mrc.gov.in ದೂರವಾಣಿ ಸಂಖ್ಯೆ:– 08274–257332

ಕ್ರ.ಸಂ.ಪು.ಪ.ವಿ/ಎಸ್.ಎಫ್.ಸಿ.ವಿ.ಅ./ಟೆ–08/2025–26 ದಿನಾಂಕ: 27/10/2025.

"ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2024–25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1 ರ ನಿಯಮಗಳನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1.	ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	28/10/2025 ರಿಂದ 11/11/2025 ಸಂಜೆ 17:30 ಗಂಟೆಗೆ
2.	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	11/11/2025 ಸಂಜೆ 17:30 ಗಂಟೆವರೆಗೆ
3.	ಟೆಂಡರ್ ತೆರೆಯುವ ದಿನಾಂಕ	12/11/2025 ಬೆಳಗ್ಗೆ 11.30 ಗಂಟೆಯ ನಂತರ
4.	ಟೆಂಡರುಗಳನ್ನು ತೆರೆಯುವ ಸ್ಥಳ	ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/– ಶ್ರೀಮತಿ. ಎಂ.ಕೆ ದೇಚಮ್ಮನವರು, ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/–ಶ್ರೀಮತಿ. ಫಸಿಹಾ ತಬಸಮ್, ಉಪಾಧ್ಯಕ್ಷರು ಪುರಸಭೆ, ವಿರಾಜಪೇಟೆ.
ಸಹಿ/– ಶ್ರೀ ಎಂ.ಕೆ ಅಬ್ದುಲ್ ಜಲೀಲ್, ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/– ಶ್ರೀ ನಾಚಪ್ಪ ಪಿ.ಕೆ, ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ದೂ: 0821–2443347, ಇ–ಮೇಲ್: eemidmysore@yahoo.co.in

ಸಂಖ್ಯೆ: ಟೆಂಡರ್–19/2025–26 ದಿನಾಂಕ: 27.10.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–1 ಮತ್ತು 2ರ ರೀತ್ಯ ಒಟ್ಟು 43 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ 3.35 ಲಕ್ಷಗಳು, ಮತ್ತು ಗರಿಷ್ಠ ಮೊತ್ತ ರೂ 40.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ. 0.045 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ 0.80 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: 04.11.2025, ಸಂಜೆ 5.30ರೊಳಗೆ ಪಡೆಯಬಹುದಾಗಿರುತ್ತದೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: 05.11.2025 ಸಂಜೆ 5.30 ಗಂಟೆಗೆ. ಬಿಡ್ ತೆರೆಯುವ ದಿನಾಂಕ: 10.11.2025ರ ಬೆಳಿಗ್ಗೆ 11.00 ಗಂಟೆಯ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ.ವಿಭಾಗ, ಮೈಸೂರು
DIPR/MYS/1135/SA/2025-26

ಸಾರ್ವಜನಿಕ ಪ್ರಕಟಣೆ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ ಕುಲಗಾಣ ಗ್ರಾಮದ ಸ.ನಂ.188 ರ ವಿಸ್ತೀರ್ಣ 4.31 ಗುಂಟೆ (ಖರಾಬು ಸೇರಿದಂತೆ) ಮತ್ತು ಸ.ನಂ.189/1 ರ ವಿಸ್ತೀರ್ಣ 4.03 ಗುಂಟೆ (ಖರಾಬು ಸೇರಿದಂತೆ) ಜಮೀನುಗಳನ್ನು ನನ್ನ ಕಕ್ಷಿದಾರರಾದ ಶ್ರೀ ಅಮರ ನಾರಾಯಣ.ಆರ್. ಮತ್ತು ಇವರ ಕುಟುಂಬದವರು ಶುದ್ಧ ಕ್ರಯಕ್ಕೆ ಈ ಜಮೀನಿನ ಮಾಲೀಕರಾದ ರಮೇಶ್ ರವರಿಂದ ಖರೀದಿಸುತ್ತಿದ್ದು, ಈ ಸ್ವತ್ತುಗಳ ಜಮೀನುಗಳಿಗೆ ಸಂಬಂಧ ಪಟ್ಟವರು ತಂಟೆ ತಕರಾರು, ಆಧಾರ, ಭೋಗ್ಯ, ಕ್ರಯದ ಒಪ್ಪಂದ, ಬ್ಯಾಂಕಿನ ಸಾಲ ಹಾಗೂ ಇತರೆ ಋಣಭಾರಗಳು ಯಾರಿಗಾದರೂ ಇದ್ದಲ್ಲಿ ಈ ದಿನಾಂಕ ದಿಂದ 7 ದಿನದ ಒಳಗೆ ಕೆಳಗೆ ತಿಳಿಸಿದ ಮೊಬೈಲ್ ನಂಬರ್‌ಗಳಿಗೆ ಕರೆ ಮಾಡಿ ತಿಳಿಸತಕ್ಕದ್ದು.

ಷೆಡ್ಯೂಲ್

1) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಹರವೆ ಹೋಬಳಿ, ಕುಲಗಾಣ ಗ್ರಾಮಕ್ಕೆ ಸೇರಿದ್ದು, ಖುಷ್ಕಿ ಭಾಗಾಯ್ತು ಸ.ನಂ.189/1 ವಿಸ್ತೀರ್ಣ 4 ಎಕರೆ 03 ಗುಂಟೆ ಪೈಕಿ ಖರಾಬು 0.12 ಗುಂಟೆ ಉಳಿಕೆ ಚಾತಾ ವಿಸ್ತೀರ್ಣ 3 ಎಕರೆ 31 ಗುಂಟೆ ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕುಬಂದಿ:–ಪೂರ್ವಕ್ಕೆ: ಪುಟ್ಟಬಸಪ್ಪ ಬಿನ್ ಬಸಪ್ಪರವರ ಜಮೀನು; ಪಶ್ಚಿಮಕ್ಕೆ :ಅಮರ ನಾರಾಯಣ ಆರ್. ಮತ್ತು ಕುಟುಂಬದವರ ಜಮೀನು; ಉತ್ತರಕ್ಕೆ: ಸ.ನಂ.188 ರ ಜಮೀನು ದಕ್ಷಿಣಕ್ಕೆ: ರಸ್ತೆ
2) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಹರವೆ ಹೋಬಳಿ, ಕುಲಗಾಣ ಗ್ರಾಮಕ್ಕೆ ಸೇರಿದ್ದು, ಖುಷ್ಕಿ ಭಾಗಾಯ್ತು ಸ.ನಂ.188 ವಿಸ್ತೀರ್ಣ 4 ಎಕರೆ 31 ಗುಂಟೆ ಪೈಕಿ ಖರಾಬು 0.06 ಗುಂಟೆ ಉಳಿಕೆ ಚಾತಾ ವಿಸ್ತೀರ್ಣ 4 ಎಕರೆ 25 ಗುಂಟೆ ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕುಬಂದಿ:–ಪೂರ್ವಕ್ಕೆ: ಎಸ್.ಸಿ. ಲಕ್ಷ್ಮಿದೇವಮ್ಮ ಕೋಂ. ಲೇಟ್ ಡಿ.ಗೋವಿಂದ ನಾಯ್ಕರವರ ಜಮೀನು; ಪಶ್ಚಿಮಕ್ಕೆ : ಅಮರ ನಾರಾಯಣ ಆರ್. ಮತ್ತು ಕುಟುಂಬದವರ ಜಮೀನು; ಉತ್ತರಕ್ಕೆ : ಸ.ನಂ.184 ರ ಜಮೀನು; ದಕ್ಷಿಣಕ್ಕೆ : ಸ.ನಂ.189/1 ರ ಜಮೀನು.

ಈ ಮಧ್ಯೆ ಇರುವ ಎರಡು ಐಟಂ ನಂ.ಗಳ ಜಮೀನು ಒಟ್ಟು ವಿಸ್ತೀರ್ಣ 8 ಎಕರೆ 16 ಗುಂಟೆ ಜಮೀನು ಸ್ವತ್ತು ಮಾತ್ರ ನಾವು ಕ್ರಯಕ್ಕೆ ತೆಗೆದುಕೊಳ್ಳುವ ಸ್ವತ್ತಾಗಿರುತ್ತದೆ.

Sd/- N.G. Shivananda Swamy, MA LLB., Advocate, KAR/79/2016
#8, Anjanadi Complex, Ramashetty Layout, BM Road, Nanjangudu
Mob: 9845897735
1) ಅಮರ ನಾರಾಯಣ.ಆರ್. :9449817680
2) ಮಿಲನ್.ಎ. :9743849849

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಷೆಡ್ಯೂಲ್ ಸ್ವತ್ತಿನ ಹಾಲಿ ಮಾಲೀಕರಾದ ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಟಿ.ಕೆ. ಲೇಔಟ್, ಜನತಾನಗರ, 3ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಮನೆ ನಂಬರ್ 100 ರಲ್ಲಿ ವಾಸವಾಗಿರುವ ಲೇಟ್. ಲಿಂಗಯ್ಯ ರವರ ಮಗನಾದ ಶ್ರೀ. ಎಲ್. ಜ್ಞಾನೇಶ್ವರ ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಬಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಫಿಲ್ಲೆ ಮೊಹಲ್ಲಾ, ರಾಮಾನುಜ ರಸ್ತೆ, 12 ಮತ್ತು 13 ನೇ ಕ್ರಾಸ್, ನಿವೇಶನ ಸಂಖ್ಯೆ 40, 40/1ಎ, ಎಂ.ಸಿ.ಸಿ. ಸ್ವತ್ತಿನ ಸಂಖ್ಯೆ: 3534750386 (ಸರ್ವೆ ನಂಬರ್ 40 ರಲ್ಲಿ ನಿರ್ಮಿಸಿರುವ ಬಡಾವಣೆ), ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ 9.144018 ಮೀಟರ್, ದಕ್ಷಿಣೋತ್ತರ 12.192024 ಮೀಟರ್‌ಗಳುಳ್ಳ ಪೂರ್ತ ಖಾಲಿ ನಿವೇಶನ ಹಾಗೂ ಇದಕೆ ಚಕ್ಕುಬಂದಿ – ಪೂರ್ವಕ್ಕೆ: ಇದೇ ನಂಬರ್ ಪೈಕಿ ಉಳಿಕೆ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಖಾಸಗಿ ಸ್ವತ್ತು ಹಾಗೂ ದಕ್ಷಿಣಕ್ಕೆ: ಇದೇ ನಂಬರ್ ಪೈಕಿ ಉಳಿಕೆ ಸ್ವತ್ತು.

Sd/-Nagendra Prasad D.G, Advocate, No. 405, 4th Main, Lala Lajpathrai Road,Lalithadripura Post, Police Layout 2nd Stage, T.N. Pura Road, Mysuru-570028. Mobile: 9916139244
e-mail: nagendraprasad.dg@gmail.com
ದಿನಾಂಕ: 28.10.2025, ಸ್ಥಳ : ಮೈಸೂರು

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಶ್ರೀ ಎಂ.ಜಿ. ಮಹೇಶ, 1ನೇ ಮುಖ್ಯ ರಸ್ತೆ, ಮೈಸೂರು ರಸ್ತೆ, ಬ್ಯಾಟರಾಯನಪುರ, ಬೆಂಗಳೂರು ದಕ್ಷಿಣ, ಬೆಂಗಳೂರು–560026 ರವರಿಂದ ನನ್ನ ಕಕ್ಷಿದಾರರಾದ ಶ್ರೀ.ಕರುಣಾಕರ್.ಕೆ, ಲೇಟ್ ಹರಿಯಮರಕಾಲ, 969, 1ನೇ ಮಹಡಿ, 1ನೇ ಕ್ರಾಸ್, ಅಗ್ನಿಹಂಸ ರಸ್ತೆ, ಇ & ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು–570023 (ಆಧಾರ್ ಸಂಖ್ಯೆ 2474 4029 3325 ಹೊಂದಿರುವವರು) ರವರು ಅನುಸೂಚಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ಮುಂದಾಗಿರುವುದು ಸರಿಯಷ್ಟೇ, ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರೂ ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರೂ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲಬಾಕಿ, ಇತರೆ ತಂಟೆ ತಕರಾರು ಇದ್ದಲ್ಲಿ ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ಅಸಲಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನಮ್ಮ ಕಛೇರಿಯನ್ನು ಅಸಲು ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಕೂಡ ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲಬಾಕಿ ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಶುದ್ಧ ಕ್ರಯಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯಬಹುದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 17/1, 17/2, 5/1, 16/1, 18/1, 18/2, 19, 20, 21, 22/2, 22/3, 22/4, 23/1, 23/2, 23/3, 24, 26/1 ಹಾಗೂ 3ರ ಒಟ್ಟು ವಿಸ್ತೀರ್ಣ 45 ಎಕರೆ 25 ಗುಂಟೆ ಜಮೀನಿನಲ್ಲಿ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಮೈಸೂರು ರವರು ನಿರ್ಮಿಸಿ ಅಭಿವೃದ್ಧಿಪಡಿಸಿರುವ ನ್ಯಾಯಾಂಗ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 373 ಹಾಲಿ ಕರ್ನಾಟಕ ಸರ್ಕಾರ ಪೌರಾಡಳಿತ ನಿರ್ದೇಶನಾಲಯ, ಬೋಗಾದಿ ಪಟ್ಟಣ ಪಂಚಾಯಿತಿ ರವರು ನೀಡಿರುವ ನಮೂನೆ–3 (ನಿಯಮ 20)ರ ರೀತ್ಯಾ ಸ್ವತ್ತಿನ ಹಳೇ ನಿವೇಶನ ಸಂಖ್ಯೆ 373 ಮತ್ತು ನಿರ್ಧರಣಾ 313/373, ಸ್ವತ್ತಿನ ಸಂಖ್ಯೆ : 9799342357ನೇ ನಂಬರ್ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ :: ನಿವೇಶನ ಸಂಖ್ಯೆ 374, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ –372, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ –383, ಈ ಮಧ್ಯೆ ಇರುವ ವಿಸ್ತೀರ್ಣ ಪೂರ್ವ–ಪಶ್ಚಿಮ 9.00 ಮೀಟರ್ ಮತ್ತು ದಕ್ಷಿಣ–ಉತ್ತರ 12.00 ಮೀಟರ್, ಒಟ್ಟು 108.00 ಚದರ ಮೀಟರ್ ಖಾಲಿ ನಿವೇಶನ.

ಸಹಿ/– ಚಂದನ್ ಚಂದ್ರ, ಅಡ್ವೋಕೇಟ್
ಮೈಸೂರು ಲಾ ಅಸೋಸಿಯೇಟ್, 5ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಮೈಸೂರು–570009. ಅಡ್ವೋಕೇಟ್ ಕೆಎಆರ್ ಸಂಖ್ಯೆ 3380/23.
ದೂರವಾಣಿ : 9901683219, ಇ–ಮೇಲ್ : adv.chandangowda@gmail.com
ಸ್ಥಳ: ಮೈಸೂರು, ದಿನಾಂಕ: 28–10–2025

ಮೈಸೂರು ಮಿತ್ರ
ಓದುಗರ ಗಮನಕ್ಕೆ